ಸಂಪುಟ: 05 ಸಂಚಿಕೆ: 350 ಪುಟಗಳು: 08 ಬುಧವಾರ 04 ಮಾರ್ಚ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ನಮ್ಮಲ್ಲಿ ನಾವು ವಿಶ್ವಾಸ ಕಳೆದುಕೊಳ್ಳದಿರುವುದು ಮತ್ತು ನಮ್ಮನ್ನು ನಾವು ದ್ವೇಷಿಸದಿರುವುದೇ ನಮ್ಮ ಮೊದಲ ಕರ್ತವ್ಯ

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ವಿನ್ಯಾಸಗಾರರು ಬೇಕಾಗಿದ್ದಾರೆ

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ



ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಚಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ. ವಯೋಮಿತಿ ಗರಿಷ್ಠ 25 ವರ್ಷ.

ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

9448225696

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com

**ಡಿಕೆಶಿ ಹಾಗೂ ನನ್ನದು ಹಾಲು-ಜೇನಿನಂತಹ ಸಂಬಂಧ. ಯಾರಿಗೂ ಹುಳಿ ಹಿಂಡೋಕಾಗಲ್ಲ, ಕಾಂಗ್ರೆಸ್ ಪಕ್ಷದದವರೇ ಸಿಎಂ ಆಗಿರುತ್ತಾರೆ ಎಂದು ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ಡಿಕೆಶಿ ಮೇಲೆ ಕಣ್ಣಿಡಲು ಫೋನ್ ಕದ್ದಾಲಿಕೆ ಆರೋಪ ವಿಚಾರಕ್ಕೆ ಸಿಎಂ ಸಿದ್ದರಾಮಯ್ಯ ಅವರು ಮಾಧ್ಯಮ ಪ್ರಕಟಣೆ ಮೂಲಕ ಸ್ಪಷ್ಟನೆ ನೀಡಿದ್ದು, ಅಶೋಕ್, ಕುಮಾರಸ್ವಾಮಿ ವಿರುದ್ಧ ಕಿಡಿಕಾರಿದ್ದಾರೆ.**

# ಹುಳಿ ಹಿಂಡಲು ಬರಬೇಡಿ

# ಕೈ ನಾಯಕರ ಕಿಡಿ

## ಡಿಕೆಶಿ, ಸಿಎಂ ಹಾಲು-ಜೇನಿನಂತಹ ಸಂಬಂಧ

• ಉದಯವಾಹಿನಿ, ಬೆಂಗಳೂರು

ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧವನ್ನು ಕೆಡಿಸಲು ಆಗಲ್ಲ. ಡಿಕೆಶಿ ಒಲಿಸಿಕೊಳ್ಳುವ ದುರಾಲೋಚನೆ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ರೆ, ಅದು ಹಗಲು ಕನಸು. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸಿಗ. ಸುಳ್ಳು ಕೇಸ್‌ಗಳನ್ನು ಹಾಕಿ, ಜೈಲಿಗೆ ಕಳಿಸಿ ಅವರನ್ನು ಮಣಿಸುವ ಎಲ್ಲಾ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಇದಕ್ಕೆಲ್ಲ ಮಣಿಯದೆ ಅವರು ಪಕ್ಷಕ್ಕೆ ನಿಷ್ಠರಾಗಿ ಉಳಿದವರು. ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ ಎಂದು ಕಿಡಿಕಾರಿದ್ದಾರೆ. ಮಾಧ್ಯಮ ಹೇಳಿಕೆಯಲ್ಲಿ ಸಿದ್ದರಾಮಯ್ಯ ಖಡಕ್ ಸಂದೇಶ


> ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ. ಕಾಂಗ್ರೆಸ್ ಪಕ್ಷ ಎನ್ನುವುದು ಪ್ರಧಾನಿ ಎದುರು ಬಾಯಿ ಬಿಡಲಾಗದೆ ಕೈಕಾಲು ನಡುಗುವಂತಹ ಸ್ಥಿತಿ ಇರುವ ಬಿಜೆಪಿಯೂ ಅಲ್ಲ, ಏಕ ಕುಟುಂಬದ ಅಧಿಪತ್ಯ ಇರುವ ಜೆಡಿಎಸ್ ಕೂಡಾ ಅಲ್ಲ. ನಮ್ಮ ಶಾಸಕರಲ್ಲಿ ಯಾರೂ ಕೂಡಾ ನನ್ನ ಇಲ್ಲವೇ ಡಿ.ಕೆ.ಶಿವಕುಮಾರ್ ಬೆಂಬಲಿಗರಲ್ಲ, ಎಲ್ಲರೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ, ಜೊತೆಯಲ್ಲಿ ಊಟ-ತಿಂಡಿ ಮಾಡುವ ಎಲ್ಲಾ ಸ್ವಾತಂತ್ರ್ಯಗಳು ಅವರಿಗೆ ಇದೆ. ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮವಾಗಿ ಅವರನ್ನೂ ಸೇರಿದಂತೆ ನಾನು ಮತ್ತು ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು. ಇದನ್ನು ನಾವಿಬ್ಬರೂ ಒಂದಲ್ಲ ನೂರು ಬಾರಿ ಹೇಳಿದ್ದೇವೆ. ಇದೇ ಅಂತಿಮ ಸತ್ಯ.

**ನಾನು ಡಿಕೆಶಿ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು**

ರವಾನಿಸಿದ್ದು, ನಮ್ಮದು ಆಂತರಿಕ ಪ್ರಜಾಪ್ರಭುತ್ವ ಇರುವ ಪಕ್ಷ. ನಮ್ಮ ಶಾಸಕರಲ್ಲಿ ಯಾರೂ ಕೂಡಾ ನನ್ನ ಇಲ್ಲವೇ ಡಿ.ಕೆ. ಶಿವಕುಮಾರ್ ಬೆಂಬಲಿಗರಲ್ಲ. ಎಲ್ಲರೂ ಕಾಂಗ್ರೆಸ್ ಪಕ್ಷದ ಬೆಂಬಲಿಗರು. ಪಕ್ಷದ ಶಿಸ್ತಿನ ಚೌಕಟ್ಟಿನೊಳಗೆ ವೈಯಕ್ತಿಕವಾಗಿ ಅಭಿಪ್ರಾಯಗಳನ್ನು ವ್ಯಕ್ತಪಡಿಸ್ತಾರೆ. ಜೊತೆಯಲ್ಲಿ ಊಟ-ತಿಂಡಿ ಮಾಡುವ ಎಲ್ಲಾ ಸ್ವಾತಂತ್ರ್ಯಗಳು ಅವರಿಗೆ ಇದೆ. ಆದರೆ ಯಾವ ಶಾಸಕರು ಏನನ್ನೇ ಹೇಳಿದರೂ ಅಂತಿಮವಾಗಿ ಹೈಕಮಾಂಡ್ ಆದೇಶಕ್ಕೆ ಬದ್ಧವಾಗಿರಬೇಕು. ಶಾಸಕರು ಸೇರಿದಂತೆ ನಾನು ಮತ್ತು ಶಿವಕುಮಾರ್ ನಮ್ಮ ಪಕ್ಷದ ಹೈಕಮಾಂಡ್ ಆದೇಶಕ್ಕೆ ತಲೆಬಾಗುವವರು ಇದನ್ನು ನಾವಿಬ್ಬರೂ ಒಂದಲ್ಲ ನೂರು ಬಾರಿ ಹೇಳಿದ್ದೇವೆ. ಇದೇ ಅಂತಿಮ ಸತ್ಯ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜಕೀಯ ವಿರೋಧಿಗಳಿಗೆ ಸಿಎಂ ಸಿದ್ದರಾಮಯ್ಯ ಚೌಕ್ ಕೊಟ್ಟಿದ್ದು, ಈ

1. ನನ್ನ ಡಿಕೆಶಿಯ ಹಾಲು-ಜೇನಿನ ಸಂಬಂಧಕ್ಕೆ ಹುಳಿ ಹಿಂಡುವ ವಿಫಲ ಯತ್ನ ಬೇಡ;
2. ಎಚ್‌ಡಿಕೆ-ಆರ್ ಅಶೋಕ್ ವಿರುದ್ಧ ಸಿದ್ದರಾಮಯ್ಯ ಗರಂ
3. ಅಧಿಕಾರ ಹಸ್ತಾಂತರದ ಮುನ್ಸೂಚನೆ ನೀಡಿದ್ರಾ ಸಿಎಂ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯೇ ಇರ್ತಾರೆ ಎಂದ ಸಿದ್ದರಾಮಯ್ಯ!




> ತಾ ಕಳ್ಳ ಇತರರ ನಂಬ ಎಂಬ ಗಾದೆಯಂತೆ, ಇದೊಂದು ಅತೃಪ್ತ ಆತ್ಮಗಳ ಹತಾಶ ಹೇಳಿಕೆ. ನಿರುದ್ಯೋಗಿ ವಿರೋಧ ಪಕ್ಷದ ನಾಯಕರು ಇವರು. ನನ್ನ ಮತ್ತು ಡಿ.ಕೆ.ಶಿವಕುಮಾರ್ ನಡುವಿನ ಸಂಬಂಧಕ್ಕೆ ಹುಳಿ ಹಿಂಡಲು ಪ್ರಯತ್ನಿಸುತ್ತಿದ್ದಾರೆ. ಅದರೊಳಗೆ ತುಂಬಿಕೊಂಡಿರುವ ಹುಳಿ ಖಾಲಿಯಾಗಬಹುದೇ ಹೊರತು, ನಮ್ಮ ಹಾಲು-ಜೇನಿನಂತಹ ಸಂಬಂಧದ ಮೇಲೆ ಯಾವ ಪರಿಣಾಮವೂ ಆಗಲ್ಲ , ಇದು ನಿಮ್ಮಿಬ್ಬರಿಗೂ ತಿಳಿದಿರಲಿ ಎಂದು ಟಾಂಗ್ ಕೊಟ್ಟಿದ್ದಾರೆ.

ಅವಧಿಯನ್ನ ಕಾಂಗ್ರೆಸ್ ಪಕ್ಷ ಪೂರ್ಣಗೊಳಿಸಲಿದೆ, ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಮುಖ್ಯಮಂತ್ರಿಯೇ ಇರುತ್ತಾರೆ ಎನ್ನುವ ಮೂಲಕ ಕುತೂಹಲ ಹುಟ್ಟುಹಾಕಿದ್ದಾರೆ. ನಾನೇ ಸಿಎಂ ಆಗಿ ಮುಂದುವರಿಯುತ್ತೇನೆ ಎಂದು ಹೇಳದ ಸಿಎಂ ಸಿದ್ದರಾಮಯ್ಯ ನಡೆ ವಿರೋಧಿಗಳನ್ನ ಚಿತ್ ಮಾಡುವ ತಂತ್ರವೋ ಹೈಕಮಾಂಡ್ ತೀರ್ಮಾನದ ಆತಂಕವೋ ಅಡ್ಡೇಟಿನ ಗೂಗ್ಲಿಯೋ ಎಂಬ ಚರ್ಚೆ ಜೋರಾಗಿದೆ.

**ಸಂಚಲನ ಮೂಡಿಸಿದ ಡಿಸಿಎಂ ನಡೆ**

ಕರ್ನಾಟಕ ರಾಜ್ಯ ಕಾಂಗ್ರೆಸ್‌ನಲ್ಲಿ ಮತ್ತೆ ನಾಯಕತ್ವ ಬದಲಾವಣೆ ಚರ್ಚೆ ಜೋರಾಗಿದೆ. ಸಿಎಂ ಸಿದ್ದ ರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಬಣದ ನಾಯಕರು ಸಭೆ ಮೇಲೆ ಸಭೆ ನಡೆಸುತ್ತಿದ್ದು, ತಮ್ಮ ತಮ್ಮ ನಾಯಕನ ಪರ ಬ್ಯಾಟಿಂಗ್ ಮಾಡುತ್ತಿದ್ದಾರೆ. ಅಲ್ಲದೇ ಈ ಅಧಿಕಾರ ಹಂಚಿಕೆ ಬಿಕ್ಕಟ್ಟಿಗೆ ಹೈಕಮಾಂಡ್ ತೆರೆ ಎಳೆಯಬೇಕೆಂದು ಕೈ ನಾಯಕರು ಪಟ್ಟು ಹಿಡಿದಿದ್ದಾರೆ. ಈ ಎಲ್ಲಾ ಬೆಳವಣಿಗೆಗಳ ನಡುವೆ ಡಿಸಿಎಂ ಡಿಕೆ ಶಿವಕುಮಾರ್ ಡಿನ್ನರ್ ಮೀಟಿಂಗ್ ಕರೆದಿದ್ದಾರೆ. ಹೌದು ಇದೇ ಮಾರ್ಚ್ 10ರಂದು ಖಾಸಗಿ ಹೋಟೆಲ್‌ನಲ್ಲಿ ಔತಣಕೂಟ ಆಯೋಜಿಸಿದ್ದಾರೆ. ಮಾರ್ಚ್ 6ಕ್ಕೆ ಡಿ.ಕೆ.ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷರಾಗಿ 6 ವರ್ಷ ಪೂರ್ಣಗೊಳಿಸುತ್ತಿರುವುದರಿಂದ ಈ ಡಿನ್ನರ್ ಪಾರ್ಟಿ ನೀಡುತ್ತಿದ್ದಾರೆ ಎಂದು ತಿಳಿದುಬಂದಿದೆ. ಈ ಔತಣಕೂಟದ ಮೂಲಕ ಶಾಸಕರು, ಪರಿಷತ್ ಸದಸ್ಯರು ಹಾಗೂ ಸಚಿವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನ ಇದಾಗಿದೆ ಎಂದು ವಿಶ್ಲೇಷಿಸಲಾಗಿದೆ.

**ಬಿಜೆಪಿ-ಜೆಡಿಎಸ್ ಸಂಬಂಧ ಕೆಡಿಸುವ ಹಗಲು ಕನಸು**

ಬಿಜೆಪಿ-ಜೆಡಿಎಸ್‌ನದ್ದು ಸಂಬಂಧ ಕೆಡಿಸುವ ಹಗಲು ಕನಸು ಈ ರೀತಿ ಸುಳ್ಳು ಸುದ್ದಿಗಳನ್ನು ಹರಡಿ ನಮ್ಮಿಬ್ಬರ ಸಂಬಂಧ ಕೆಡಿಸಿ ಡಿ.ಕೆ.ಶಿವಕುಮಾರ್ ಅವರನ್ನು ಒಲಿಸಿಕೊಳ್ಳುವ ದುರಾಲೋಚನೆ ಏನಾದರೂ ಬಿಜೆಪಿ ಮತ್ತು ಜೆಡಿಎಸ್ ನಾಯಕರಿಗೆ ಇದ್ದರೆ, ಅವರ ಹಗಲು ಕನಸುಗಳಿಗೆ ಶುಭ ಹಾರೈಸುತ್ತೇನೆ. ಶಿವಕುಮಾರ್ ಒಬ್ಬ ಕಟ್ಟಾ ಕಾಂಗ್ರೆಸಿಗ, ಸುಳ್ಳು ಕೇಸ್ ಗಳನ್ನು ಹಾಕಿ, ಜೈಲಿಗೆ ಕಳಿಸಿ ಅವರನ್ನು ಮಣಿಸುವ ಎಲ್ಲಾ ಪ್ರಯತ್ನಗಳನ್ನು ಬಿಜೆಪಿ ಮಾಡಿಯಾಗಿದೆ. ಇದಕ್ಕೆಲ್ಲ ಮಣಿಯದೆ ಅವರು ಪಕ್ಷಕ್ಕೆ ನಿಷ್ಠರಾಗಿ ಉಳಿದವರು ಎನ್ನುವುದು ಈ ಕುತಂತ್ರಿ ನಾಯಕರಿಗೆ ತಿಳಿದಿರಲಿ. ಕರ್ನಾಟಕದ ಇತ್ತೀಚಿನ ರಾಜಕೀಯ ಇತಿಹಾಸದ ಪುಟಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಈ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ಧಿಯ ಕಾರಣದಿಂದಾಗಿ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಠಗಳು ಕಾಣಿಸಿಕೊಂಡಿರುವುದು.

## ಗೂಢಚರ್ಯೆ ಪಾಠವನ್ನು ಅವರ ತಂದೆಯೇ ಹೇಳಿ ಕೊಟ್ಟಿರಬಹುದು

• ಉದಯವಾಹಿನಿ, ಬೆಂಗಳೂರು

ಫೋನ್ ಕದ್ದಾಲಿಕೆ ಎಲ್ಲರ ಕಾಲದಲ್ಲಿಯೂ ಇದೆ ಎಂದು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಕೆಣಕಿರುವ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಸಿಎಂ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ. ಕುಮಾರಸ್ವಾಮಿಯವರಿಗೆ ಈ ಗೂಢಚರ್ಯೆಯ ಪಾಠವನ್ನು ಅವರ ಪೂಜ್ಯ ತಂದೆಯವರೇ ಹೇಳಿಕೊಟ್ಟಿರಬಹುದು ಎಂದು ಕುಹಕವಾಡಿದ್ದಾರೆ.

ಕರ್ನಾಟಕದ ಇತ್ತೀಚಿನ ರಾಜಕೀಯ ಇತಿಹಾಸದ ಪುಟಗಳ ಮೇಲೆ ಒಮ್ಮೆ ಕಣ್ಣಾಡಿಸಿದರೆ ಈ ಫೋನ್ ಕದ್ದಾಲಿಕೆ, ಗೂಢಚರ್ಯೆಗಳೆಲ್ಲ ಯಾವ ಪಕ್ಷದ ದುಷ್ಕೃತ್ಯಗಳು ಎನ್ನುವುದು ಅರಿವಾಗುತ್ತದೆ. ಈ ದುರ್ಬುದ್ಧಿಯ ಕಾರಣದಿಂದಾಗಿಯೇ ರಾಜ್ಯ ರಾಜಕೀಯದಲ್ಲಿ ಆಪರೇಷನ್ ಕಮಲ, ರೆಸಾರ್ಟ್ ರಾಜಕಾರಣ, ವಚನಭಂಗದಂತಹ ಅನಿಷ್ಠಗಳು ಕಾಣಿಸಿಕೊಂಡಿರುವುದು.

2004ರಿಂದ 2013 ವರೆಗಿನ ಒಂಬತ್ತು ವರ್ಷಗಳ ಅವಧಿಯಲ್ಲಿ ರಾಜ್ಯ ಐದು ಮುಖ್ಯಮಂತ್ರಿಗಳನ್ನು, 2018ರಿಂದ 2023ರ 5 ವರ್ಷಗಳ ಅವಧಿಯಲ್ಲಿ ಮೂರು ಮುಖ್ಯಮಂತ್ರಿಗಳನ್ನು ರಾಜ್ಯ ಕಾಣುವಂತಾಗಲು ಇವರೊಳಗಿನ ಪರಸ್ಪರ ಅಪನಂಬಿಕೆ. ದ್ವೇಷ, ಅಸೂಯೆ, ಬೆನ್ನಿಗೆ ಚೂರಿ ಹಾಕುವ ಕುತಂತ್ರಗಳೇ ಕಾರಣ ಎಂದು ಲೇವಡಿ ಮಾಡಿದ್ದಾರೆ.

## ರಾಜ್ಯದಾದ್ಯಂತ ಬೇಸಿಗೆ ತೀವ್ರ ಕುಡಿಯುವ ನೀರಿನ ಅಭಾವ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಬೇಸಿಗೆಯ ತೀವ್ರತೆ ದಿನೇ ದಿನೇ ಹೆಚ್ಚುತ್ತಿದ್ದು. ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವದ ಭೀತಿ ಎದುರಾಗಿದೆ. ಸದ್ಯ 36 ತಾಲ್ಲೂಕುಗಳ 102 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ.

ಈ ಪೈಕಿ, 23 ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ, 79 ಗ್ರಾಮಗಳಿಗೆ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಪಡೆದು ಕುಡಿಯುವ ನೀರು ಪೂರೈಸಲಾಗುತ್ತಿದೆ. ತುಮಕೂರು, ರಾಮನಗರ, ಬಳ್ಳಾರಿ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಧಾರವಾಡ ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆ ಹೆಚ್ಚು ಕಾಣಿಸಿಕೊಂಡಿದೆ. ತುಮಕೂರಿನಲ್ಲಿ ಅತೀ ಹೆಚ್ಚು 34 ಗ್ರಾಮ ಪಂಚಾಯಿತಿಗಳಲ್ಲಿ ಜಲ ದಾಹ ಎದುರಾಗಿದೆ. ಮುಂಬರುವ ಬೇಸಿಗೆಯಲ್ಲಿ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಲು, ತುರ್ತು ಕಾಮಗಾರಿಗಳ ಶೀಘ್ರ ಅನುಷ್ಠಾನ, ಸಂಬಂಧಿಸಿದ ಇಲಾಖೆಗಳ ಜೊತೆ ಸಮನ್ವಯ ಸಾಧಿಸಿ ಕಾರ್ಯತಂತ್ರ ರೂಪಿಸಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮುಂದಾಗಿದೆ. ಹೊಸದಾಗಿ ಕೊಳವೆ ಬಾವಿ ಕೊರೆದು ಪಂಪ್ ಸಹಿತ ಪೈಪ್ ಲೈನ್ ಅಳವಡಿಕೆ, ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ, ಖಾಸಗಿ ಕೊಳವೆ ಬಾವಿ ಬಾಡಿಗೆಗೆ ಪಡೆದು ನೀರು ಸರಬರಾಜು, ಒಣಗಲಾರಂಭಿಸಿರುವ ಕೊಳವೆ ಬಾವಿಗಳನ್ನು ಮರು ಕೊರೆಯುವುದು ಸೇರಿದಂತೆ ವಿವಿಧ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಇಲಾಖೆ ಉದ್ದೇಶಿಸಿದೆ.

ಪ್ರಸ್ತುತ 28 ಜಿಲ್ಲೆಗಳಿಂದ (ಚಿಕ್ಕೋಡಿ ಸೇರಿ) ಒಟ್ಟು 6,321 ಕಾಮಗಾರಿಗಳಿಗೆ ಅಂದಾಜು 206.89 ಕೋಟಿ ಅನುದಾನ ಕೋರಿ ಪ್ರಸ್ತಾವಗಳು ಸಲ್ಲಿಕೆ ಆಗಿವೆ. ಚಾಮರಾಜನಗರ, ದಕ್ಷಿಣ ಕನ್ನಡ, ಮೈಸೂರು, ತುಮಕೂರು ಜಿಲ್ಲೆಗಳಿಂದ ತುರ್ತು ಕಾಮಗಾರಿಗಾಗಿ ಯಾವುದೇ ಪ್ರಸ್ತಾವ ಬಂದಿಲ್ಲ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

# ಪುಣೆ - ಬೆಂಗಳೂರು ನಡುವೆ ಹೊಸ ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ ನಿರ್ಮಾಣ

• ಉದಯವಾಹಿನಿ, ಬೆಂಗಳೂರು




ಪುಣೆ - ಬೆಂಗಳೂರು ನಡುವೆ ಹೊಸ ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್ ವೇ ನಿರ್ಮಾಣ ಯೋಜನೆ ಕೈಗೆತ್ತಿಕೊಂಡಿದ್ದು, ಈ ಹೊಸ ಎಕ್ಸ್‌ಪ್ರೆಸ್ ವೇ ನಿರ್ಮಾಣವಾದರೆ ಪುಣೆ ಮಾರ್ಗವಾಗಿ ಬೆಂಗಳೂರಿನಿಂದ ಮುಂಬೈಗೆ ಕೇವಲ 5.5 ಗಂಟೆಯಲ್ಲಿ ಪ್ರಯಾಣಿಸಬಹುದು ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಮುಂಬೈ ಮತ್ತು ಬೆಂಗಳೂರು ನಡುವೆ 840 ಕಿಲೋ ಮೀಟರ್ ರಸ್ತೆ ಪ್ರಯಾಣಕ್ಕೆ ಸದ್ಯಕ್ಕೆ ಬರೋಬ್ಬರಿ 14 ರಿಂದ 18 ಗಂಟೆಗಳ ಸುದೀರ್ಘ ಸಮಯ ಬೇಕು. ಟ್ರಾಫಿಕ್ ಇದ್ದರೆ, 20 ತಾಸು ಕೂಡ ಆಗಬಹುದು. ಆದರೆ, ಪುಣೆ - ಬೆಂಗಳೂರು ಎಕ್ಸ್‌ಪ್ರೆಸ್ ವೇ ಮೂಲಕ ಪ್ರಯಾಣದ ಸಮಯವನ್ನು ಕೇವಲ 5.5 ಗಂಟೆಗೆ ಇಳಿಸುತ್ತೇವೆ ಅಂತಾ ನಿತಿನ್ ಗಡ್ಕರಿ ಹೇಳಿರೋದು ಭಾರೀ ಚರ್ಚೆಯಾಗುತ್ತಿದೆ. ಅದು ಕೂಡ ಈ ವರ್ಷದ ಅಂತ್ಯದ ವೇಳೆಗೆ ಮುಂಬೈನಿಂದ ಬೆಂಗಳೂರಿಗೆ ಕೇವಲ ಐದೂವರೆ ಗಂಟೆಗಳಲ್ಲಿ ತಲುಪಬಹುದು ಅಂತ ಹೇಳಿದ್ದಾರೆ.

**ಹೊಸ ಎಕ್ಸ್‌ಪ್ರೆಸ್ ವೇ ಮಾರ್ಗ ಏನು:** ಪುಣೆ-ಬೆಂಗಳೂರು ಗ್ರೀನ್ ಫೀಲ್ಡ್ ಎಕ್ಸ್‌ಪ್ರೆಸ್‌ವೇ 2019 ರಲ್ಲೇ ಕೇಂದ್ರದ ಮುಂದೆ ಬಂದಿದೆ. ಈ ಯೋಜನೆಯನ್ನು ಎರಡು ಹಂತಗಳಲ್ಲಿ ನಿರ್ಮಿಸಲಾಗುತ್ತಿದೆ.

ಮೊದಲ ಹಂತ ಮಹಾರಾಷ್ಟ್ರದಲ್ಲಿ ಶುರುವಾದರೆ, ಎರಡನೇ ಹಂತ ಕರ್ನಾಟಕದಲ್ಲಿ ಅಂತ್ಯಗೊಳ್ಳುತ್ತದೆ. ಪ್ರಸ್ತುತ 6 ಲೇನ್‌ಗಳನ್ನು ಹೊಂದಿರುವ ಈ ರಸ್ತೆಯನ್ನು, ಭವಿಷ್ಯದಲ್ಲಿ 8 ಲೇನ್‌ಗಳಿಗೆ ವಿಸ್ತರಿಸುವ ಅವಕಾಶವೂ ಇದೆ. ಈ ಎಕ್ಸ್‌ಪ್ರೆಸ್‌ವೇ ಒಟ್ಟು ಉದ್ದ 703 ಕಿಲೋ ಮೀಟರ್ ಇದೆ. ಈ ಎಕ್ಸ್‌ಪ್ರೆಸ್‌ವೇ ಮಹಾರಾಷ್ಟ್ರದ 3 ಜಿಲ್ಲೆಗಳು ಮತ್ತು ಕರ್ನಾಟಕದ 9 ಜಿಲ್ಲೆಗಳ ಮೂಲಕ ಹಾದುಹೋಗುತ್ತದೆ.

ಮಹಾರಾಷ್ಟ್ರದಲ್ಲಿ ಪುಣೆ, ಸತಾರಾ ಮತ್ತು ಸಾಂಗ್ಲಿ ಜಿಲ್ಲೆಗಳಲ್ಲಿ ಈ ಹೆದ್ದಾರಿ ಹಾದು ಹೋಗಲಿದೆ. ಪುಣೆಯ ಖೋಪಿ ಗ್ರಾಮದಿಂದ ಶುರುವಾಗುವ ಈ ರಸ್ತೆ, ಸಾಂಗ್ಲಿಯ ಮೀರಜ್ ಬಳಿ ಕರ್ನಾಟಕದ ಬಾರ್ಡರ್ ಪ್ರವೇಶಿಸುತ್ತದೆ. ಕರ್ನಾಟಕದಲ್ಲಿ ಬೆಳಗಾವಿ, ಬಾಗಲಕೋಟೆ, ಗದಗ, ಕೊಪ್ಪಳ, ವಿಜಯನಗರ, ದಾವಣಗೆರೆ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ಮೂಲಕ ಹಾದುಹೋಗುತ್ತದೆ. ಅಂತಿಮವಾಗಿ ಇದು ನೆಲಮಂಗಲದ ಬಳಿ ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರೋಡ್‌ಗೆ ಕನೆಕ್ಟ್ ಆಗುತ್ತದೆ. ಮಹಾರಾಷ್ಟ್ರದಲ್ಲಿ 222 ಕಿಮೀ ಮತ್ತು ಕರ್ನಾಟಕದಲ್ಲಿ 496 ಕಿ.ಮೀ ಉದ್ದದ ಈ ರಸ್ತೆ ನಿರ್ಮಾಣವಾಗಲಿದೆ.

**7,900 ಎಕರೆ ಸ್ವಾಧೀನಪಡಿಸಿಕೊಳ್ಳು ಸಿದ್ಧತೆ**

ಈ ಎಕ್ಸ್‌ಪ್ರೆಸ್‌ವೇ ನಿರ್ಮಾಣಕ್ಕೆ ಬರೋಬ್ಬರಿ 55,000 ಕೋಟಿ ರೂಪಾಯಿ ವೆಚ್ಚ ಮಾಡಲಾಗುತ್ತಿದೆ. ಇದಕ್ಕಾಗಿ ಒಟ್ಟು 7,900 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದ್ದು, ಇದರಲ್ಲಿ 2,900 ಎಕರೆ ಮಹಾರಾಷ್ಟ್ರದಲ್ಲಿ ಮತ್ತು 5,000 ಎಕರೆ ಕರ್ನಾಟಕದಲ್ಲಿ ಅಕ್ವೈರ್ ಮಾಡಿಕೊಳ್ಳಲಾಗುತ್ತಿದೆ. ಈ ಪ್ರಾಜೆಕ್ಟ್ ಕೇವಲ ರಸ್ತೆಯಲ್ಲ, ಇದೊಂದು ಇಂಜಿನಿಯರಿಂಗ್ ಅದ್ಭುತ. ಇದರಲ್ಲಿ 42 ಪ್ರಮುಖ ಸೇತುವೆಗಳು, 206 ಸಣ್ಣ ಸೇತುವೆಗಳು, 6 ರೈಲ್ವೆ ಓವರ್ ಬ್ರಿಡ್ಜ್‌ಗಳು, 21 ಫ್ಲೈಓವರ್‌ಗಳು, ಮತ್ತು 100ಕ್ಕೂ ಹೆಚ್ಚು ವಾಹನ ಅಂಡರ್‌ಪಾಸ್‌ಗಳು ಇರಲಿವೆ. ಅಷ್ಟೇ ಅಲ್ಲ, ಭವಿಷ್ಯದ ದೃಷ್ಟಿಯಿಂದ ವಿಮಾನಗಳ ತುರ್ತು ಭೂಸ್ಪರ್ಶಕ್ಕಾಗಿ 5 ಕಿಮೀ ಉದ್ದದ ತುರ್ತು ರನ್‌ವೇ ಕೂಡ ಈ ಯೋಜನೆಯಲ್ಲಿದೆ. ಅಂದ್ರೇ ಎಮರ್ಜೆನ್ಸಿ ಏರ್‌ಸ್ಟ್ರಿಪ್ ಈ ಹೆದ್ದಾರಿಯಲ್ಲಿ ಇರಲಿದೆ.

ಈಗಾಗಲದೇ ಉತ್ತರ ಪ್ರದೇಶ ಸೇರಿ ಹಲವು ರಾಜ್ಯದ ಎಕ್ಸ್‌ಪ್ರೆಸ್ ವೇಗಳಲ್ಲಿ ಈ ರೀತಿಯ ಎಮರ್ಜೆನ್ಸಿ ಏರ್‌ಸ್ಟ್ರಿಪ್‌ಗಳನ್ನು ನಿರ್ಮಾಣ ಮಾಡಲಾಗಿದೆ. ಸದ್ಯ ಈ ಪುಣೆ-ಬೆಂಗಳೂರು ಗ್ರೀನ್‌ಫೀಲ್ಡ್ ಎಕ್ಸ್‌ಪ್ರೆಸ್‌ವೇಗೆ ಸಂಬಂಧಿಸಿದಂತೆ ಫೈನಲ್ ಕೆಲಸಗಳು ನಡೆಯುತ್ತಿವೆ. ಶೀಘ್ರದಲ್ಲೇ ಕೇಂದ್ರ ಕ್ಯಾಬಿನೆಟ್ ಅಂತಿಮ ಮುದ್ರೆಯನ್ನು ಒತ್ತುವ ನಿರೀಕ್ಷೆ ಇದೆ. ಈಗಾಗಲೇ ಭೂಮಿ ಗುರುತಿಸುವ ಕಾರ್ಯಗಳೆಲ್ಲಾ ಆಗಿದ್ದು, ಕ್ಯಾಬಿನೆಟ್ ಒಪ್ಪಿಗೆ ಸಿಕ್ಕ ಬಳಿಕ ಭೂಸ್ವಾಧೀನ ಪ್ರಕ್ರಿಯೆ ನಡೆಯಲಿದೆ. ಇದಾದ ಬಳಿಕ ಸಿವಿಲ್ ಕನ್‌ಸ್ಟ್ರಕ್ಷನ್‌ಗೆ ಟೆಂಡರ್ ಕರೆಯಲಾಗುತ್ತದೆ. 2028ರ ಹೊತ್ತಿಗೆ ಈ ಬೃಹತ್ ಯೋಜನೆ ಕಂಪ್ಲೀಟ್ ಆಗುವ ನಿರೀಕ್ಷೆ ಇದೆ ಎನ್ನಲಾಗಿದೆ.

**7 - 8 ಗಂಟೆಗೆ ಇಳಿಯಲಿದೆ ಪ್ರಯಾಣದ ಅವಧಿ!**

ಹೊಸ ಪುಣೆ-ಬೆಂಗಳೂರು ಎಕ್ಸ್‌ಪ್ರೆಸ್‌ವೇನಲ್ಲಿ ವಾಹನಗಳು ಗಂಟೆಗೆ 120 ಕಿ.ಮೀ ವೇಗದಲ್ಲಿ ಚಲಿಸುವಂತೆ ಡಿಸೈನ್ ಮಾಡಲಾಗಿದೆ. ಮುಂಬೈನಿಂದ ಬೆಂಗಳೂರಿಗೆ 5.5 ಗಂಟೆಯಲ್ಲಿ ತಲುಪಬೇಕು ಅಂದರೆ, ಟೋಲ್ ಗೇಟ್‌ಗಳು, ಟ್ರಾಫಿಕ್ ಜಾಮ್‌ಗಳು ಇರಬಾರದು. ಆದರೆ, ರಿಯಾಲಿಟಿ ಏನೆಂದರೆ, ಮುಂಬೈ ಮತ್ತು ಪುಣೆಯ ಎಂಟ್ರಿ ಮತ್ತು ಎಕ್ಸಿಟ್ ಪಾಯಿಂಟ್‌ಗಳಲ್ಲಿ ಭಾರಿ ದಟ್ಟಣೆ ಇರುತ್ತದೆ. ಜೊತೆಗೆ ನಮ್ಮ ಬೆಂಗಳೂರಿನ ಟ್ರಾಫಿಕ್ ಬಗ್ಗೆ ನಿಮಗೆ ಹೇಳಬೇಕಾಗಿಯೇ ಇಲ್ಲ. ಈ ಹಿಂದೆ ಬೆಂಗಳೂರು-ಚೆನ್ನೈ ನಡುವೆ 2 ಗಂಟೆಯಲ್ಲಿ ಪ್ರಯಾಣಿಸಬಹುದು ಎಂದು ಹೇಳಿದ್ದ ಮಾತು ಹೇಗೆ ಸ್ವಲ್ಪ ಅನ್ ರಿಯಾಲಿಟಿ ಆಗಿತ್ತೋ.. ಅದೇ ರೀತಿ ಮುಂಬೈ - ಬೆಂಗಳೂರು ನಡುವೆ 5.5 ಗಂಟೆಯಲ್ಲಿ ಪ್ರಯಾಣಿಸಬಹುದು ಅನ್ನೋದು ಕೂಡ ತುಂಬಾ ಕಷ್ಟ.. ಆದರೆ, ಹೊಸ ಎಕ್ಸ್‌ಪ್ರೆಸ್‌ವೇ ನಿರ್ಮಾಣದಿಂದ ಸದ್ಯ ತೆಗೆದುಕೊಳ್ಳುತ್ತಿರುವ 18 ಗಂಟೆಗಳ ಪ್ರಯಾಣ ಖಂಡಿತವಾಗಿಯೂ 7 ರಿಂದ 10 ಗಂಟೆಗಳಿಗೆ ಇಳಿಯುವುದರಲ್ಲಿ ಯಾವುದೇ ಅನುಮಾನವಿಲ್ಲ.

# ಇರಾನ್ ಪರವಾಗಿ ಕರ್ನಾಟಕ ರಾಜ್ಯದಲ್ಲಿ ಪ್ರತಿಭಟನಾ ಪ್ರದರ್ಶನ

## ■ ನಿಗಾ ಇಡಲು ಕೇಂದ್ರ, ಸರ್ಕಾರದಿಂದ ಸೂಚನೆ ಬಂದಿಲ್ಲ: ಪರಮೇಶ್ವರ್ ಸ್ಪಷ್ಟನೆ

• ಉದಯವಾಹಿನಿ, ಬೆಂಗಳೂರು

ಇರಾನ್ ಸುಪ್ರೀಂ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯನ್ನು ಖಂಡಿಸಿ ಕರ್ನಾಟಕದಲ್ಲೂ ಪ್ರತಿಭಟನಾ ಪ್ರದರ್ಶನಗಳು ನಡೆದಿವೆ. ಆದರೆ ಇಂತಹ ಪ್ರತಿಭಟನೆಗಳನ್ನು ನಡೆಸದಂತೆ ನಿಗಾ ಇಡಬೇಕು ಎಂದು ಕೇಂದ್ರ ಸರ್ಕಾರದಿಂದ ಯಾವುದೇ ಸೂಚನೆ ಬಂದಿಲ್ಲ ಎಂದು ಗೃಹ ಸಚಿವ ಡಾ. ಜಿ ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಖಮೇನಿ ಸಾವು ಹಿನ್ನೆಲೆಯಲ್ಲಿ ಯಾವುದೇ ಪ್ರತಿಭಟನೆ ನಡೆಸದಂತೆ ನಿಗಾ ಇಡಲು ಕೇಂದ್ರ ಗೃಹ ಇಲಾಖೆಯಿದ ರಾಜ್ಯಗಳಿಗೆ ಪತ್ರ ಕಳಿಸಿರುವ ಕುರಿತಾಗಿ ನನ್ನ ಗಮನಕ್ಕೆ ಬಂದಿಲ್ಲ. ರಾಜ್ಯದ ಡಿಜಿಪಿ ಅವರು ನನಗೆ ಈ ಬಗ್ಗೆ ಏನೂ ಹೇಳಿಲ್ಲ ಎಂದರು. ಇಂತಹದೊಂದು ಪತ್ರ ಬಂದಿದೆ ಎಂದು ಮಾಧ್ಯಮಗಳಲ್ಲಿ ಸುದ್ದಿಯಾಗಿದೆ. ಸಂಭಾವ್ಯ ಅಹಿತಕರ ಘಟನೆಗಳು ಆಗುತ್ತೆ ಅಂತ ನನಗೆ ಅನಿಸಿಲ್ಲ. ಏನೇ ಇದ್ರೂ ನಾವು ಎಚ್ಚರಿಕೆ ವಹಿಸುತ್ತೇವೆ ಎಂದು ತಿಳಿಸಿದರು. ಖಮೇನಿ ಪರ ಪ್ರತಿಭಟನೆ ನಡೆಸಿದವರ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರವಾಗಿ ಇದೇ ಸಂದರ್ಭದಲ್ಲಿ ಮಾತನಾಡಿದ ಅವರು, 'ಅವರು ಅಲ್ಲಿ ಪ್ರತಿಭಟನೆ ಮಾಡಿದ್ದು ನಿಯಮ ಬಾಹಿರ. ಕೋರ್ಟ್ ಹೇಳಿರೋದು ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ಮಾಡಿ ಅಂತ. ಮೊನ್ನೆ ಪ್ರತಿಭಟನೆ ಮಾಡಿದವರ ವಿರುದ್ಧ ಕ್ರಮದ ಬಗ್ಗೆ ಚರ್ಚೆ ಮಾಡ್ತೇನೆ. ಶಾಸಕ ಎನ್ ಎ ಹ್ಯಾರೀಸ್ ಇರಲಿ ಯಾರೇ ಇರಲಿ ನಿಯಮಾನುಸಾರ ಪ್ರತಿಭಟನೆ ಮಾಡಬೇಕು. ತಪ್ಪಾಗಿದ್ರೆ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ' ಎಂದು ತಿಳಿಸಿದರು.



ಕೊಲ್ಲಿ ದೇಶಗಳಲ್ಲಿ ಕನ್ನಡಿಗರು ಸಿಲುಕಿರುವ ವಿಚಾರವಾಗಿ ಮಾತನಾಡಿದ ಅವರು, ಈಗಾಗಲೇ ಸಿಎಂ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಅವರು ವಿದೇಶಾಂಗ ಇಲಾಖೆಗೆ ಪತ್ರ ಬರೆದಿದ್ದಾರೆ. ಅಲ್ಲಿ ಸಿಲುಕಿರುವ ಕನ್ನಡಿಗರನ್ನು ಕರೆಸಿ ಅಂತ ಪತ್ರದ ಮೂಲಕ ಮನವಿ ಮಾಡಿದ್ದಾರೆ. ಸುಮಾರು ಜನ ಅಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ. ಯಾವ ಸ್ಥಿತಿಯಲ್ಲಿ ಇದ್ದಾರೆ ಅವರೆಲ್ಲ ಅಂತ ಗೊತ್ತಿಲ್ಲ. ನಾನು ಭೋಜೇಗೌಡ ಅವರಿಗೆ ಕರೆ ಮಾಡಿ ಮಾಹಿತಿ ಪಡೆದಿದ್ದೇನೆ. ದುಬೈನಲ್ಲಿರುವ ಕೆಲವರು ಸಹಾಯ ಮಾಡ್ತಿದ್ದಾರೆ. ಭೋಜೇಗೌಡ ಅವರ ಕುಟುಂಬ ಅಲ್ಲಿ ಸಿಕ್ಕಿಕೊಂಡಿತ್ತು. ಅವರನ್ನು ಬಂಕರ್ ನಲ್ಲಿಟ್ಟಿದ್ರು ಅಂತ ಭೋಜೇಗೌಡ ಹೇಳಿದ್ರು. ಇನ್ನೂ ಬಹಳ ಜನ ಇದ್ದಾರೆ, ನಮ್ಮ ಕೆಲವು ಶಾಸಕರು ಸಹ ಇದ್ದಾರೆ ಎಂದು ಮಾಹಿತಿ ನೀಡಿದರು. ನಮ್ಮ ಗಮನಕ್ಕೆ ಅಧಿಕೃತವಾಗಿ ಆ ರೀತಿಯ ಮಾಹಿತಿ ಯಾವುದೂ ಇಲ್ಲ. ಸಿಎಂ ಗಮನಕ್ಕೂ ಅಂತಹ ವಿಚಾರ ಬಂದಿಲ್ಲ.

ರಾಜಕೀಯ ಗುಪ್ತಚರ ಇಲಾಖೆ ಎಂಬ ಪ್ರತ್ಯೇಕ ವಿಭಾಗವೇ ಇದೆ. ಅದರ ಮೂಲಕ ಸಿಎಂಗೆ ಮಾಹಿತಿ ಸಹಜವಾಗಿ ನಿತ್ಯ ಹೋಗುತ್ತೆ. ಫೋನ್ ಟ್ಯಾಪಿಂಗ್ ಮಾಡಿ ಯಾರ್ಯಾರು ಎಲ್ಲೆಲ್ಲಿ ಹೋದ್ರು, ಏನು ಮಾಡಿದ್ರು ಅನ್ನೋದೆಲ್ಲ ನಡೆಯುತ್ತಿಲ್ಲ ಎಂದರು.

ಪೊಲಿಟಿಕಲ್ ಇಂಟಲಿಜೆನ್ಸ್ ಮೂಲಕ ಹಿಂದಿನಿಂದಲೂ ಎಲ್ಲಾ ಸಿಎಂಗಳಿಗೂ ಮಾಹಿತಿ ಹೋಗ್ತಿದೆ. ನಿರ್ದಿಷ್ಟವಾಗಿ ಯಾವ ಮಾಹಿತಿ ಬೇಕು ಅನ್ನೋದು ಸಿಎಂ ವಿವೇಚನೆಗೆ ಬಿಟ್ಟಿದ್ದು ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

**ಫೋನ್ ಕದ್ದಾಲಿಕೆ ನಡೆದಿಲ್ಲ**

ಬಿಜೆಪಿ ಮಾಡಿರುವ ಫೋನ್ ಕದ್ದಾಲಿಕೆ ಆರೋಪದ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಸರ್ಕಾರ ನಡೆಸೋದು ನಾವು, ನಮಗೆ ಹೆಚ್ಚಿನ ಮಾಹಿತಿ ಇರುತ್ತೆ, ಅವರಿಗಲ್ಲ. ವಿಪಕ್ಷದವರಿಗೆ ಯಾರು ಹೇಳಿದ್ದು ಗೂಢಚಾರಿಕೆ, ಫೋನ್ ಟ್ಯಾಪಿಂಗ್ ಮಾಡ್ತಿದ್ದಾರೆ ಅಂತ ಆ ರೀತಿಯ ಬೆಳವಣಿಗೆ ಯಾವುದೂ ನಡೆಯುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಈ ದಿನದ ದರ | ಪೆಟ್ರೋಲ್: 102.92 ₹/L | ಡೀಸೆಲ್ : 91.52 ₹/L | ಬಂಗಾರ: ₹17,002/Gram24ct ₹15,585/Gram22ct | ಬೆಳ್ಳಿ: ₹295.00/Gram

## ಶ್ರೀಗುರು ರಾಘವೇಂದ್ರ ಸ್ವಾಮಿಗಳ ಸನ್ನಿಧಿಯಲ್ಲಿ ಲೋಕಕಲ್ಯಾಣಕ್ಕಾಗಿ ಖಗ್ರಾಸ ಚಂದ್ರಗ್ರಹಣ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಬೆಂಗಳೂರು

ಜಯನಗರ 5ನೇ ಬಡಾವಣೆಯಲ್ಲಿರುವ ಪ್ರಸಿದ್ಧ ಕ್ಷೇತ್ರ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕ ಶ್ರೀ ಆರ್. ಕೆ. ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಕೇತುಗ್ರಸ್ಥ ಖಗ್ರಾಸ ಚಂದ್ರ ಗ್ರಹಣದ ಪ್ರಯುಕ್ತ ಲೋಕಕಲ್ಯಾಣಕ್ಕಾಗಿ ಶ್ರೀರಾಘವೇಂದ್ರ ಸ್ವಾಮಿಗಳವರ ಸನ್ನಿಧಿಯಲ್ಲಿ ನವಗ್ರಹ ಹೋಮ ಸಹಿತ ವಿಶೇಷ ಚಂದ್ರಗ್ರಹಣ ಶಾಂತಿಯ ಹೋಮವನ್ನು ಆರ್ ಕೆ ವಾದೀಂದ್ರ ಆಚಾರ್ಯರು ಶ್ರೀ ಕೃಷ್ಣಗುಂಡ ಆಚಾರ್ಯರು ಶ್ರೀ ನಂದಕಿಶೋರ ಆಚಾರ್ಯರು ಹಾಗೂ ಗೊಗ್ಗಿ ರಾಮಚಂದ್ರಾಚಾರ್ಯರು ನೆರವೇರಿಸಿದರು. ರಂಗೋಲಿಯಲ್ಲಿ ವಿಶೇಷ ಪರಿಣಿತಿಯನ್ನು ಹೊಂದಿದ ವಿದ್ವಾನ್ - ಆರ್ ವಿಷ್ಣುರವರು ರಂಗೋಲಿಯಲ್ಲಿ ಶ್ರೀಲಕ್ಷ್ಮೀನರಸಿಂಹ ಸಹಿತ ನವಗ್ರಹ ಮಂಡಲವನ್ನು ವಿಶೇಷವಾಗಿ ರಚಿಸಿದರು.

ಈ ಮಂಡಲಕ್ಕೆ ವಿಶೇಷ ಪೂಜೆಯನ್ನು ಸಲ್ಲಿಸಿ, ಹೋಮದ ಪೂರ್ಣಾಹುತಿಯೊಂದಿಗೆ ಮಹಾಮಂಗಳಾರತಿಯನ್ನು ನೆರವೇರಿಸಲಾಯಿತು. ಈ ಹೋಮದ ಸಮಯದಲ್ಲಿ ಸೇವಾ ಕರ್ತೃಗಳು, ಭಕ್ತರು ಹಾಗೂ ಶ್ರೀಮಠದ ಸಿಬ್ಬಂದಿಗಳು ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿಧಿಯಲ್ಲಿ ಜಪತಪ ಹೋಮಗಳಲ್ಲಿ ಭಾಗವಹಿಸಿ ಶ್ರೀ ಹರಿ ವಾಯು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

## ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಇಂದಿನ ಯುವ ಸಾಮುದಾಯ ಮಕ್ಕಳ ಮನಸ್ಸು ಮಾಡಬೇಕು


ಉದಯವಾಹಿನಿ ಚಿತ್ರ

• ಉದಯವಾಹಿನಿ,ಕೆ.ಆರ್.ಪುರ

ಪರಿಸರ ಹಾಗೂ ವನ್ಯಜೀವಿಗಳ ಸಂರಕ್ಷಣೆ ಬಗ್ಗೆ ಇಂದಿನ ಯುವಸಾಮುದಾಯ ಹಾಗೂ ಮಕ್ಕಳ ಮನಸ್ಸು ಮಾಡಬೇಕು ಎಂದು ಪರಿಸರವಾದಿ ಪರಿಸರ ಮಂಜು ತಿಳಿಸಿದರು. ಮಹದೇವಪುರ ಕ್ಷೇತ್ರದ ಜ್ಯೋತಿಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಪರಿಸರ ಸಂಘ ಆಯೋಜಿಸಿದ ಪರಿಸರ ಜಾಗೃತಿ ಶಿಬಿರದಲ್ಲಿ ಭಾಗಿಯಾಗಿ ಮತನಾಡಿದ ಅವರು.ತೀವ್ರ ಅಳಿವಿನಂಚಿನಲ್ಲಿರುವ ಪ್ರಾಣಿ, ಪಕ್ಷಿ, ಪರಿಸರ ಸಂರಕ್ಷಣೆಗೆ ಬಗ್ಗೆ ಇಂದಿನ ಯುವ ಸಮುದಾಯ, ಮಕ್ಕಳು ಅರಿತುಕೊಂಡು. ವನ್ಯಜೀವಿಗಳ ಉಳಿವಿಗೆ ಮುಂದಾಗಬೇಕು ಎಂದರು. ಇದೇವೇಳೆ ಶಾಲಾ ಮಕ್ಕಳಿಗೆ ಆಯೋಜಿಸಿದ ಚಿತ್ರಕಲೆ, ಪ್ರಬಂಧ ರಚನೆ ಸ್ಪರ್ಧೆಯಲ್ಲಿ ವಿಜೇತ ಮಕ್ಕಳಿಗೆ ಬಹುಮಾನ ವಿತರಣೆ ಸಹ ಮಾಡಲಾಯಿತು.

ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀಮತಿ ಬಿ.ವಿ ರೇಖಾ, ಸಹಶಿಕ್ಷಕಿರಾದ ಶೀಲಾ ಎನ್, ಅರುಣ ಡಿ ವಿ, ಅಂಜುಶ್ರೀ, ಚಂದ್ರಕಲಾ, ಸೌಮ್ಯ ಗ್ರಾ. ಪ. ಶಿಕ್ಷಕರು, ಮಂಜುಳ, ಛಾಯಾ ಅತಿಥಿ ಶಿಕ್ಷಕರು ಶಾಲಾ ಮಕ್ಕಳು ಉಪಸ್ಥಿತರಿದ್ದರು.

## ಬೆಂಗಳೂರಲ್ಲಿ ಭಾರಿ ಅಗ್ನಿ ಅವಘಡ: ಮಹಿಳೆ ಸಾವು, ಮೂವರನ್ನು ರಕ್ಷಿಸಿದ ಅಗ್ನಿಶಾಮಕ ಸಿಬ್ಬಂದಿ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ನಗರದ ಮನೆಯೊಂದರಲ್ಲಿ ಬೆಂಕಿ ಕಾಣಿಸಿಕೊಂಡ ಪರಿಣಾಮ ಮಹಿಳೆ ಸಾವನ್ನಪ್ಪಿದರೆ, ಮೂವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸುಬ್ರಮಣ್ಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಗಾಯತ್ರಿ ನಗರದಲ್ಲಿ ಸೋಮವಾರ ರಾತ್ರಿ ಅಗ್ನಿ ಅವಾಂತರ ಸಂಭವಿಸಿದೆ. ಸವಿತಾ (53) ಸಾವನ್ನಪ್ಪಿದ ಮಹಿಳೆ. ಮನೆಯಲ್ಲಿದ್ದ ರಮೇಶ್ ಬಾಬು, ಇವರ ತಾಯಿ ಸಣ್ಣವ್ವ ಹಾಗೂ ಪುತ್ರನನ್ನು ಅಗ್ನಿಶಾಮಕ ಸಿಬ್ಬಂದಿ ರಕ್ಷಿಸಿದ್ದಾರೆ. ಘಟನೆಗೆ ನಿಖರ ಕಾರಣ ತಿಳಿದುಬಂದಿಲ್ಲ.

ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ರಮೇಶ್ ಬಾಬು ಅವರು ಹೆಂಡತಿ-ಮಕ್ಕಳೊಂದಿಗೆ ಮೂರನೇ ಹಾಗೂ ನಾಲ್ಕನೆ ಡೂಪ್ಲೆಕ್ಸ್ ಮನೆಯಲ್ಲಿ ವಾಸವಾಗಿದ್ದರು. ಮೊದಲ ಹಾಗೂ ಎರಡನೇ ಮಹಡಿಯಲ್ಲಿರುವ ಮನೆಗಳನ್ನು ಬಾಡಿಗೆ ನೀಡಿದ್ದರು. ಮೂರನೇ ಮಹಡಿಯ ಅಡುಗೆ ಮನೆಯಲ್ಲಿ ಬೆಂಕಿ ಕಾಣಿಸಿಕೊಂಡಿತ್ತು.

ಕ್ಷಣಾರ್ಧದಲ್ಲಿ ಬೆಂಕಿ ವ್ಯಾಪಿಸಿದ ಪರಿಣಾಮ ಧಗ-ಧಗನೇ ಹೊತ್ತಿ ಉರಿದಿದೆ. ಹೀಗಾಗಿ, ಹೊರ ಬರಲಾಗದೆ ನಾಲ್ವರು ಅಲ್ಲಿಯೇ ಸಿಲುಕಿದ್ದರು. ಸ್ಥಳೀಯರು ನೀಡಿದ ಮಾಹಿತಿ ಆಧರಿಸಿ ಸುಬ್ರಮಣ್ಯ ನಗರ ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ದೌಡಾಯಿಸಿ ಕಾರ್ಯಾಚರಣೆ ನಡೆಸಿ, ಮೂವರನ್ನು ರಕ್ಷಿಸಿದ್ದಾರೆ. ಅಗ್ನಿ ನಂದಿಸಿದರೂ ದುರಾದೃಷ್ಟವಶಾತ್ ಸವಿತಾ ಅವರು ಉಸಿರುಗಟ್ಟಿ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಅಗ್ನಿ-ಅವಘಡದಲ್ಲಿ ಗಾಯಗೊಂಡಿದ್ದ ಮೂವರನ್ನು ಖಾಸಗಿ ಆಸ್ಪತ್ರೆ ಸೇರಿಸಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಏಕಾಏಕಿ ಬೆಂಕಿ ಕಾಣಿಸಿಕೊಳ್ಳಲು ನಿಖರ ಕಾರಣ ತಿಳಿದುಬಂದಿಲ್ಲ. ಶಾರ್ಟ್ ಸರ್ಕ್ಯೂಟ್‌ನಿಂದ ಅಗ್ನಿ ಅವಾಂತರ ಸಂಭವಿಸಿರಬಹುದಾ? ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ಬೆಂಗಳೂರಲ್ಲಿ ನೀರಿನ ಮಾಫಿಯಾ, 1 ಟ್ಯಾಂಕರ್ ನೀರಿಗೆ 3000 ರೂ:

## ಅಕ್ರಮ ಟ್ಯಾಂಕರ್ ಜಪ್ತಿಗೆ ಎಎಪಿ ಆಗ್ರಹ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಕುಡಿಯುವ ನೀರಿನ ಟ್ಯಾಂಕರ್ ಮಾಫಿಯಾ ದೊಡ್ಡ ಸಮಸ್ಯೆಯಾಗಿದೆ. ಸಾವಿರಾರು ಖಾಸಗಿ ಬೋರ್‌ವೆಲ್‌ಗಳು ಮತ್ತು ಟ್ಯಾಂಕರ್‌ಗಳ ಮೂಲಕ ನೀರನ್ನು ಹೆಚ್ಚುವರಿ ದರಕ್ಕೆ ಮಾರಾಟ ಮಾಡುವ ಬೃಹತ್ ಜಾಲವು ಈಗಿನ ಬೇಸಿಗೆ ಸಂದರ್ಭದಲ್ಲಿ ಮತ್ತೆ ಗರಿಗೆದರಿದೆ.

ಕೆಲವೊಮ್ಮೆ ಒಂದು ಟ್ಯಾಂಕರ್ ನೀರಿಗೆ 3000 ಅಥವಾ ಅದಕ್ಕಿಂತ ಹೆಚ್ಚು ವಸೂಲಿ ಮಾಡುವ ಘಟನೆಗಳೂ ಅನೇಕ ವರ್ಷಗಳಿಂದ ವರದಿಯಾಗುತ್ತಿವೆ ಎಂದು ಆಮ್ ಆದ್ಮಿ ಪಕ್ಷ ದೂರಿದೆ. ಬೆಂಗಳೂರಿನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಡಾ. ಸತೀಶ್ ಕುಮಾರ್ ಅವರು, ಈ ಸಮಸ್ಯೆಯನ್ನು ತಡೆಯಲು ಸರ್ಕಾರ ಕೂಡಲೇ ಅಕ್ರಮ ಖಾಸಗಿ ಟ್ಯಾಂಕರ್‌ಗಳನ್ನು ವಶಪಡಿಸಿಕೊಂಡು ಅವುಗಳ ಮೂಲಕ ಉಚಿತವಾಗಿ ಬೆಂಗಳೂರಿಗೆ ಕುಡಿಯುವ ನೀರು ಸರಬರಾಜು ಮಾಡಬೇಕೆಂದು ಆಗ್ರಹಿಸಿದರು. ಬೆಂಗಳೂರಿನಲ್ಲಿನ ಟ್ಯಾಂಕರ್‌ಗಳಿಗೆ ಕಡ್ಡಾಯ ನೋಂದಣಿ ಮತ್ತು ಜಿಪಿಎಸ್ ಟ್ರ್ಯಾಕಿಂಗ್, ಲೈಸೆನ್ಸ್ ಕಡ್ಡಾಯ ಮಾಡಬೇಕು. ಜಿಪಿಎಸ್ ಟ್ರ್ಯಾಕಿಂಗ್ ವ್ಯವಸ್ಥೆ ಮೂಲಕ ನೀರು ಎಲ್ಲಿ ತೆಗೆದುಕೊಳ್ಳುತ್ತಾರೆ. ಎಲ್ಲಿ ನೀಡುತ್ತಾರೆ ಎಂದು ನಿಗಾ ವಹಿಸಬೇಕು.

ಕಾನೂನು ಬಾಹಿರವಾಗಿ ಕಾರ್ಯ ನಿರ್ವಹಿಸುವ ಟ್ಯಾಂಕಗರ್‌ಳಿಗೆ ಭಾರೀ ದಂಡ ಮತ್ತು ವಾಹನ ಜಪ್ತಿ ಮಾಡಬೇಕು ಎಂದು ಅವರು ಸರ್ಕಾರದ ಬಳಿ ಮನವಿ ಮಾಡಿದರು. ಖಾಸಗಿ ಬೋರ್‌ವೆಲ್‌ಗಳ ಸರ್ವೇಗೆ ಒತ್ತಾಯ ನಗರದಲ್ಲಿ ಇರುವ ಎಲ್ಲಾ ಖಾಸಗಿ ಬೋರ್ ವೆಲ್‌ಗಳ ಸರ್ವೇ ಮಾಡಬೇಕು. ಅನುಮತಿ ಇಲ್ಲದೆ ಬೋರ್‌ವೆಲ್‌ಗಳಿಂದ ನೀರು ತೆಗೆದು ಮಾರಾಟ ಮಾಡುವವರ ಮೇಲೆ ಕಠಿಣ ಕ್ರಮ ಜರುಗಿಸಬೇಕು. ಬೋರ್‌ವೆಲ್‌ಗೆ ಡಿಜಿಟಲ್ ಮೀಟರ್ ಹಾಕಿ ಎಷ್ಟು ನೀರು ತೆಗೆದುಕೊಳ್ಳುತ್ತಾರೆ.

## ರೈಲ್ವೆಕಾಮಗಾರಿ ಹಿನ್ನಲೆ: ಈ ರೈಲುಗಳ ಸಂಚಾರ ರದ್ದು

• ಉದಯವಾಹಿನಿ, ಬೆಂಗಳೂರು

ವಂದಾಲ್ ಮತ್ತು ಬಸವನ ಬಾಗೇವಾಡಿ ರೋಡ್ ನಿಲ್ದಾಣಗಳ ನಡುವಿನ ಲೆವೆಲ್ ಕ್ರಾಸಿಂಗ್ (ಗೇಟ್ ಸಂಖ್ಯೆ 62) ಬಳಿ ಕಾಮಗಾರಿ ಹಮ್ಮಿಕೊಂಡಿರುವ ಹಿನ್ನೆಲೆಯಲ್ಲಿ, ಈ ಕೆಳಗಿನ ರೈಲು ಸಂಚಾರದಲ್ಲಿ ಬದಲಾವಣೆ ಮಾಡಲಾಗಿದೆ.

**ಭಾಗಶಃ ರದ್ದು:** ಮಾರ್ಚ್ 11 ಮತ್ತು 22 ರಂದು ಹುಬ್ಬಳ್ಳಿಯಿಂದ ಹೊರಡುವ ರೈಲು ಸಂ. 07329 ಎಸ್ ಎಸ್‌ಎಸ್ ಹುಬ್ಬಳ್ಳಿ – ವಿಜಯಪುರ ಡೆಮು ಸ್ಪೆಷಲ್ ರೈಲು ಬಾಗಲಕೋಟೆ ನಿಲ್ದಾಣಕ್ಕೆ ತನ್ನ ಪ್ರಯಾಣ ಮುಕ್ತಾಯಗೊಳಿಸಲಿದೆ.

ಅಂದರೆ ಬಾಗಲಕೋಟೆ ಮತ್ತು ವಿಜಯಪುರ ನಡುವೆ ಈ ರೈಲಿನ ಸಂಚಾರ ರದ್ದಾಗಿರುತ್ತದೆ. ಮಾರ್ಚ್ 12 ಮತ್ತು 23 ರಂದು ರೈಲು ಸಂ. 07330 ವಿಜಯಪುರ – ಎಸ್‌ಎಸ್‌ಎಸ್ ಹುಬ್ಬಳ್ಳಿ ಡೆಮು ಸ್ಪೆಷಲ್ ವಿಜಯಪುರದ ಬದಲಾಗಿ ಬಾಗಲಕೋಟೆ ನಿಲ್ದಾಣದಿಂದಲೇ ಪ್ರಯಾಣ


ಉದಯವಾಹಿನಿ ಚಿತ್ರ

ಆರಂಭಿಸಲಿದೆ. ದಿನಗಳಂದು ವಿಜಯಪುರ ಮತ್ತು ಬಾಗಲಕೋಟೆ ನಡುವೆ ರೈಲು ಸೇವೆ ಇರುವುದಿಲ್ಲ.

**ನಿಯಂತ್ರಣ:** ಧಾರವಾಡದಿಂದ ಸೊಲ್ಲಾಪುರಕ್ಕೆ ತೆರಳುವ ಪ್ಯಾಸೆಂಜರ್ ರೈಲು (56904) ಮಾರ್ಚ್ 10, 11, 21 ಮತ್ತು 22ರಂದು ಮಾರ್ಗಮಧ್ಯೆ ಸುಮಾರು 30 ನಿಮಿಷಗಳ ಕಾಲ ನಿಯಂತ್ರಣವಾಗಲಿದೆ.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ರೈತರು ಅರ್ಜಿ ಸಲ್ಲಿಸುವುದಕ್ಕೆ ಬದಲಾಗಿ, ಅಧಿಕಾರಿಗಳೇ ಮಂಜೂರಾಗಿರುವ ಎಲ್ಲಾ ರೈತರ ಮಾಹಿತಿ ಹಾಗೂ ದಾಖಲೆಗಳನ್ನು ಕಲೆಹಾಕಿ ಕಡತಗಳನ್ನು ಆನ್‌ಲೈನ್‌ನಲ್ಲಿ ತಯಾರಿಸಿ, ರೈತರ ಜಮೀನಿಗೆ ತೆರಳಿ ಮಂಜೂರಾದ ಜಮೀನುಗಳಿಗೆ ಸರ್ವೆ ಮಾಡಿ, ಸ್ಕೆಚ್ ತಯಾರಿಸಿ, ಆರ್.ಟಿ.ಸಿ., ಇಂಡೀಕರಣ ಮಾಡಿ ಸಂಪೂರ್ಣ ಪಕ್ಕಾ ದಾಖಲೆಗಳನ್ನು ರೈತರಿಗೆ ನೀಡಿ ಮಾಲೀಕತ್ವದ ಭೂಗ್ಯಾರಂಟಿ ನೀಡುವ ಅಭಿಯಾನವನ್ನು ಕಳೆದ ಒಂದು ವರ್ಷದಿಂದ ನಡೆಸಲಾಗುತ್ತಿದೆ ಎಂದು ತಿಳಿಸಿದರು.

# ಮನೆ ಬಾಗಿಲಿಗೆ ಬರಲಿದೆ ಸರ್ಕಾರ

### ಸರ್ವೇಗೂ ಸರ್ಜರಿ

**ಸರ್ವೇ ಇಲಾಖೆಗೂ ಚಿಕಿತ್ಸಕ ಬದಲಾವಣೆ ನೀಡುವ ಉದ್ದೇಶದಿಂದ ಇಡೀ ಇಲಾಖೆಯನ್ನು ಡಿಜಿಟಲೀಕರಣಗೊಳಿಸುವ ಸಂಬಂಧ ನೂತನ ಕಾರ್ಯ ಯೋಜನೆಯನ್ನು ಇಂದಿನ ಸಭೆಯಲ್ಲಿ ಸರ್ವೇ ಇಲಾಖೆ ನೂತನ ಆಯುಕ್ತರಾದ ವೆಂಕಟರಾಜು ಅವರು ಪ್ರಸ್ತುತಪಡಿಸಿದರು.**

**ಪ್ರಸ್ತುತಿ ನಂತರ ಮಾತನಾಡಿದ ಸಚಿವ ಕೃಷ್ಣ ಭೈರೇಗೌಡರು, ರೋವರ್ ಮೂಲಕ ಸರ್ವೇ ಪೂರ್ಣಗೊಳಿಸಿದರೆ ಸ್ಕೆಚ್, ಟಿಪ್ಪಣಿ, ಆಕಾರ್ ಬಂದ್, ಕೈಬರಹ ಸೇರಿ ಪ್ರತಿಯೊಂದೂ ಡಿಜಿಟಲ್ ಪ್ರತಿ ಲಭ್ಯವಾಗುತ್ತದೆ. ಈ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕು. ಆ ಮೂಲಕ ಈ ವರ್ಷಾಂತ್ಯದಲ್ಲಿ ಇಡೀ ಇಲಾಖೆಯನ್ನು ಸಂಪೂರ್ಣ ಕಾಗದ ರಹಿತಗೊಳಿಸಬೇಕು, ಎಂಡ್ ಟು ಎಂಡ್ ಡಿಜಿಟಲೀಕರಣಗೊಳಿಸಬೇಕು ಎಂದು ಸೂಚಿಸಿದರು.**

• ಉದಯವಾಹಿನಿ,ಬೆಂಗಳೂರು

ಪೋಡಿ ದುರಸ್ತಿ, ಪೌತಿಖಾತೆ, ಭೂ ಸುರಕ್ಷಾ ಅಭಿಯಾನ ಸೇರಿದಂತೆ ಎಲ್ಲಾ ಕಂದಾಯ ಸೇವೆಗಳನ್ನೂ ಆನ್ಲೈನ್ ಡಿಜಿಟಲೀಕರಣ ಮಾಡಿದ್ದು ಆ ಮೂಲಕ ಇಲಾಖೆಯ ಹತ್ತಾರು ಪ್ರಮುಖ ಸೇವೆಗಳನ್ನು ಜನ ಸಾಮಾನ್ಯರ ಮನೆ ಬಾಗಿಲಿಗೆ ತಲುಪಿಸಿದ್ದು ನಮ್ಮ ಸಾವಿರ ದಿನಗಳ ಆಡಳಿತದ ಸಾಧನೆ ಎಂದು ಸಚಿವ ಕೃಷ್ಣ ಭೈರೇಗೌಡ ಅವರು ಅಭಿಪ್ರಾಯಪಟ್ಟರು.

ಮಂಗಳವಾರ ವಿಕಾಸಸೌಧದಲ್ಲಿ ನಡೆದ ಎಲ್ಲಾ ಜಿಲ್ಲಾಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಹತ್ತಾರು ವರ್ಷಗಳಿಂದ ಆಗದ ಕೆಲಸಗಳು ಕೇವಲ ಕಳೆದ ಸಾವಿರ ದಿನಗಳಲ್ಲಿ ಆಗಿದೆ. ಈ ಮಾತು ಜನರ ಬಾಯಿಂದಲೇ ಬರುತ್ತಿರುವುದು ವಿಶೇಷ. ನಾವು ಮಾಡುತ್ತಿರುವ ಕೆಲಸ ಜನರಿಗೆ ಅನುಕೂಲವಾಗುತ್ತಿದೆ.

ಈ ಹಿಂದೆ ಇಲಾಖೆಯ ಬಗ್ಗೆ ಜನರ ಮನಸ್ಸಲ್ಲಿದ್ದ ಭಾವನೆ ಈಗ ಬದಲಾಗಿದೆ. ಸಾವಿರ ದಿನಗಳ ನಮ್ಮೆಲ್ಲರ ಒಗ್ಗಟ್ಟಿನ ಕೆಲಸದ ಪರಿಣಾಮ ಇಲಾಖೆಯನ್ನು ಗೌರವದಿಂದ ನೋಡುತ್ತಿದ್ದಾರೆ. ಕಂದಾಯ ಸೇವೆಗಳನ್ನು ಆನ್ಲೈನ್ ಮಾಡಿದ್ದು, ಜನರ ಮನೆ ಬಾಗಿಲಿಗೆ ತಲುಪಿಸಿದ್ದು ನಮ್ಮ ಸಾವಿರ ದಿನದ ಸಾಧನೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಈ ಹಿಂದೆ ಜಮೀನು ಮಂಜೂರು ಮಾಡಿದ್ದ ಸರ್ಕಾರಗಳು ಕೇವಲ ಆರ್ಟಿಸಿ ಮಾತ್ರ ಮಾಡಿಕೊಟ್ಟು ರೈತರ ಜುಟ್ಟನ್ನು ತಮ್ಮ ಕೈನಲ್ಲೇ ಇಟ್ಟುಕೊಂಡಿದ್ದವು. ಹೀಗಾಗಿ ಪಕ್ಕಾ ದಾಖಲೆ ಇಲ್ಲದೆ ರೈತರ ಬದುಕು ಅತಂತ್ರ ಸ್ಥಿತಿಯಲ್ಲೇ ಇತ್ತು. ನಾನು ಕಂದಾಯ ಇಲಾಖೆ ಜವಾಬ್ದಾರಿ ವಹಿಸಿಕೊಂಡ ಮೇಲೆ ಈ ವಿಚಾ

ರವನ್ನು ಮನಗಂಡು ಬಡವರಿಗೆ ಪಕ್ಕಾ ದಾಖಲೆ ಮಾಡಿಕೊಡಲು ಸಂಕಲ್ಪ ಮಾಡಿದ್ದೆ. ಆ ಸಂದರ್ಭದಲ್ಲಿ ವಿರೋಧ ಪಕ್ಷದ ನಾಯಕರು ಈ ಕೆಲಸವನ್ನು ಮಾಡೋಕೆ ಸಾಧ್ಯವೇ ಇಲ್ಲ ಎಂದು ಸವಾಲು ಹಾಕಿದ್ದರು.

ಹೀಗಾಗಿ ನಾವೂ ಸಹ ಈ ವಿಚಾರವನ್ನು ಸವಾಲಾಗಿ ಸ್ವೀಕರಿಸಿದ್ದೆವು. ಪರಿಣಾಮ ಸರ್ಕಾರದಿಂದ ಮಂಜೂರಾದ ಜಮೀನುಗಳಿಗೆ ಧರಖಾಸ್ತು ಪೋಡಿ ದುರಸ್ತು ಮಾಡಿಕೊಡುವ ಅಭಿಯಾನ ಆರಂಭಿಸಲಾಗಿತ್ತು.

ಈ ಅಭಿಯಾನ ಕಳೆದ ಕಳೆದ ಒಂದು ವರ್ಷದಿಂದ ರಾಜ್ಯದಲ್ಲಿ ನಿರೀಕ್ಷೆಗೂ ಮೀರಿದ ವೇಗದಲ್ಲಿ ನಡೆದಿದೆ.


### ಪೌತಿ ಖಾತೆ ಅಭಿಯಾನ

**ಸುಮಾರು 49 ಲಕ್ಷ ಜಮೀನುಗಳು ಮೃತರ ಹೆಸರಿನಲ್ಲಿರುವುದರಿಂದ ಅವರ ವಾರಸುದಾರರಿಗೆ ಕ್ರಯ, ಸಾಲ, ವಿಭಾಗ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಹತ್ತಾರು ವರ್ಷಗಳಿಂದ ಭೂದಾಖಲೆಗಳು ವಾರಸುದಾರರ ಹೆಸರಿಗೆ ಖಾತೆ ಬದಲಾವಣೆ ಆಗದೇ, ದಾಖಲೆ ನಿರ್ವಹಣೆ ಅಸಮರ್ಪಕವಾಗಿರುವುದನ್ನು ನಿವಾರಿಸಿ. ಖಾತೆಗಳನ್ನು ವಾರಸುದಾರರಿಗೆ ವರ್ಗಾವಣೆ ಮಾಡಿ, ದಾಖಲೆಗಳನ್ನು ಸಮರ್ಪಕ ಮತ್ತು ಪಕ್ಕಾಗೊಳಿಸುವ ಇ-ಪೌತಿ ಖಾತಾ ಅಭಿಯಾನವನ್ನು ಕಂದಾಯ ಇಲಾಖೆ ಜರುಗಿಸುತ್ತಿದೆ. ರೈತರ ಅರ್ಜಿಗಳಿಗೂ ಕಾಯದೆ. ಇಲಾಖೆಯೇ ರೈತರ ಮನೆ ಬಾಗಿಲಿಗೆ ಹೋಗಿ ಈ ಹಿಂದೆ ಹತ್ತಾರು ವರ್ಷಗಳಿಂದ ಬಾಕಿ ಇದ್ದ ಪೌತಿ ಖಾತೆಗಳನ್ನು ವಾರಸುದಾರರಿಗೆ ಸ್ವಯಂಪ್ರೇರಣೆಯಿಂದ ಖಾತೆ ಮಾಡಿಕೊಡುವ ಕೆಲಸ ಈಗ ನಡೆಯುತ್ತಿದೆ. ಈಗಾಗಲೇ 13 ಲಕ್ಷ ಜಮೀನುಗಳನ್ನು ವಾರಸುದಾರರ ಮನೆ ಬಾಗಿಲಿಗೆ ಹೋಗಿ ಖಾತೆ ಮಾಡಿಕೊಡಲಾಗಿದೆ. ಕುಟುಂಬಗಳಲ್ಲಿ ವ್ಯಾಜ್ಯವಿರುವ ಪ್ರಕರಣಗಳನ್ನು ಹೊರತುಪಡಿಸಿ ಉಳಿದ ಜಮೀನುಗಳನ್ನು ಪೌತಿ ಖಾತೆ ಮಾಡಬೇಕು. ಪೌತಿಖಾತೆ ಅಭಿಯಾನದ ಪೌತಿ ಖಾತೆ ಮಾಡಿರುವ ಗ್ರಾಮ ಆಡಳಿತಾಧಿಕಾರಿ ಗ್ರಾಮ ಸಹಾಯಕರುಗಳಿಗೆ ರೂ. 5.00 ಕೋಟಿ ಪ್ರೋತ್ಸಾಹಧನ ನೀಡುವುದಾಗಿ ಯೂ ಘೋಷಿಸಿದರು.**

### ಭೂ ಸುರಕ್ಷಾ ಅಭಿಯಾನ

**ಭೂ ಸುರಕ್ಷಾ ಅಭಿಯಾನದ ಅಡಿಯಲ್ಲಿ ಈವರೆಗೆ 71.19 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಿ ಡಿಜಿಟಲೀಕರಿಸಲಾಗಿದೆ. ಇನ್ನೂ 30 ಕೋಟಿ ಪುಟಗಳ ಸ್ಕ್ಯಾನ್ ಮಾಡುವ ಕೆಲಸ ಬಾಕಿ ಇದ್ದು, ಪ್ರತಿ ದಿನ ಸುಮಾರು 17,500 ಲಕ್ಷ ಪುಟ ಸ್ಕ್ಯಾನ್ ಮಾಡಲಾಗುತ್ತಿದೆ. ಈ ವರ್ಷದ ಏಪ್ರಿಲ್ ಕೊನೆಯ ಒಳಗೆ ಈ ಕೆಲಸವನ್ನು ಮುಗಿಸಬೇಕು. ಈಗಾಗಲೇ ಜನ ಸಾಮಾನ್ಯರಿಗೆ 52,70 ಲಕ್ಷ ಪುಟಗಳನ್ನು ಆನ್ಲೈನ್ ಮೂಲಕ ವಿತರಿಸಲಾಗಿದ್ದು, ಶೀಘ್ರದಲ್ಲಿ ಎಲ್ಲಾ ಭೂ ದಾಖಲೆಗಳೂ ಆನ್ಲೈನ್ ಮೂಲಕ ವಿತರಿಸುವಂತಾಗಬೇಕು ಎಂದು ತಾಕೀತು ಮಾಡಿದರು. ಅಲ್ಲದೆ, ದಾಖಲೆಗಳನ್ನು ತಿದ್ದುವ ಕೆಲಸಗಳೂ ಈ ಹಿಂದೆ ಎಗ್ಗಿಲ್ಲದೆ ನಡೆದಿದ್ದು ರೈತರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಹೀಗಾಗಿ ಇಂತಹ ಪ್ರವೃತ್ತಿಗೆ ತಡೆಯೊಡ್ಡಬೇಕು.**

ರಾಜ್ಯದ ರೈತರಿಗೆ ಗುಡ್ ನ್ಯೂಸ್


ಉದಯವಾಹಿನಿ ಚಿತ್ರ

## ರೇಣುಕಾ ಸ್ವಾಮಿ ಪ್ರಕರಣ: ಸುಳ್ಳು ಸಾಕ್ಷ್ಯ ಆರೋಪಕ್ಕೆ ಎಸ್‌ಪಿ ಪ್ರಸನ್ನ ತಿರುಗೇಟು

• ಉದಯವಾಹಿನಿ, ಬೆಂಗಳೂರು

ರೇಣುಕಾ ಸ್ವಾಮಿ ಕೊಲೆ ಪ್ರಕರಣದ ತನಿಖೆ ನಡೆಸಿರುವ ತನಿಖಾಧಿಕಾರಿಗಳು ಸಾಕ್ಷ್ಯ ತಿದ್ದಿದ್ದಾರೆ. ಎಂಬ ಆರೋಪ ಇತ್ತೀಚೆಗೆ ಕೇಳಿ ಬಂದಿತ್ತು. ಇದರ ವಿರುದ್ಧ ದರ್ಶನ್ ಅಭಿಮಾನಿಗಳು ಪ್ರತಿಭಟನೆ ನಡೆಸಲಿದ್ದಾರೆ ಎಂಬ ಸುದ್ದಿಯೂ ಹರಿದಾಡಿತ್ತು.

ಆದರೆ ಇದೀಗ ಈ ಆರೋಪಕ್ಕೆ ಎಸ್‌ಪಿಪಿ ಪ್ರಸನ್ನ ಕುಮಾರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.ಅಲ್ಲದೆ ಆರೋಪಿಯೊಬ್ಬರ ಪರ ವಕೀಲರು ಉದ್ದೇಶಪೂರ್ವಕವಾಗಿ ಹಾಗೂ ಕೇವಲ ಪ್ರಚಾರಕ್ಕಾಗಿ ಇಂಥಹಾ ಆರೋಪಗಳನ್ನು ಮಾಡುತ್ತಿದ್ದಾರೆ ಎಂದಿದ್ದಾರೆ.

57ನೇ ಸಿಸಿಹೆಚ್ ಕೋರ್ಟ್ ವಾದಿಸಿದ ಎಸ್‌ಪಿಪಿ ಪ್ರಸನ್ನ ಕುಮಾರ್ ಅವರು, ರೇಣುಕಾ ಸ್ವಾಮಿ ಕೊಲೆ ಪ್ರಕರಣದ ಎ3 ಆರೋಪಿ ಪವನ್ ಪರ ವಕೀಲರು ಪ್ರಚಾರಕ್ಕಾಗಿ ಮೆಮೊ ಸಲ್ಲಿಸಿ, ಮಾಧ್ಯಮಗಳಲ್ಲಿ ಹೇಳಿಕೆ ನೀಡುತ್ತಿದ್ದಾರೆ.

ಮೊಬೈಲ್ ಸಂಖ್ಯೆ, ಐಎಂಇಐ ಸಂಖ್ಯೆಗಳ ಬಗ್ಗೆ ಆರೋಪಿಗಳೇ ತಕರರಾರು ಎತ್ತಿಲ್ಲ, ಅಲ್ಲದೆ, ಅವರು ಎತ್ತಿರುವ ಪ್ರಶ್ನೆಗಳಿಗೆ ತನಿಖಾಧಿಕಾರಿಗಳೇ ನ್ಯಾಯಾಲಯದಲ್ಲಿ ಉತ್ತರ ನೀಡಲಿದ್ದಾರೆ ಎಂದಿದ್ದಾರೆ.

ತನಿಖಾಧಿಕಾರಿಯನ್ನು ಆರೋಪಿ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ ಹಾಗಿದ್ದರೂ ಸಹ ಪವನ್ ಪರ ವಕೀಲರು ಅರ್ಜಿ ಸಲ್ಲಿಸಿದ್ದಾರೆ. ಇದೊಂದು ಹಾಸ್ಯಾಸ್ಪದ ಅರ್ಜಿ, ಈ ರೀತಿಯ ಅನವಶ್ಯಕ ಅರ್ಜಿಗಳನ್ನು ಸಲ್ಲಿಸಿ ಮಾಧ್ಯಮಗಳಲ್ಲಿ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಹಾಗಾಗಿ ಪವನ್ ಪರ ವಕೀಲರು ಸಲ್ಲಿಸಿರುವ ಅರ್ಜಿಯನ್ನು ವಜಾ ಮಾಡಬೇಕು ಎಂದು ಪವನ್ ಅವರು ಮನವಿ ಮಾಡಿದ್ದಾರೆ.

ಪ್ರತಿದಿನವೂ ವಿಚಾರಣೆ ನಡೆಸುವಂತೆ ದರ್ಶನ್ ಪರ ವಕೀಲರು ಸಲ್ಲಿಸಿರುವ ಅರ್ಜಿಗೆ ತಕರಾರು ಎತ್ತಿದ ಪ್ರಸನ್ನ ಅವರು, ಪ್ರತಿದಿನ ವಿಚಾರಣೆ ಸಾಧ್ಯವಿಲ್ಲವೆಂದು ಸುಪ್ರೀಂಕೋರ್ಟ್ ಹೇಳಿದೆ' ಎಂದಿದ್ದಾರೆ.

ಇನ್ನು ಕುಟುಂಬ ಸದಸ್ಯರ ಭೇಟಿಗೆ ಅವಕಾಶ ಕೋರಿ ದರ್ಶನ್ ಸಲ್ಲಿಸಿರುವ ಅರ್ಜಿಯ ಬಗ್ಗೆಯೂ ಪ್ರತಿವಾದ ಮಂಡಿಸಿದ ಪ್ರಸನ್ನ ಅವರು ಜೈಲು ಅಧಿಕಾರಿಗೆ ಮನವಿ ನೀಡದೇ ನೇರ ಅರ್ಜಿ ಸಲ್ಲಿಸಿದ್ದಾರೆ ಇದು ನಿಯಮಕ್ಕೆ ಬಾಹಿರ. ಜೈಲು ಕೈಪಿಡಿಯಲ್ಲಿರುವಂತೆ ಅಧಿಕಾರಿಗಳು ಕ್ರಮ ಕೈಗೊಳ್ಳುತ್ತಾರೆ, ಕೋರ್ಟ್ ಖುದ್ದು ಹಾಜರುಪಡಿಸಲು ಆರೋಪಿಗಳು ಕೋರಿದ್ದಾರೆ.

## ಬೆಂಗಳೂರಲ್ಲಿ ಇವಿ ಬೈಕ್ ಮಾಲೀಕನಿಂದ 35 ಕೋಟಿಗೂ ಹೆಚ್ಚು ವಂಚನೆ : ಗ್ರಾಹಕರಿಂದ ಪ್ರತಿಭಟನೆ!



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಲ್ಲಿ ಇವಿ ಬೈಕ್ ಮಾಲೀಕನಿಂದ ಇದೀಗ 35 ಕೋಟಿಗೂ ಹೆಚ್ಚು ವಂಚನೆ ಆರೋಪ ಕೇಳಿ ಬರುತ್ತಿದೆ. ಸುಮಾರು 3,750 ಜನರಿಗೆ 35 ಕೋಟಿಗೂ ಅಧಿಕ ವಂಚನೆ ಎಸಗಿರುವ ಆರೋಪ ಕೇಳಿ ಬಂದಿದೆ.

ಸ್ಕೀಮ್ ಗಳ ಕಥೆ ಹೇಳಿ ಈಗ 35 ಕೋಟಿಗೂ ಹೆಚ್ಚು ವಂಚನೆ ಎಸಗಿದ್ದಾನೆ. ಈ ಒಂದು ಸ್ಕೀಮ್ ನಂಬಿ ಜನರು ದುಡ್ಡು ಕಟ್ಟಿ ಕೋಟ್ಯಾಂತರ ರೂಪಾಯಿ ಕಳೆದುಕೊಂಡಿದ್ದಾರೆ. ಆಪ್ ಕಿ ಇವಿ ಶೋರೂಮ್ ಮಾಲೀಕ ರವಿ ಮತ್ತು ಹನುಮಂತರಾಜು ಮತ್ತೋರ್ವ ರಾಜು ವಿರುದ್ಧ ಮೋಸ ಮಾಡಿರುವ ಆರೋಪ ಕೇಳಿ ಬಂದಿದೆ. ದಾಖಲೆ ಪಡೆದು ಕೋಟಾಕ್ ಮಹಿಂದ್ರ ಬ್ಯಾಂಕ್‌ನಲ್ಲಿ ಲೋನ್ 1,50,000 ಲೋನ್ ಮಾಡಿಸುತ್ತಿದ್ದ.

ಶೋರೂಮ್ ಮಾಲೀಕ ರವಿ 20,000 ಕಟ್ಟಿ ಉಳಿದ ಮೊತ್ತ ಸಬ್ಸಿಡಿಯಲ್ಲಿ ಬಿಡಲಾಗುತ್ತದೆ. ಒಂದು ವೇಳೆ ಹಣ ಕಟ್ಟುವುದಾದರೆ ನಾವೇ ಕಟ್ಟುತ್ತೇವೆ ಎಂದು ಜನರನ್ನು ನಂಬಿಸಿದ್ದಾನೆ.

ಇವಿ ಬೈಕ್ ಶೋರೂಮ್ ಮಾಲೀಕನ ವಿರುದ್ಧ ಇದೀಗ ಗ್ರಾಹಕರು ಪ್ರತಿಭಟನೆ ಮಾಡುತ್ತಿದ್ದಾರೆ. ಜಾಲಹಳ್ಳಿಯಿಂದ ಎಂಜಿ ರಸ್ತೆವರಿಗೂ ಬೈಕ್ ಮೂಲಕ ರ್‍ಯಾಲಿ ಮಾಡುತ್ತಿದ್ದಾರೆ.

## ಸಿದ್ದರಾಮಯ್ಯ ಸರ್ಕಾರಕ್ಕೆ ಒಳಮೀಸಲಾತಿ ಶಾಕ್!

• ಉದಯವಾಹಿನಿ ,ಬೆಂಗಳೂರು

ಒಳಮೀಸಲಾತಿ ಕಿಚ್ಚು ಈಗ ಸಿದ್ದರಾಮಯ್ಯ ಸರ್ಕಾರದ ಬುಡಕ್ಕೆ ಬಂದಿದೆ. ಸುಪ್ರೀಂ ಕೋರ್ಟ್ ಮಹತ್ವದ ತೀರ್ಪಿನ ಹೊರತಾಗಿಯೂ ರಾಜ್ಯದಲ್ಲಿ ಒಳಮೀಸಲಾತಿ ಅನುಷ್ಠಾನ ವಿಳಂಬವಾಗುತ್ತಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿರುವ ಹಿರಿಯ ಸಚಿವ ಕೆ.ಹೆಚ್. ಮುನಿಯಪ್ಪ, ಈಗ ರಾಜೀನಾಮೆ ಅಸ್ತ್ರ ಪ್ರಯೋಗಿಸಲು ಮುಂದಾಗಿದ್ದಾರೆ. ಇದು ಕಾಂಗ್ರೆಸ್ ಪಾಳಯದಲ್ಲಿ ತಲ್ಲಣ ಸೃಷ್ಟಿಸಿದೆ.

**ಮಾರ್ಚ್ 15ರ ಡೆಡ್‌ಲೈನ್: ಮುನಿಯಪ್ಪ ಗಂಭೀರ ನಡೆ :** ಬೆಂಗಳೂರಿನಲ್ಲಿ ನಡೆದ ಮಾದಿಗ ಒಳಮೀಸಲಾತಿ ಹೋರಾಟಗಾರರ ತುರ್ತು ಸಭೆಯಲ್ಲಿ ಭಾಗವಹಿಸಿದ್ದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಹೆಚ್. ಮುನಿಯಪ್ಪ ಅತ್ಯಂತ ಕಠಿಣ ನಿರ್ಧಾರ ಪ್ರಕಟಿಸಿದ್ದಾರೆ ಎನ್ನಲಾಗಿದೆ. ಮಾದಿಗ ಸಮುದಾಯಕ್ಕೆ ನ್ಯಾಯ ಸಿಗದಿದ್ದರೆ ಈ ಅಧಿಕಾರವಿದ್ದರೂ ಒಂದೇ, ಹೋದರೂ ಒಂದೇ ಈ ತಿಂಗಳ 15ರ ಒಳಗಾಗಿ ರಾಜ್ಯ ಸರ್ಕಾರ ಒಳಮೀಸಲಾತಿ ಜಾರಿಗೊಳಿಸದಿದ್ದರೆ, ನಾನು ನನ್ನ ಸಚಿವ ಮತ್ತು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬೀದಿಗೆ ಇಳಿಯುತ್ತೇನೆ ಎಂದು ಅವರು ಹೋರಾಟಗಾರರ ಮುಂದೆ ಗುಡುಗಿದ್ದಾರೆ ಎನ್ನಲಾಗುತ್ತಿದೆ.

**30 ವರ್ಷಗಳ ಹಳೇ ನೋವು: ಹೋರಾಟದ ಹಿನ್ನೆಲೆ :** ಪರಿಶಿಷ್ಟ ಜಾತಿಯಲ್ಲಿನ (ಅತ್ಯಂತ ಹಿಂದುಳಿದ ವರ್ಗಗಳಿಗೆ ಎ, ಬಿ, ಸಿ, ಡಿ' ವರ್ಗೀಕರಣದ ಮೂಲಕ ಸಮಾನ ನ್ಯಾಯ ಒದಗಿಸಬೇಕು ಎಂಬುದು ಮಾದಿಗ ಸಮುದಾಯದ ದಶಕಗಳ ಬೇಡಿಕೆ. ನ್ಯಾ. ಎ.ಜೆ. ಸದಾಶಿವ ಆಯೋಗದ ಶಿಫಾರಸುಗಳಿಗಾಗಿ ಹೋರಾಟ ನಡೆದಿತ್ತು.


ಉದಯವಾಹಿನಿ ಚಿತ್ರ

**ಸುಪ್ರೀಂ ಕೋರ್ಟ್ ಹಸಿರು ನಿಶಾನೆ:** ಇತ್ತೀಚೆಗೆ ಸುಪ್ರೀಂ ಕೋರ್ಟ್ ರಾಜ್ಯ ಸರ್ಕಾರಗಳಿಗೆ ಒಳಮೀಸಲಾತಿ ಕಲ್ಪಿಸುವ ಸಂಪೂರ್ಣ ಅಧಿಕಾರ ನೀಡಿ ಐತಿಹಾಸಿಕ ತೀರ್ಪು ಪ್ರಕಟಿಸಿತ್ತು.

**ವಿಳಂಬ ಧೋರಣೆ:** ಸುಪ್ರೀಂ ಕೋರ್ಟ್ ತೀರ್ಪು ಬಂದರೂ ರಾಜ್ಯ ಸರ್ಕಾರ ನಾಗಮೋಹನ್ ದಾಸ್ ಸಮಿತಿಯ ವರದಿ ಆಧರಿಸಿ ಅಧಿಕೃತ ಆದೇಶ ಹೊರಡಿಸಲು ವಿಳಂಬ ಮಾಡುತ್ತಿರುವುದು ಈಗ ಮುನಿಯಪ್ಪ ಅವರ ಕೆಂಗಣ್ಣಿಗೆ ಗುರಿಯಾಗಿದೆ.

**50 ಸಾವಿರ ಹುದ್ದೆಗಳ ನೇಮಕಾತಿ ಅನ್ಯಾಯದ ಭೀತಿ :** ರಾಜ್ಯ ಸರ್ಕಾರ ಸದ್ಯದಲ್ಲೇ ಬೃಹತ್ ಮಟ್ಟದ ಅಂದರೆ ಸುಮಾರು 50,000ಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳ ಭರ್ತಿಗೆ ಸಜ್ಜಾಗುತ್ತಿದೆ.

ಒಂದು ವೇಳೆ ಈ ನೇಮಕಾತಿ ಪ್ರಕ್ರಿಯೆ ಹಳೆ ಪದ್ಧತಿಯಲ್ಲೇ ನಡೆದರೆ, ಮಾದಿಗ ಸಮುದಾಯಕ್ಕೆ ದೊಡ್ಡ ಮಟ್ಟದ ಅನ್ಯಾಯವಾಗಲಿದೆ ಎಂಬುದು ಹೋರಾಟಗಾರರ ವಾದ. ಈ ಕಾರಣಕ್ಕಾಗಿಯೇ ನೇಮಕಾತಿ ಅಧಿಸೂಚನೆ ಹೊರಬೀಳುವ ಮೊದಲೇ ಒಳಮೀಸಲಾತಿ ಜಾರಿಯಾಗಬೇಕು ಎಂದು ಮುನಿಯಪ್ಪ ಸರ್ಕಾರಕ್ಕೆ ಪಟ್ಟು ಹಿಡಿದಿದ್ದಾರೆ.

## ಜೈನ್ ಶಾಲೆಗೆ 12 ಕೋಟಿ ರೂ.ಗಳ ಪ್ರೋ- ರೇಟಾ ಬಿಲ್ ಪಾವತಿಸಲು ಜಲಮಂಡಳಿ ನೀಡಿದ್ದ ಡಿಮ್ಯಾಂಡ್ ನೋಟಿಸ್ ಎತ್ತಿಹಿಡಿದ ಹೈಕೋರ್ಟ್

• ಉದಯವಾಹಿನಿ,ಬೆಂಗಳೂರು

ಕನಕಪುರ ರಸ್ತೆಯಲ್ಲಿರುವ ಜೈನ್ ಇಂಟರ್ನ್ಯಾಷನಲ್ ವಸತಿ ಶಾಲೆಯಗೆ ಪ್ರೋ-ರೇಟಾ ನೀರಿನ ಶುಲ್ಕವಾಗಿ 12 ಕೋಟಿ ರೂ.ಗಳ ಪಾವತಿಸಲು ಡಿಮ್ಯಾಂಡ್ ನೋಡಿಸ್ ಜಾರಿ ಮಾಡಿದ್ದ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಪ್ರೋ-ರೇಟಾ ಶುಲ್ಕ ಪಾವತಿಸುವಂತೆ ಜಾರಿಮಾಡಿದ್ದ ಎರಡು ಡಿಮ್ಯಾಂಡ್ ನೋಟಿಸ್‌ಗಳನ್ನು ರದ್ದುಪಡಿಸಬೇಕೆಂದು ಕೋರಿ ಜೈನ್ ಇಂಟರ್ ನ್ಯಾಷನಲ್ ವಸತಿ ಶಾಲೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಜಲಮಂಡಳಿ ಕಾಯಿದೆ ಸೆಕ್ಷನ್ 16ರ ಅಡಿ ಪ್ರೋ-ರೇಟಾ ಶುಲ್ಕವನ್ನು ವಿಧಿಸಲು ಅಧಿಕಾರವಿದೆ. 2004ರ ಒಪ್ಪಂದದ ಪ್ರಕಾರ ಅರ್ಜಿದಾರ ಸಂಸ್ಥೆ, ಪೈಪ್‌ಲೈನ್ ಅಳವಡಿಕೆ ಮಾಡುವುದಕ್ಕೆ ಹಣಕಾಸು ಒದಗಿಸಿದ್ದರು. ಅದರ ನಿರ್ವಹಣೆ ಸೇರಿದಂತೆ ವಿವಿಧ ಕಾರಣಗಳಿಗಾಗಿ ವಿಧಿಸುವ ಪ್ರೋ - ರೇಟಾ ಶುಲ್ಕವನ್ನು ಪಾವತಿಸಬೇಕಾಗಿದೆ. ಪ್ರೋ- ರೇಟಾ ಶುಲ್ಕ ರದ್ದುಪಡಿಸಲಾಗುವುದಿಲ್ಲ ಎಂದು ಪೀಠ ಹೇಳಿದೆ. ಅಲ್ಲದೆ, ಶಿಕ್ಷಣ ಸಂಸ್ಥೆಗೆ ಬೆಸ್ಕಾಂ ವಾಣಿಜ್ಯ ಕಟ್ಟಡ ಎಂಬುದಾಗಿ ಶುಲ್ಕವನ್ನು ವಸೂಲಿ ಮಾಡುತ್ತಿದ್ದು, ನೀರಿನ ಸರಬರಾಜಿಗೂ ವಾಣಿಜ್ಯ ಕಟ್ಟಡ ಎಂದು ಗುರುತಿಸಿ ಶುಲ್ಕ ಪಾವತಿಸಲು ನೀಡಿರುವ ಡಿಮ್ಯಾಂಡ್ ನೋಟಿಸ್‌ನಲ್ಲಿ ಯಾವುದೇ ದೋಷಗಳಿಲ್ಲ ಎಂದು ಪೀಠ ಹೇಳಿದೆ.

**ಪ್ರಕರಣದ ಹಿನ್ನೆಲೆ:** ಅರ್ಜಿದಾರರು ಶ್ರೀ ಭಗವಾನ್ ಮಹಾವೀರ್


ಉದಯವಾಹಿನಿ ಚಿತ್ರ

ಜೂನ್ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ಅಡಿಯ ಶಿಕ್ಷಣ ಸಂಸ್ಥೆಯಾಗಿದೆ. ಈ ಸಂಸ್ಥೆ ಕನಕಪುರ ತಾಲ್ಲೂಕಿನಲ್ಲಿ 5 ಶಿಕ್ಷಣ ಸಂಸ್ಥೆಗಳನ್ನು ಹೊಂದಿದೆ. ಕನಕಪುರದಲ್ಲಿರುವ ಜೈನ್ ಪಬ್ಲಿಕ್ ಸ್ಕೂಲ್, ಜೈನ್ ಪಿಯು ಕಾಲೇಜು, ಜೈನ್ ವಿವಿ ಕ್ಯಾಂಪಸ್ ಮತ್ತು ಜೈನ್ ಇಂಟರ್ ನ್ಯಾಷನಲ್ ವಸತಿ ಶಾಲೆ ನಡೆಸುತ್ತಿದೆ.

ಈ ಸಂಸ್ಥೆಯಲ್ಲಿ 3 ಸಾವಿರ ಸ್ಥಳೀಯ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಕನಕಪುರ ತಾಲ್ಲೂಕಿನಲ್ಲಿ ಬೋರ್ ವೆಲ್ ನೀರು ಬಳಕೆಗೆ ಯೋಗ್ಯವಲ್ಲದ ಪರಿಣಾಮ ಶಾಲೆಗೆ 9 ಲಕ್ಷ ಲೀಟರ್ ನೀರನ್ನು ರಿಯಾಯತಿ ದರದಲ್ಲಿ ಸರಬರಾಜು ಮಾಡಬೇಕು ಎಂದು ಬಿಡಬ್ಲ್ಯೂಎಸ್‌ಎಸ್‌ಬಿಗೆ ಶಾಲೆಯ ಆಡಳಿತ ಮಂಡಳಿ ಮನವಿ ಸಲ್ಲಿಸಿತ್ತು.

ಅದರಂತೆ ಈ ಮನವಿಯನ್ನು ಪುರಸ್ಕರಿಸಿದ್ದ ಮಂಡಳಿ ದಿನಕ್ಕೆ 9 ಲಕ್ಷ ಲೀಟರ್‌ಗಳ ನೀರು ಪೂರೈಸುವುದಕ್ಕೆ ಒಪ್ಪಿಗೆ ನೀಡಿತ್ತು. ಇದಕ್ಕಾಗಿ ಶಾಲೆ ಪೈಪ್ ಲೈನ್ ಹಾಕಲು 93 ಲಕ್ಷ ರೂ.ಗಳನ್ನು ಪಾವತಿ ಮಾಡಿತ್ತು.

### ಒಳಮೀಸಲಾತಿಯೊಂದಿಗೆ ನೇಮಕಾತಿಗೆ ಮಾದಿಗ ಸಮುದಾಯ ಪಟ್ಟು

## ಸಚಿವರುಗಳಿಗೆ ಘೇರಾವ್ ತೀರ್ಮಾನ

• ಉದಯವಾಹಿನಿ, ಬೆಂಗಳೂರು

ಒಳಮೀಸಲಾತಿ ಇಲ್ಲದೆ ನೇಮಕಾತಿ ಆದೇಶವನ್ನು ತಕ್ಷಣ ಹಿಂಪಡೆಯಲು ಒತ್ತಾಯಿಸಿರುವ ರಾಜ್ಯ ಮಾದಿಗರ ಸಂಘಟನೆಗಳ ಒಕ್ಕೂಟ ಮಾರ್ಚ್ 6 ರಂದು ಸಚಿವರು, ಶಾಸಕರಿಗೆ ಮುತ್ತಿಗೆ ಹಾಗೂ ಮಾ.12ರಂದು ಬೃಹತ್ ಹೋರಾಟ ಕೈಗೊಳ್ಳಲು ತೀರ್ಮಾನಿಸಿದೆ.

ಕರ್ನಾಟಕ ರಾಜ್ಯ ಮಾದಿಗರ ಸಂಘಟನೆಗಳ ಒಕ್ಕೂಟ ಈ ಸಂಬಂಧ ಸಭೆ ನಡೆಸಿ, ಸರ್ಕಾರಕ್ಕೆ 12 ಅಂಶಗಳ ಹಕ್ಕೊತ್ತಾಯ ಮಾಡಿದೆ. ಸಭೆಯಲ್ಲಿ ಪರಿಶಿಷ್ಟ ಜಾತಿ, ಸಮುದಾಯಗಳ ಹಿತ ಕಾಪಾಡಲು ಅಸಮರ್ಥರಾದ ಮತ್ತು ಎಲ್ಲಾ ಸಮುದಾಯಗಳ ಹಿತ ಕಾಪಾಡುವುದಾಗಿ ಸಂವಿಧಾನದ ಮೇಲೆ ಪ್ರಮಾಣ ಮಾಡಿ, ಕೇವಲ ಬಲಗೈ ಸಮಾಜದ ಪ್ರತಿನಿಧಿಯಂತೆ ವರ್ತಿಸುತ್ತಿರುವ ಅಪ್ಪಟ ಜಾತಿವಾದಿ, ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಹಾಗೂ ಸಂವಿಧಾನ ವಿರೋಧಿ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್. ಸಿ ಮಹಾದೇವಪ್ಪ ಇವರ ರಾಜೀನಾಮೆಯನ್ನು ಪಡೆಯಲು ಮತ್ತು ಸಮಾಜ ಕಲ್ಯಾಣ ಇಲಾಖೆಯ ಹಾಗೂ ಡಿಪಿಎಆರ್ ಇಲಾಖೆಯ ಐ.ಎ.ಎಸ್/ಕೆಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲು


ಉದಯವಾಹಿನಿ ಚಿತ್ರ

ಆಗ್ರಹಿಸಿದೆ. ಸಾಮಾಜಿಕ ನ್ಯಾಯದ ಪರಿಶಿಷ್ಟ ಜಾತಿ ಒಳ ಮೀಸಲಾತಿಯಂತೆ ಹುದ್ದೆಗಳನ್ನು ಭರ್ತಿ ಮಾಡಲೆಂದೇ 28.10.2024ರಿಂದ ತಡೆ ಹಿಡಿಯಲಾದ ಹುದ್ದೆಗಳಿಗೆ ಒಳ ಮೀಸಲಾತಿ ತಪ್ಪಿಸಿ, ಬಾಯಿಗೆ ಬಂದ ಅನ್ನದ ತುತ್ತನ್ನು ಕಸಿದು, 17% ಅಥವಾ 15% ದಲ್ಲಿ ಒಳಮೀಸಲಾತಿ ಬೇಡಿಕೆ ಪರಿಗಣಿಸದೆ ತೀವ್ರ ವಿರೋಧದ ನಡುವೆ ಒಳ ಮೀಸಲಾತಿ ತಪ್ಪಿಸಿ, ನೇಮಕಾತಿ ಪ್ರಕ್ರಿಯೆ ಕೈಗೊಳ್ಳಲು 27.02.2026 ರಂದು ಹೊರಡಿಸಿರುವ ಆದೇಶ ಕೂಡಲೇ ಹಿಂಪಡೆಯಲು ಆಗ್ರಹಿಸಲಾಗಿದೆ.

ಕೂಡಲೇ ವಿಶೇಷ ಕ್ಯಾಬಿನೆಟ್ ಕರೆದು ಒಳ ಮೀಸಲಾತಿಯ 17% ಅಥವಾ 15%ರಲ್ಲಿ ಒಳಮೀಸಲಾತಿ ಕೋರುತ್ತಿರುವ ಮಾದಿಗ ಸಂಬಂಧಿತ ಜಾತಿಗೆ 15%, ಪ. ಜಾ ಮೀಸಲಾತಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿಂದುಳಿದಿರುವುವಿಕೆ ಆಧಾರದ ಮೇಲೆ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯ ಅಥವಾ ತಮ್ಮದೇ ಸರ್ಕಾರ ನೇಮಿಸಿ ಅಂಗೀಕರಿಸಿರುವ ನ್ಯಾಯಮೂರ್ತಿ ನಾಗಮೋಹನ ದಾಸ್ ಆಯೋಗದ ಶಿಫಾರಸ್ಸಿನ ಪ್ರಮಾಣದಂತೆ ಮಾದಿಗ ಮತ್ತು ಸಂಬಂಧಿತ ಜಾತಿಗಳಿಗೆ 6% (ಗುಂಪು-ಎ) ಮತ್ತು ಅಲೆಮಾರಿ ಸಮುದಾಯಕ್ಕೆ 1% (ಗುಂಪು-ಬಿ) ಮತ್ತು ಬಲಗೈ ಸಮುದಾಯ ಕೊರಮ, ಕೊರಚ, ಲಂಬಾಣಿ, ಭೋವಿ ಸೇರಿ ಒಂದು ಗುಂಪು (ಗುಂಪು-ಸಿ) ಎಂದು ಮರು ವರ್ಗೀಕರಿಸಿ ಕೂಡಲೇ ಪರಿಷ್ಕೃತ ಒಳ ಮೀಸಲಾತಿ ಕಲ್ಪಿಸಿ ಆದೇಶಿಸಿ 27.02.2026ರಂದು ಹೊರಡಿಸಿರುವ ಡಿಪಿಎಆರ್ ಆದೇಶವನ್ನು ಕೂಡಲೇ ಹಿಂಪಡೆದು ಪರಿಷ್ಕೃತ ರೋಸ್ಟರ್ ಬಿಂದುಗಳನ್ನು ಗುರುತಿಸಿ, ನಡುವೆ ಒಳ ಮೀಸಲಾತಿ ತಪ್ಪಿಸಿ, ಆದೇಶಿಸಿ 56,342 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಆರಂಭಿಸುವಂತೆ ಆಗ್ರಹಿಸಲಾಗಿದೆ.

### ಚುನಾವಣೆಯಲ್ಲಿ ತಕ್ಕಪಾಠ

**ಬೇಡಿಕೆ ಈಡೇರಿಸದೇ ಇದ್ದಲ್ಲಿ ಮಾದಿಗ ಸಮುದಾಯ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ತಕ್ಕ ಪಾಠ ಕಲಿಸಲಿದೆ ಎಂದು ಸಮುದಾಯದ ನಾಯಕರು ಎಚ್ಚರಿಕೆ ನೀಡಿದರು. ಒಳಮೀಸಲಾತಿ ವರ್ಗೀಕರಣ ಮಾಡದೇ ಹೋದರೆ ಹೋರಾಟ ಯಾವ ರೂಪ ತಾಳುತ್ತೆ ಅನ್ನೋದು ಗೊತ್ತಿಲ್ಲ. ಅದಕ್ಕೆ ಸರ್ಕಾರ ಹೊಣೆಯಾಗಲಿದೆ.**

ಉದಯ ವಾಹಿನಿ
ಪ್ರಾದೇಶಿಕ
ಬುಧವಾರ 04 ಮಾರ್ಚ್ 2026 | 03

# ಗುಣಮಟ್ಟದ ಹಾಲು ಪೂರೈಕೆಗೆ ಆದ್ಯತೆ ನೀಡಿ : ಹೆಚ್ಚೆಚ್ಚು ಲಾಭ ಪಡೆಯಿರಿ : ಶಾಸಕ ಗಣೇಶ್ ಪ್ರಸಾದ್ ಸಲಹೆ

• ಉದಯವಾಹಿನಿ, ಗುಂಡ್ಲುಪೇಟೆ

ಗುಣಮಟ್ಟದ ಹಾಲು ಪೂರೈಕೆಗೆ ರೈತರು ಆದ್ಯತೆ ನೀಡಬೇಕು ಎಂದು ಶಾಸಕ ಎಚ್.ಎಂ.ಗಣೇಶ್ ಪ್ರಸಾದ್ ಸಲಹೆ ನೀಡಿದರು. ತಾಲ್ಲೂಕಿನ ಬನ್ನಿತಾಳಪುರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಸಭಾಭವನವನ್ನ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ತಾಲ್ಲೂಕಿನಲ್ಲಿ 130ಕ್ಕೂ ಹೆಚ್ಚು ಡೇರಿಗಳಿದ್ದು ಅವುಗಳ ಪೈಕಿ 30 ಡೇರಿಗಳಲ್ಲಿ ಸಭಾಭವನಗಳು ಲಭ್ಯತೆಯಿದ್ದು, ಡೇರಿಯ ಸಭೆ ಸಮಾರಂಭಗಳನ್ನ ನಡೆಸಲು ಅನುಕೂಲಕರವಾಗಿದೆ ಮುಂದಿನ ದಿನಗಳಲ್ಲಿ ಸಭಾಭವನಗಳಾದರೆ ಸ್ಥಳೀಯವಾಗಿ ಸಹಕಾರಿಯಾಗುತ್ತದೆ ಸಲಹೆ ನೀಡಿದರು.


ಉದಯವಾಹಿನಿ ಚಿತ್ರ

ಚಾಮುಲ್ ತರುವಲ್ಲಿ ಮಾಜಿ ಸಚಿವರು ದಿವಂಗತ ಎಚ್.ಎಸ್. ಮಹದೇವಪ್ರಸಾದ್ ಕೊಡುಗೆ ಅಪಾರವಾಗಿದ್ದು ಜಿಲ್ಲೆಯ ರೈತರು ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಲು ದಾರಿದೀಪವಾಯಿತು, ಚಾಮುಲ್ ಹೆಮ್ಮರವಾಗಿ ಬೆಳೆಯಲು ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ತಿಳಿಸಿದರು. ಬನ್ನಿತಾಳಪುರ ಗ್ರಾಮದಲ್ಲಿ ಸಾಕಷ್ಟು ಬೇಡಿಕೆಗಳಿದ್ದು ಬಹುಮುಖ್ಯವಾಗಿ ರಸ್ತೆ ಅಭಿವೃದ್ಧಿಗೆ ಮುಖ್ಯಮಂತ್ರಿಗಳ ವಿಶೇಷವಾಗಿ ಅನುದಾನಡಿ ಒಂದು ಕೋಟಿ ಕಾಯ್ದಿರಿಸಿದ್ದು ಶೀಘ್ರದಲ್ಲೇ ಭೂಮಿಪೂಜೆ ನೆರವೇರಿಸಲಾಗುವುದು, ಹಾಗೆಯೇ ಗ್ರಾಮದಲ್ಲಿ ಕುಡಿಯುವ ನೀರಿನ ಬವಣೆ ನಿವಾರಣೆಗೆ 15 ಲಕ್ಷ ವೆಚ್ಚದಲ್ಲಿ 50 ಸಾವಿರ ಲೀಟರ್ ಓವರ್ ಹೆಡ್ ಟ್ಯಾಂಕ್ ನಿರ್ಮಾಣಕ್ಕೆ ಅನುಮೋದನೆ ದೊರೆತಿದ್ದು ಶೀಘ್ರದಲ್ಲೇ ಭೂಮಿಪೂಜೆ ಮಾಡಲಾಗುವುದು ಉಪ್ಪಾರ ಸಮುದಾಯದ ಮುಂದುವರಿದ ಕಾಮಗಾರಿಗೆ ಎಂಟು ಲಕ್ಷ, ಮಹದೇಶ್ವರ ದೇವಸ್ಥಾನದ ಅಭಿವೃದ್ಧಿಗೆ ಐದು ಲಕ್ಷ ರೂಪಾಯಿಗಳನ್ನ ಕಾಯ್ದಿರಿಸಲಾಗಿದ್ದು ಒಟ್ಟಾರೆ ಬನ್ನಿತಾಳಪುರ ಗ್ರಾಮಕ್ಕೆ ಒಂದು ಕೋಟಿ 25 ಲಕ್ಷ ಹಣವನ್ನ ವಿಶೇಷ ಅನುದಾನವನ್ನ ನೀಡಲಾಗಿದೆ ಮುಂದಿನ ದಿನಗಳಲ್ಲಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಶ್ರಮಿಸಲಾಗುವುದು ಎಂದು ತಿಳಿಸಿದರು.

**ಕೋಟಿ 25 ಲಕ್ಷ ಹಣ ವಿಶೇಷ ಅನುದಾನ**

ಚಾಮುಲ್ ನಿರ್ದೇಶಕ ನಂಜುಂಡಪ್ರಸಾದ್, ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನಾಧಿಕಾರಿ ಚಂದ್ರಶೇಖರ್, ಚಾಮುಲ್ ವಿಸ್ತರಣಾಧಿಕಾರಿ ಪ್ರಕಾಶ್, ಸಹಕಾರ ಸಂಘ ಅಧ್ಯಕ್ಷ ಕುಮಾರಸ್ವಾಮಿ, ಉಪಾಧ್ಯಕ್ಷ ಮಾರಶೆಟ್ಟಿ, ನಿರ್ದೇಶಕರಾದ ಮಹದೇವಶೆಟ್ಟಿ, ಮಹೇಂದ್ರ, ಮಹದೇವಮ್ಮ, ಮಂಗಳಮ್ಮ, ಗೌರಮ್ಮ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

# ಮಾ.6 ರಂದು ರಾಜ್ಯ ಬಜೆಟ್ ಮಂಡನೆ

• ಉದಯವಾಹಿನಿ, ಮೈಸೂರು

ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾ.6ರಂದು ರಾಜ್ಯ ಬಜೆಟ್ ಮಂಡನೆ ಮಾಡಲಿದ್ದಾರೆ. ಸಹಜವಾಗಿಯೇ ತವರು ಜಿಲ್ಲೆಯಲ್ಲಿಯೂ ಹತ್ತಾರು ನಿರೀಕ್ಷೆಗಳಿದ್ದು, ಈ ಸಾಲಿನ ಬಜೆಟ್‌ನಲ್ಲಿ ವಿವಿಧ ಯೋಜನೆಗಳು ಘೋಷಣೆಯಾಗುವುದನ್ನು ಜನರು ಎದುರು ನೋಡುತ್ತಿದ್ದಾರೆ.

ಕಳೆದ ಬಾರಿಯ ಬಜೆಟ್‌ನಲ್ಲಿ ಹಲವು ಯೋಜನೆಗಳನ್ನು ನೀಡಿರುವ ಸಿಎಂ, ಈ ಬಾರಿ ಮೈಸೂರು ನಗರಕ್ಕೆ ಶಾಶ್ವತ ಹಾಗೂ ಗ್ರಾಮಾಂತರ ಪ್ರದೇಶಗಳ ಬಹು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಕುಡಿಯುವ ನೀರು, ಆಸ್ಪತ್ರೆಗಳ ಯೋಜನೆಗಳನ್ನು ಪ್ರಕಟಿಸುವ ಸಾಧ್ಯತೆ ಇದೆ. ಹೀಗಾಗಿ ಮೈಸೂರು ಜಿಲ್ಲೆಯ ಜನರು ಮಾ. 6ರ ಆಯವ್ಯಯದ ಮೇಲೆ ಸಾಕಷ್ಟು ನಿರೀಕ್ಷೆಗಳನ್ನು ಇಟ್ಟುಕೊಂಡು ಕಾತರದಿಂದ ಎದುರು ನೋಡುತ್ತಿದ್ದಾರೆ.

ಜಿಲ್ಲೆಯವರೇ ಆಗಿದ್ದ ಹಿಂದುಳಿದ ವರ್ಗಗಳ ಹರಿಕಾರ ಡಿ.ದೇವರಾಜ ಅರಸು ಅವರ ಸುದೀರ್ಘ ಅವಧಿಯ ದಾಖಲೆ ಮುರಿದು ಹೆಜ್ಜೆ ಇರಿಸಿರುವ ಸಿದ್ದರಾಮಯ್ಯ, ಹಣಕಾಸು ಸಚಿವರಾಗಿ 17ನೇ ಬಾರಿಗೆ ಹಾಗೂ ಮುಖ್ಯಮಂತ್ರಿಯಾಗಿ 8ನೇ ಬಾರಿಗೆ ಆಯವ್ಯಯ ಮಂಡಿಸಲಿದ್ದಾರೆ. ಸಿಎಂ ಅವರು ಮೈಸೂರಿನ ಜನತೆಗೆ ಯಾವ್ಯಾವ ಕೊಡುಗೆಗಳನ್ನು ಪ್ರಕಟಿಸಲಿದ್ದಾರೆ ಎನ್ನುವುದೂ ಅಷ್ಟೇ ಕುತೂಹಲ ಮೂಡಿಸಿದೆ.

ಮೈಸೂರು ವಿಮಾನ ನಿಲ್ದಾಣ ರನ್‌ವೇ ವಿಸ್ತರಣೆಗೆ ಬೇಕಾಗಿರುವ ಭೂಮಿ ಸ್ವಾಧೀನಕ್ಕೆ ಅನುದಾನ ಹಾಗೂ ಮೂಲಸೌಕರ್ಯಗಳನ್ನು ಒದಗಿಸಲು ಅನುದಾನ, ಬೈಪಾಸ್ ರಸ್ತೆ ನಿರ್ಮಾಣಕ್ಕೆ ಅಗತ್ಯವಿರುವ ಭೂಮಿಯ ಸ್ವಾಧೀನಕ್ಕೆ ಅನುದಾನ ಮೀಸಲಿಡುವ ನಿರೀಕ್ಷೆ ಇಡಲಾಗಿದೆ. ಹಲವು ವರ್ಷಗಳಿಂದ ಪ್ರವಾಸೋದ್ಯಮ ಅಭಿವೃದ್ಧಿಗೆ ಮೈಸೂರು ಟೂರಿಸಂ ಸರ್ಕೀಟ್ ರಚನೆ ಮಾಡಬೇಕೆಂಬ ಬೇಡಿಕೆ ಕೂಡ ಇದೆ. ಮೈಸೂರು ರೇಷ್ಮೆ ನೇಯ್ದೆ ಕಾರ್ಖಾನೆ ಪುನಶ್ಚೇತನಕ್ಕೆ ಅಗತ್ಯವಿರುವ 100 ಕೋಟಿ ರೂ. ಅನುದಾನದ ಪ್ರಸ್ತಾವನೆ ಕಳೆದ ವರ್ಷದಿಂದಲೂ ಹಣಕಾಸು ಇಲಾಖೆಯ ಎದುರು ಕಡತ ಇದ್ದು, ಅದನ್ನು ಬಜೆಟ್‌ನಲ್ಲಿ ಪ್ರಕಟಿಸುವ ನಿರೀಕ್ಷೆ ಇದೆ. ತವರು ಜಿಲ್ಲೆಗೆ ಭರಪೂರ ಕೊಡುಗೆಗಳನ್ನು ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ಬಜೆಟ್ ಬಗ್ಗೆ ಜಿಲ್ಲೆಯ ಜನರ ಮನದಲ್ಲಿ ಹತ್ತಾರು ನಿರೀಕ್ಷೆ, ಆಸೆಗಳನ್ನು ಇಟ್ಟುಕೊಂಡಿದ್ದರೆ, ಮೈಸೂರು ನಗರದ ಶಾಸಕರು ಕೂಡ ತಮ್ಮ ಕ್ಷೇತ್ರಕ್ಕೆ ಏನಾದರೂ ಯೋಜನೆಗಳು ಸಿಗಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ನಗರಪಾಲಿಕೆಯನ್ನು ಬೃಹತ್ ಮಹಾ ನಗರಪಾಲಿಕೆಯಾಗಿ ಘೋಷಣೆ ಮಾಡಿರುವ ಕಾರಣ ಕಾವೇರಿ, ಕಬಿನಿ ನದಿಯಿಂದ ಶಾಶ್ವತ ಕುಡಿಯುವ ನೀರು ಪೂರೈಕೆ ಯೋಜನೆಯ ಜತೆಗೆ, ನಗರದಲ್ಲಿ ಒಳಚರಂಡಿಯನ್ನು ಪುನರ್ ನಿರ್ಮಾಣ ಮಾಡುವ ಪ್ರಸ್ತಾವಿತ ಯುಜಿಡಿ ಯೋಜನೆಯನ್ನು ನಿರೀಕ್ಷಿಸಲಾಗಿದೆ.


ಉದಯವಾಹಿನಿ ಚಿತ್ರ

## ಸಿಎಂ ತವರು ಜಿಲ್ಲೆಯ ನಿರೀಕ್ಷೆಗಳು


### ನಿರೀಕ್ಷೆಗಳೇನು

**ಪ್ರತಿ ವರ್ಷ ನಡೆಯುವ ದಸರಾ ಮಹೋತ್ಸವ ಸುಗಮವಾಗಿರಲು ದಸರಾ ಅಭಿವೃದ್ಧಿ ಪ್ರಾಧಿಕಾರ ರಚನೆ ಮಾಡಬೇಕೆಂಬ ಬೇಡಿಕೆ ನಿರಂತರವಾಗಿ ಕೇಳಿ ಬಂದಿರುವುದರಿಂದ ಈ ಬಾರಿ ಘೋಷಣೆ ಮಾಡುವ ವಿಶ್ವಾಸದಲ್ಲಿ ನಗರದ ಜನತೆ ಇದ್ದರೆ, ಬಡವರ ಪಾಲಿನ ದೊಡ್ಡಾಸ್ಪತ್ರೆ ಎಂದೇ ಹೆಸರಾದ ಕೃಷ್ಣರಾಜೇಂದ್ರ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆಗೆ ಕಾಯಕಲ್ಪ ನೀಡಿ, ಪಾರಂಪರಿಕ ಕಟ್ಟಡಗಳ ಪುನರ್ ನಿರ್ಮಾಣ, ಮತ್ತೊಂದು ಹೊರರೋಗಿ ವಿಭಾಗ, ವಿಶ್ರಾಂತಿ, ಶಸ್ತ್ರಚಿಕಿತ್ಸಾ ಘಟಕದ ಕಟ್ಟಡ ನಿರ್ಮಾಣವನ್ನು ಪ್ರಸ್ತಾಪಿಸುವ ಸಾಧ್ಯತೆ ಇದೆ.**


### ತಾಲ್ಲೂಕು ಕೇಂದ್ರವಾಗುವುದೇ?

**ಸಿಎಂ ಸಿದ್ದರಾಮಯ್ಯ ಅವರಿಗೆ ಮುಖ್ಯಮಂತ್ರಿಯಾಗಲು ಅವಕಾಶ ಕೊಟ್ಟ ವರುಣ ಕ್ಷೇತ್ರವನ್ನು ತಾಲ್ಲೂಕು ಕೇಂದ್ರವನ್ನಾಗಿ ಮಾಡುವ ಇರಾದೆ ಹೊಸ ತಾಲ್ಲೂಕುಗಳ ಘೋಷಣೆಯಾದರೆ ವರುಣ ಹೆಸರು ಸೇರ್ಪಡೆಯಾಗುವ ಸಾಧ್ಯತೆ ಇದೆ.**

**ಹೆಚ್.ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದ ಬಳಿ ಬೊಟಾನಿಕಲ್ ಗಾರ್ಡನ್ ಮಾದರಿಯಲ್ಲಿ ಉದ್ಯಾನವನ ನಿರ್ಮಾಣ ಆಗಬೇಕೆಂಬ ಒತ್ತಡ ಬಂದರೂ ಪ್ರತಿವರ್ಷ ನಿರಾಸೆಯಾಗುತ್ತಲೇ ಇದೆ.**



**ಈ ಬಾರಿ ಶಾಸಕ ಅನಿಲ್ ಚಿಕ್ಕಮಾದು ಅವರ ಒತ್ತಾಸೆಯಿಂದ ಸೇರ್ಪಡೆಯಾಗುವ ಸಾಧ್ಯತೆ ಇದೆ. ಮೈಸೂರು ನಗರದ ದೇವರಾಜ ಮಾರುಕಟ್ಟೆ, ಲ್ಯಾನ್ಸ್ ಡೌನ್ ಕಟ್ಟಡ ನಿರ್ಮಾಣಕ್ಕೆ ಮೀಸಲಿಟ್ಟಿರುವ ಅನುದಾನ ಕಡಿಮೆಯಾಗಿದ್ದು, ಮತ್ತಷ್ಟು ಅನುದಾನ ಘೋಷಿಸುವ ಜತೆಗೆ, ಪಾರಂಪರಿಕ ಕಟ್ಟಡಗಳ ಪುನರ್ ನಿರ್ಮಾಣ, ನವೀಕರಣಕ್ಕೆ ಬಜೆಟ್‌ನಲ್ಲಿ ಮೀಸಲಿಡುವ ನಿರೀಕ್ಷೆ ಇದೆ.**



# ಕುಡಿಯುವ ನೀರಿಗೆ ಸಮಸ್ಯೆ ಆಗದಿರಲಿ

• ಉದಯವಾಹಿನಿ, ಮೈಸೂರು

ಬೇಸಿಗೆ ಪ್ರಾರಂಭವಾಗುತ್ತಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ತೊಂದರೆಯಾಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಸೂಚಿಸಿದರು. ಜಿಲ್ಲಾ ಪಂಚಾಯಿತಿಯಲ್ಲಿ ನಡೆದ ಅಧಿಕಾರಿಗಳ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಸಮಿತಿ ಕ್ರಮ ವಹಿಸಬೇಕು. ತಹಶೀಲ್ದಾರ್‌ಗಳು ತಮ್ಮ ವ್ಯಾಪ್ತಿಯಲ್ಲಿ ನೀರಿಗೆ ತೊಂದರೆ ಉಂಟಾಗಬಹುದಾದ ಗ್ರಾಮಗಳನ್ನು ಪಟ್ಟಿ ಮಾಡಿಕೊಳ್ಳಬೇಕು ಎಂದರು.

ಕಳೆದ ಬಾರಿ ಕೊರೆಯಲಾಗಿರುವ ಹಾಗೂ ಲಭ್ಯವಿರುವ ಬೋರ್ ವೆಲ್‌ಗಳ ಸ್ಥಿತಿಗತಿ ಪರಿಶೀಲಿಸಬೇಕು. ನೀರು ಲಭ್ಯವಿರುವ ಖಾಸಗಿ ಬೋರ್‌ವೆಲ್ ಪಟ್ಟಿ ಮಾಡಿಕೊಳ್ಳಬೇಕು. ಕುಡಿಯುವ ನೀರಿನ ತೊಂದರೆಯಾದ ತಕ್ಷಣ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಸಿಇಒ ಗಮನಕ್ಕೆ ತರಬೇಕು. ಬೇಸಿಗೆ ಕಾಲದಲ್ಲಿ ಸಾಂಕ್ರಾಮಿಕ ರೋಗ ಹರಡುವ ಸಾಧ್ಯತೆ ಹೆಚ್ಚಿದ್ದು, ವೈದ್ಯಾಧಿಕಾರಿಗಳು ರೋಗ ಹರಡದಂತೆ ಕೈಗೊಳ್ಳಬೇಕಿರುವ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಯೋಜನೆ ರೂಪಿಸಬೇಕು ಎಂದು ನಿರ್ದೇಶನ ನೀಡಿದರು. ಶಾಸಕ ತನ್ವೀರ್ ಸೇಠ್ ಮಾತನಾಡಿ, ಜೆಜೆಎಂ ಹಾಗೂ ಎಂವಿಎಸ್ ಯೋಜನೆಯಡಿ ಒದಗಿಸಲಾಗುತ್ತಿರುವ ಕುಡಿಯುವ ನೀರಿನ ಯೋಜನೆಗಳ ಕಾರ್ಯನಿರ್ವಹಣೆಯ ಬಗ್ಗೆ ಅಧಿಕಾರಿಗಳು ಪರಿಶೀಲಿಸಬೇಕು. ಮುಂದೆ ಬರಗಾಲ ಉಂಟಾದರೆ ವಹಿಸಬೇಕಾದ ಕ್ರಮಗಳ ಬಗ್ಗೆ ಅಧಿಕಾರಿಗಳು ಸಭೆ ನಡೆಸಿ ಬೇಕಿರುವ ಅನುದಾನದ ಬಗ್ಗೆ ವರದಿ ಸಿದ್ಧಪಡಿಸಬೇಕು ಎಂದರು.

ಕಾವೇರಿ ನೀರಾವರಿ ನಿಗಮದ ಮುಖ್ಯ ಇಂಜಿನಿಯರ್ ಮಹೇಶ್, ಅಣೆಕಟ್ಟಿನಲ್ಲಿ ನೀರಿನ ಲಭ್ಯತೆ ಇದೆ. ಹೀಗಾಗಿ, ಮಳೆ ಬಾರದಿದ್ದರೂ ಜೂನ್ ಅಂತ್ಯದವರೆಗೆ ಕುಡಿಯುವ ನೀರಿಗೆ ತೊಂದರೆ ಆಗುವುದಿಲ್ಲ. ಮೇ ಆರಂಭದಲ್ಲಿ ಮಳೆ ನಿರೀಕ್ಷಿಸಲಾಗಿದೆ ಎಂದು ಹೇಳಿದರು. ನಗರ ಯೋಜನಾ ನಿರ್ದೇಶಕಿ ಪ್ರಿಯದರ್ಶಿನಿ ಮಾತನಾಡಿ, ರಮ್ಮನಳ್ಳಿ, ಬೋಗಾದಿ, ಕಡಕೊಳ, ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿಗೆ ಸಂಬಂಧಿಸಿ ಬೇಕಿರುವ 13 ಎಂಎಲ್‌ಡಿ ನೀರಿಗೆ ಕಬಿನಿ ಯೋಜನೆಯಡಿ ಪ್ರಸ್ತಾವ ಸಲ್ಲಿಸಲಾಗಿದೆ.

## ಮಿನಿ ನ್ಯೂಸ್

# ಸಾರಿಗೆ ಬಸ್ ನಿಲ್ದಾಣದಲ್ಲಿ ಹೆಚ್ಚಿದ ಪುಂಡರ ಹಾವಳಿ : ಕಡಿವಾಣಕ್ಕೆ ಮನವಿ


ಉದಯವಾಹಿನಿ ಚಿತ್ರ

• ಉದಯವಾಹಿನಿ,ಗುಂಡ್ಲುಪೇಟೆ

ಪಟ್ಟಣದ ಸಾರಿಗೆ ಬಸ್ ತಂಗುದಾಣದಲ್ಲಿ ಪುಂಡರು ಹಾಗೂ ದ್ವಿಚಕ್ರ ವಾಹನ ಸವಾರರ ಹಾವಳಿ ಮಿತಿಮೀರಿದ್ದು ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗಾಗುತ್ತಿರುವ ಕಿರಿಕಿರಿಯನ್ನ ತಪ್ಪಿಸಿ ಪುಂಡರಿಗೆ ಕಡಿವಾಣ ಹಾಕುವಂತೆ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ವತಿಯಿಂದ ಆರಕ್ಷಕ ಉಪನಿರೀಕ್ಷಕರಿಗೆ ಮನವಿ ಸಲ್ಲಿಸಲಾಯಿತು.

ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಂದ ಶಾಲಾ ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳಿಗೆ ಬಸ್ ನಿಲ್ದಾಣದಲ್ಲಿ ಇನ್ನಿಲ್ಲದ ಸಮಸ್ಯೆ ಎದುರಿಸುತ್ತಿದ್ದಾರೆ, ತಂಗುದಾಣದ ಒಳಗೆ ಹಾಗೂ ಹೊರಗೆ ಎಗ್ಗಿಲ್ಲದೆ ಓಡಾಡುವ ಕೆಲ ಪುಂಡಪೋಕರಿಗಳಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿದೆ.

ಕಾಲೇಜು ಆರಂಭ ಹಾಗೂ ಸಂಜೆ ವೇಳೆಗೆ ಬಸ್ ನಿಲ್ದಾಣದ ಬಳಿ ನಿಲ್ಲುವ ಕೆಲ ಮಂದಿ ತೊಂದರೆ ನೀಡುವುದು ಕಂಡುಬಂದಿದೆ ಆದುದರಿಂದ ಕಾರಣಕರ್ತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಉಮಾಪತಿ ವಿನಂತಿಸಿದರು. ಡಿಪೋ ವ್ಯವಸ್ಥಾಪಕ ಕುಮಾರ್ ನಾಯಕ್, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಒತ್ತಾಯಿಸಿದೆ.

# ವಿಜೃಂಭಣೆಯ ಬೆಳ್ಳಾವಿ ರಥೋತ್ಸವ

• ಉದಯವಾಹಿನಿ,ತುಮಕೂರು

ತಾಲ್ಲೂಕಿನ ಬೆಳ್ಳಾವಿಯಲ್ಲಿ ಸೋಮವಾರ ಇತಿಹಾಸ ಪ್ರಸಿದ್ಧ ಪ್ರಸನ್ನ ಜಗದಾಂಬ ಸಮೇತ ಸೋಮೇಶ್ವರಸ್ವಾಮಿ ಬ್ರಹ್ಮ ರಥೋತ್ಸವ ವೈಭವದಿಂದ ನೆರವೇರಿತು. ಅಲಂಕೃತ ರಥದಲ್ಲಿ ದೇವರನ್ನು ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿ ಮಂಗಳವಾದ್ಯಗಳೊಂದಿಗೆ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಭಕ್ತರು ರಥವನ್ನು ಎಳೆದು ಭಕ್ತಿ ಸಮರ್ಪಿಸಿದರು. ಬಾಳೆ ಹಣ್ಣು, ದವನ, ಹೂವು ಸಮರ್ಪಿಸಿ ಧನ್ಯರಾದರು. ಬೆಳ್ಳಾವಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಜನರು ಪಾಲ್ಗೊಂಡಿದ್ದರು.

ಬೆಳ್ಳಾವಿ ಕಾರದೇಶ್ವರ ಮಠದ ಕಾರದ ವೀರಬಸವ ಸ್ವಾಮೀಜಿ, ಗ್ರಾಮಾಂತರ ಶಾಸಕ ಬಿ.ಸುರೇಶ್‌ಗೌಡ, ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ನಿಂಗಪ್ಪ, ಪ್ರಮುಖರಾದ ಜಿ.ರಮೇಶ್ ಬಾಬು, ಓಂ ಸ್ಟಾಂಜಾ, ಸುನಿಲ್, ಮಂಜುನಾಥ್, ಡಿಪೋ ರಾಜೇಂದ್ರ ಭಾಗವಹಿಸಿದ್ದರು.

# ಪಿಎಸ್‌ಐ, ಎಎಸ್‌ಐ ಲೋಕಾಯುಕ್ತ ಬಲೆಗೆ

• ಉದಯವಾಹಿನಿ,ಚಿಕ್ಕಬಳ್ಳಾಪುರ

ಬಿ ರಿಪೋರ್ಟ್ ಹಾಕಲು ಲಂಚಕ್ಕೆ ಬೇಡಿಕೆಯಿಟ್ಟ ಆರೋಪದ ಮೇಲೆ ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆ ಪಿಎಸ್‌ಐ ಶರಣಪ್ಪ ಮತ್ತು ಎಎಸ್‌ಐ ವೆಂಕಟೇಶಪ್ಪ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಮೊಟ್ಲೂರು ಗ್ರಾಮದ ರಘು ಎಂಬುವವರ ಪ್ರಕರಣಕ್ಕೆ ಸಂಬಂಧಿಸಿದ ಪ್ರಕರಣಕ್ಕೆ ಬಿ ರಿಪೋರ್ಟ್ ಹಾಕಲು 1 ಲಕ್ಷಕ್ಕೆ ಬೇಡಿಕೆ ಇಟ್ಟಿದ್ದರು.

80 ಸಾವಿರ ಪಡೆಯುವಾಗ ಕನ್ನಡ ಭವನದಲ್ಲಿ ಬಳಿ ಎಎಸ್‌ಐ ವೆಂಕಟೇಶಪ್ಪ ಮತ್ತು ನಗರ ಹೊರವಲಯದ ಚಿತ್ರಾವತಿ ಬಳಿ ಶರಣಪ್ಪ ಅವರನ್ನು ವಶಕ್ಕೆ ಲೋಕಾಯುಕ್ತ ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಲೋಕಾಯುಕ್ತ ಎಸ್‌ಪಿ ಆಂಟನಿ ಜಾರ್ಜ್ ನೇತೃತ್ವದ ತಂಡ ಈ ಕಾರ್ಯಾಚರಣೆ ನಡೆಸಿದೆ. ಗ್ರಾಮಾಂತರ ಠಾಣೆಯಲ್ಲಿ ವೆಂಕಟೇಶಪ್ಪ ಮತ್ತು ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಶರಣಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

# ದಿಗವಕೋಟೆ ಲಕ್ಷ್ಮಿನರಸಿಂಹ ರಥೋತ್ಸವ

• ಉದಯವಾಹಿನಿ,ಚಿಂತಾಮಣಿ

ತಾಲ್ಲೂಕಿನ ಪೆದ್ದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ದಿಗವಕೋಟೆ ಗ್ರಾಮದಲ್ಲಿ ವಿವಿಧ ಗ್ರಾಮಗಳ ಗ್ರಾಮಸ್ಥರ ಸಮ್ಮುಖದಲ್ಲಿ ಅಲಂಕೃತಗೊಂಡ ಲಕ್ಷ್ಮಿನರಸಿಂಹ ರಥೋತ್ಸವವು ಅದ್ದೂರಿಯಾಗಿ ಜರುಗಿತು.

ದಿಗವಕೋಟೆಯ ಲಕ್ಷ್ಮಿನರಸಿಂಹ ದೇವಾಲಯದಲ್ಲಿ ವಿಶೇಷ ಅಲಂಕಾರ ಮಾಡಲಾಗಿತ್ತು. ದೇವಾಲಯವನ್ನು ವಿವಿಧ ಪುಷ್ಪ ಮತ್ತು ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ಯಾವುದೇ ರೀತಿಯ ದೋಷಗಳಿದ್ದರೂ ಅವುಗಳನ್ನು ನಿವಾರಣೆ ಮಾಡುವ ಶಕ್ತಿಯನ್ನು ಲಕ್ಷ್ಮಿನರಸಿಂಹ ದೇವರು ಹೊಂದಿದ್ದಾನೆ ಎಂಬುದು ಈ ಭಾಗದ ಜನರ ನಂಬಿಕೆ. ದಿಗವಕೋಟೆ ಸುತ್ತಮುತ್ತಲಿನ ಗ್ರಾಮಸ್ಥರು ರಥೋತ್ಸವದಲ್ಲಿ ಭಾಗವಹಿಸಿ ತೇರನ್ನು ಎಳೆದರು. ವಿಜಯನಗರದ ಪಾಳೆಗಾರರಾದ ಪೋಲನಾಯಕ ಮತ್ತು ಕದಿರಿನಾಯಕ ಆಳ್ವಿಕೆ ವೇಳೆ ದೇವಾಲಯ ಪ್ರತಿಷ್ಠಾಪನೆಯಾಗಿದೆ.

ರಥೋತ್ಸವಕ್ಕೆ ಬಂದ ಭಕ್ತರಿಗೆ ಅನ್ನಸಂತರ್ಪಣೆ ವ್ಯವಸ್ಥೆ ಕಲ್ಪಿಸಲಾಗಿತ್ತು. ಗ್ರಾಮದವರು ಪಾನಕ, ಕೋಸಂಬರಿ ವಿತರಿಸಿದರು. ಬಟ್ಲಹಳ್ಳಿ ಪೊಲೀಸ್ ಠಾಣೆ ಪಿಎಸ್‌ಐ ಪ್ರಕಾಶ್, ಪೊಲೀಸ್ ಸಿಬ್ಬಂದಿ ಸೂಕ್ತ ಬಂದೋಬಸ್ತ್ ಮಾಡಿದ್ದರು. ಅಧ್ಯಕ್ಷ ಕೃಷ್ಣಪ್ಪ, ಉಪಾಧ್ಯಕ್ಷ ಮಲ್ಲಿಕಾರ್ಜುನಗೌಡ, ಖಜಾಂಚಿ ಗೋಪಾಲರೆಡ್ಡಿ, ಆಂತರಿಕ ಲೆಕ್ಕ ಪರಿಶೋಧಕ ರಾಜಣ್ಣ, ಮೇಲ್ವಿಚಾರಕ ನಾರಾಯಣಸ್ವಾಮಿ, ನಿರ್ದೇಶಕ ಎನ್.ರಪ್ಪರೆಡ್ಡಿ, ಎಸ್. ಮಹದೇವರೆಡ್ಡಿ ಇದ್ದರು.

# ವಿಷ ಉಣಸದಿರಿ, 3ನೇ ಹಂತದಲ್ಲಿ ಶುದ್ಧೀಕರಿಸಿ: ಸಂದೀಪ್ ರೆಡ್ಡಿ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಎಚ್.ಎನ್.ವ್ಯಾಲಿ ನೀರನ್ನು ಎರಡು ಹಂತದಲ್ಲಿ ಮಾತ್ರ ಸಂಸ್ಕರಿಸಲಾಗುತ್ತಿದೆ. ಈ ಮೂಲಕ ಚಿಕ್ಕಬಳ್ಳಾಪುರದ ಜನರು, ಜಾನುವಾರು ಮತ್ತು ಭೂಮಿಗೆ ವಿಷ ಉಣಿಸಲಾಗುತ್ತಿದೆ. ಬಜೆಟ್‌ನಲ್ಲಿ ಮೂರನೇ ಹಂತದ ಶುದ್ಧೀಕರಣಕ್ಕೆ ಹಣ ಮೀಸಲಿಡಬೇಕು ಎಂದು ಬಿಜೆಪಿ ಮುಖಂಡ ಹಾಗೂ ಭಗತ್ ಸಿಂಗ್ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್ ರೆಡ್ಡಿ ಆಗ್ರಹಿಸಿದರು.

ನಗರದಲ್ಲಿ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಮೂರನೇ ಹಂತದ ಶುದ್ಧೀಕರಣದ ವಿಚಾರದಲ್ಲಿ ರಾಜಕೀಯ ನಾಯಕರು ಜಾಣ ಕುರುಡರಾಗಿದ್ದಾರೆ. ಈ ಕಲುಷಿತ ನೀರಿನ ಪರಿಣಾಮ ಜನರು ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ ಎಂದರು.

ಮೂರು ಹಂತದಲ್ಲಿ ನೀರು ಶುದ್ಧೀಕರಣ ಆಗಬೇಕು ಎಂದು ಪ್ರದೀಪ್ ಈಶ್ವರ್ ಈ ಹಿಂದೆ ವೀರಾವೇಶ ತೋರುತ್ತಿದ್ದರು. ಆದರೆ ಈಗ ಮೌನವಾಗಿದ್ದಾರೆ. ಜಾಣತನದ ಉತ್ತರ ನೀಡುತ್ತಿದ್ದಾರೆ. ಜನರ ಆರೋಗ್ಯದ ಬಗ್ಗೆ ನಾಯಕರಿಗೆ ಬದ್ಧತೆ ಇರಬೇಕು ಎಂದರು.


ಉದಯವಾಹಿನಿ ಚಿತ್ರ

ಪ್ರದೀಪ್ ಈಶ್ವರ್ ಅವರೇ ಈ ಹಿಂದೆ ನಮ್ಮೆಲ್ಲರ ಪ್ರಜ್ಞೆಯನ್ನು ಬಡಿದೆಬ್ಬಿಸಿದ್ದೀರಿ. ಆದರೆ ಇಂದು ಜನರಿಗೆ ಮೋಸ ಆಗುತ್ತಿದ್ದರೂ ಸುಮ್ಮನಿರುವಿರಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇಲ್ಲಿನ ವಾಸ್ತವ ಸ್ಥಿತಿ ತಿಳಿಸಿ ಮೂರು ಹಂತದ ಶುದ್ಧೀಕರಣಕ್ಕೆ ಹಣ ಕೊಡಿಸಿದರೆ ನಾವೇ ನಿಮ್ಮನ್ನು ಸನ್ಮಾನಿಸುತ್ತೇವೆ.

ಮೂರು ಹಂತದ ಶುದ್ಧೀಕರಣದ ವಿಚಾರವಾಗಿ ನಮಗೆ ರಾಜಕೀಯ ಉದ್ದೇಶವಿಲ್ಲ ಎಂದು ಹೇಳಿದರು.

ಇಲ್ಲಿ ಬೆಳೆಯುವ ತರಕಾರಿಗಳಲ್ಲಿ ವಿಷಕಾರಿ ಅಂಶಗಳು ಪತ್ತೆ ಆಗುತ್ತಿವೆ ಎಂದು ಅಧ್ಯಯನ ವರದಿಗಳು ಹೇಳುತ್ತವೆ. ಹೂ, ಹಣ್ಣು ಬಾಳಿಕೆ ಬರುತ್ತಿಲ್ಲ. ಭವಿಷ್ಯದಲ್ಲಿ ನಮ್ಮ ತರಕಾರಿ, ಹಣ್ಣುಗಳ ಮೇಲೆ ಪರಿಣಾಮ ಬೀರಿದರೆ ರೈತರ ಆರ್ಥಿಕ ಶಕ್ತಿಯೇ ಕುಗ್ಗುತ್ತದೆ ಎಂದರು.

ಎಚ್.ಎನ್.ವ್ಯಾಲಿ ನೀರು ಅಂತರ್ಜಲ ಸೇರುತ್ತಿದೆ. ಆ ನೀರಿನಿಂದ ಬೆಳೆದ ತರಕಾರಿ, ಹಣ್ಣುಗಳ ಸೇವನೆ ಪರಿಣಾಮ ಅನಾರೋಗ್ಯವೂ ಹೆಚ್ಚುತ್ತಿದೆ.

ಚಿಕ್ಕಬಳ್ಳಾಪುರ ಜಿಲ್ಲಾ ಆಸ್ಪತ್ರೆಯಲ್ಲಿ ತಿಂಗಳಿಗೆ 800ರಿಂದ 900, ಜೈನ್ ಆಸ್ಪತ್ರೆಯಲ್ಲಿ 600 ಮತ್ತು ಅಭಯ ಆಸ್ಪತ್ರೆಯಲ್ಲಿ 300 ರೋಗಿಗಳು ಡಯಾಲಿಸಿಸ್‌ಗೆ ಒಳಪಡುತ್ತಿದ್ದಾರೆ. ವಯೋಸಹಜವಾದ ಕಾರಣಗಳನ್ನು ಹೊರತುಪಡಿಸಿ ಬಹಳಷ್ಟು ಮಂದಿ ಕಿಡ್ನಿ, ಕ್ಯಾನ್ಸರ್ ಸೇರಿದಂತೆ ಹಲವು ರೋಗಗಳಿಂದ ಬಳಲುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

# 12 ವರ್ಷವಾದರೂ ಒಂದು ಹನಿ ನೀರೂ ಬರಲಿಲ್ಲ!

• ಉದಯವಾಹಿನಿ, ಕೋಲಾರ

ಎತ್ತಿನಹೊಳೆ ನೀರನ್ನು ಬಯಲುಸೀಮೆ ಜಿಲ್ಲೆಗಳಾದ ಕೋಲಾರ ಹಾಗೂ ಚಿಕ್ಕಬಳ್ಳಾಪುರಕ್ಕೆ ಹರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಿಕ್ಕಬಳ್ಳಾಪುರದಲ್ಲಿ ಶಂಕುಸ್ಥಾಪನೆ ನೆರವೇರಿಸಿದ ದಿನ.

ಅದಾಗಿ ಇಂದಿಗೆ (03-03-2026) 12 ವರ್ಷಗಳೇ ಕಳೆದು ಹೋಗಿವೆ. ನಂತರ ಸಮ್ಮಿಶ್ರ ಸರ್ಕಾರ, ಆನಂತರ ಬಿಜೆಪಿ ಸರ್ಕಾರ, ಈಗ ಮತ್ತೊಮ್ಮೆ ಕಾಂಗ್ರೆಸ್ ಸರ್ಕಾರ ಬಂದಿದೆ.

ಅಂದು ಭೂಮಿಪೂಜೆ ಮಾಡಿದವರೇ ಇಂದೂ ಮುಖ್ಯಮಂತ್ರಿ ಆಗಿದ್ದಾರೆ. ಆದರೆ, ಕೋಲಾರ ಜನರ ಬಾಯಿಗೆ ಎತ್ತಿನಹೊಳೆಯ ಒಂದನಿ ನೀರೂ ಸೇರಿಲ್ಲ. ಭರವಸೆ ಮಾತು ಕೇಳಿ ಕೇಳಿ ಜನರು ಸುಸ್ತಾಗಿದ್ದಾರೆ.

ಆಡಳಿತ ಪಕ್ಷದ ಯಾವುದೇ ಜನಪ್ರತಿನಿಧಿಯನ್ನು ಕೇಳಿದರೂ ಮುಂದಿನ ವರ್ಷ ನೀರು ಹರಿಯವುದು ಖಚಿತವೆನ್ನುತ್ತಾರೆ.

ಬಿಜೆಪಿಯವರು, ಜೆಡಿಎಸ್‌ನವರು ಮಾತನಾಡಲು ಮುಂದಾದರೆ ಅವರ ಅಧಿಕಾರಾವಧಿಯಲ್ಲಿ ಏನು ಮಾಡಿದರು ಎಂದು ಕಾಂಗ್ರೆಸ್‌ನವರು ಪ್ರಶ್ನಿಸುತ್ತಾರೆ. ಎತ್ತಿನಹೊಳೆ ನೀರನ್ನು ಬಯಲುಸೀಮೆ ಜಿಲ್ಲೆಗಳಿಗೆ ತರಲು ಸಾಧ್ಯವಿಲ್ಲವೆಂದು ಕೆಲ ವರದಿಗಳು ಹೇಳುತ್ತಿವೆ. ಕಾರ್ಯಸಾಧುವಲ್ಲದ ಯೋಜನೆಗೆ ಏಕೆ ಅಷ್ಟೊಂದು ಖರ್ಚು ಮಾಡುತ್ತಿದ್ದೀರಿ? ಜನರಿಗೆ ಮೋಸ ಮಾಡುತ್ತಿದ್ದೀರಾ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಈಚೆಗೆ ಕೋಲಾರದಲ್ಲಿ ನಡೆದಿದ್ದ ಜಲಾಗ್ರಹ ಹೋರಾಟದಲ್ಲಿ ಪ್ರಶ್ನಿಸಿದ್ದರು.

ಕಾಂಗ್ರೆಸ್, ಜೆಡಿಎಸ್, ಬಿಜೆಪಿಯ ಜನಪ್ರತಿನಿಧಿಗಳ ಜಗಳದಲ್ಲಿ ಜಿಲ್ಲೆಯ ಜನರು ಶುದ್ಧ ಕುಡಿಯುವ ನೀರಿಲ್ಲದೇ ಪರದಾಡುತ್ತಿದ್ದಾರೆ. ಕನಿಷ್ಠ ತಮ್ಮ ಪಾಲಿಗೆ ಬರಬೇಕಾದ ಕೃಷ್ಣಾ ನದಿ ನೀರನ್ನಾದರೂ ಕೊಡಿ ಎಂದು ಬೇಡುವ ಪರಿಸ್ಥಿತಿ ಎದುರಾಗಿದೆ. ಈಚೆಗೆ ಸಭೆ ನಡೆಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಬೈರತಿ ಸುರೇಶ್ 2027ಕ್ಕೆ ಎತ್ತಿನಹೊಳೆ ನೀರು ಹರಿಸುವುದಾಗಿ ಭರವಸೆನೀಡಿದ್ದಾರೆ.

ಬಂಗಾರಪೇಟೆಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಮಯಕ್ಕೆ ಸರಿಯಾಗಿ ಕಾಮಗಾರಿ ನಡೆದು ನೀರು ಹರಿಯಲಿದೆ ಎಂದಿದ್ದಾರೆ.

ಈಗಾಗಲೇ ಯೋಜನಾ ವೆಚ್ಚ 24 ಸಾವಿರ ಕೋಟಿ ದಾಟಿದ್ದು, ಈ ಬಗ್ಗೆ ಲೆಕ್ಕ ಕೊಡಿ ಎಂದು ಜೆಡಿಎಸ್, ಬಿಜೆಪಿ, ನೀರಾವರಿ ಹೋರಾಟಗಾರರು ಕೇಳುತ್ತಿದ್ದಾರೆ.

# ರಾಮನಗರ : ಕಳೆದ ಸಾಲಿನ ಬಜೆಟ್ – ಶೇ.85 ರಷ್ಟು ಭರವಸೆ ಈಡೇರಿಕೆ – ಅಧ್ಯಕ್ಷ ಕೆ.ಶೇಷಾದ್ರಿ

• ಉದಯವಾಹಿನಿ ,ರಾಮನಗರ

ಕಳೆದ ಸಾಲಿನಲ್ಲಿ ಮಂಡಿಸಿದ ನಗರಸಭೆ ಆಯವ್ಯಯದಲ್ಲಿ ಘೋಷಣೆ ಮಾಡಿದ ಕಾರ್ಯಕ್ರಮಗಳಲ್ಲಿ ಶೇ.85ರಷ್ಟು ಭರವಸೆಗಳನ್ನು ಈಡೇರಿಸಲಾಗಿದೆ ಎಂದು ನಗರಸಭೆ ಅಧ್ಯಕ್ಷ ಕೆ.ಶೇಷಾದ್ರಿ ಹೇಳಿದರು.

ನಗರಸಭೆ ಸಭಾಂಗಣದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸ್ವಚ್ಛ ಭಾರತ್ ಮಿಷನ್ ಯೋಜನೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ ಮಾಡಲಾಗಿದ್ದು, ಸ್ವಚ್ಛ ನಗರದ ಕಡೆಗೆ ಒತ್ತು ನೀಡಲಾಗುತ್ತಿದೆ. ಪ್ಲಾಸ್ಟಿಕ್ ಬಳಕೆ ಪರ್ಯಾಯ ಮಾರ್ಗದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.

ಎಸ್ಸಿಎಸ್ಪಿ ಮತ್ತು ಟಿಎಸ್ಪಿ ಯೋಜನೆಯಡಿ ಸರ್ಕಾರದ ಮಾರ್ಗಸೂಚಿಯಂತೆ ಕ್ರಿಯಾ ಯೋಜನೆ ತಯಾರಿಸಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ರಾಮನಗರ ನಗರಸಭೆಯನ್ನು ಗ್ರೇಡ್ 2 ನಗರಸಭೆಯಿಂದ ಗ್ರೇಡ್ ಓನ್ ನಗರಸಭೆಗೆ ಮೇಲ್ದರ್ಜೆಗೇರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಡಾ.ಬಿ.ಆರ್.ಅಂಬೇಡ್ಕರ್ ಜಯಂತಿಯ ಅದ್ದೂರಿ ಆಚರಣೆ, ರೇಷ್ಮೆ ನಾಡ ಕನ್ನಡ ಹಬ್ಬ ಹಾಗೂ ರಾಜ್ಯೋತ್ಸವ ಆಚರಣೆ, ಪೌರ ಕಾರ್ಮಿಕರ ಆರೋಗ್ಯ ರಕ್ಷಣೆಗೆ 108 ಲಕ್ಷ ಪಾವತಿ, ಪೌರ ಕಾರ್ಮಿಕರಿಗೆ ಬೆಳಗಿನ ಉಪಹಾರ ಯೋಜನೆ, ಉಚಿತ ಆರೋಗ್ಯ ತಪಾಸಣೆ ಮತ್ತು ವೈದ್ಯಕೀಯ ವಿಮೆ, ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ, ಒಂದು ಸಾವಿರ ಛತ್ರಿಗಳ ವಿತರಣೆ, ಪ್ರಧಾನಮಂತ್ರಿ ಜೀವನ್ ಜ್ಯೋತಿ ಯೋಜನೆಯಡಿ ಬೀದಿ ಬದಿ ವ್ಯಾಪಾರಿಗಳು ಮತ್ತು ಕುಟುಂಬಸ್ಥರಿಗೆ ವಿಮಾ ಸೌಲಭ್ಯ ನೀಡಲಾಗಿದೆ ಎಂದು ಮಾಹಿತಿ ನೀಡಿದರು.


ಉದಯವಾಹಿನಿ ಚಿತ್ರ

ಸ್ವಚ್ಛ ಭಾರತ ಅಭಿಯಾನದಡಿ ಬಯಲು ಶೌಚ ನಿರ್ಮೂಲನೆ, ಶೇ.100 ರಷ್ಟು ಘನತ್ಯಾಜ್ಯಗಳ ನಿರ್ವಹಣೆ, ಮರುಬಳಕೆ, ಸಂಸ್ಕರಣೆ ಮಾಡಲಾಗುತ್ತಿದೆ. ಅಕಿಯಿರುವ ರೈಲ್ವೆ ಸ್ಟೇಷನ್ ವೃತ್ತದಲ್ಲಿ ಕ್ಲಾಕ್ ಟವರ್ ನಿರ್ಮಾಣಕ್ಕೆ ಕ್ರಮ, ರವೀಂದ್ರ ಕಲಾಕ್ಷೇತ್ರ ಮಾದರಿಯಲ್ಲಿ ಅಂಬೇಡ್ಕರ್ ಭವನ ನವೀಕರಣಕ್ಕೆ ಟೆಂಡರ್ ಕರೆಯಲಾಗಿದೆ. ಸ್ಪರ್ಧಾತ್ಮಕ ಪರೀಕ್ಷೆ ತರಬೇತಿ ಕೇಂದ್ರ ಸ್ಥಾಪನೆ, ಜನಾರ್ಧನ್ ಮೈಸೂರ್ ಪಾರ್ಕ್‌ಗೆ ರಾಷ್ಟ್ರಮಟ್ಟದ ಮಾರುಕಟ್ಟೆ ಸೃಷ್ಠಿಸಲು ಬ್ರ್ಯಾಂಡ್ ಪ್ರಚಾರಕ್ಕೆ ಆದ್ಯತೆ ನೀಡಲಾಗುವುದು ಎಂದು ಹೇಳಿದರು

**ಸಾರ್ವಜನಿಕರಿಗೆ ಅರಿವು ಮೂಡಿಸುವ ಕೆಲಸ**

ನಗರಸಭೆ ಉಪಾಧ್ಯಕ್ಷೆ ಗಿರಿಜಮ್ಮ ಗುರುವೇಗೌಡ, ಸ್ಥಾಯಿ ಸಮಿತಿ ಅಧ್ಯಕ್ಷ ಫೈರೋಜ್ ಪಾಷಾ, ಸದಸ್ಯರಾದ ಆರೀಫ್, ಮಣಿ, ಬಿ.ಸಿ.ಪಾರ್ವತಮ್ಮ, ಪವಿತ್ರ, ನಾಗಮ್ಮ ಇದ್ದರು.

# ಎತ್ತಿನಹೊಳೆ, ವ್ಯಾಲಿ ನೀರಿನ ಶುದ್ಧೀಕರಣದ ನಿರೀಕ್ಷೆ

## ಈಗ ಮತ್ತೆ ಬಜೆಟ್ ಮಂಡನೆಯ ದಿನಗಣನೆ ಆರಂಭ

## ಉತ್ಪನ್ನಗಳ ಮೌಲ್ಯವರ್ಧನೆಗೆ ಸಂಬಂಧಿಸಿದ ಕೈಗಾರಿಕೆಗಳ ಸ್ಥಾಪನೆ

• ಉದಯವಾಹಿನಿ, ಚಿಕ್ಕಬಳ್ಳಾಪುರ

ಈ ಬಾರಿಯ ಬಜೆಟ್‌ನಲ್ಲಿ ನಿಮ್ಮ ನಿರೀಕ್ಷೆಗಳೇನು ಹೀಗೊಂದು ಪ್ರಶ್ನೆಯನ್ನು ಚಿಕ್ಕಬಳ್ಳಾಪುರ ತಾಲ್ಲೂ ನಾಗರಿಕರ ಮುಂದಿಟ್ಟರೆ ಬಹುತೇಕ ಮಂದಿಯ ಉತ್ತರ, ನೀರಾವರಿ ದಶಕಗಳಿಂದ ಚಿಕ್ಕಬಳ್ಳಾಪುರದ ಜನರು ನೀರಿಗಾಗಿ ಹೋರಾಡುತ್ತಲೇ ಇದ್ದಾರೆ. ಹೀಗಿದ್ದರೂ ಜನರಿಗೆ ಉತ್ತಮವಾದ ನೀರು ದೊರೆತಿಲ್ಲ. ವಿಶೇಷವಾಗಿ ಈ ಭಾಗದ ನೀರಾವರಿ ಯೋಜನೆ ಎಂದೇ ಜನಜನಿತವಾಗಿರುವ ಎತ್ತಿನಹೊಳೆ ಯೋಜನೆಯ ಬಗ್ಗೆ ಅಪಾರವಾದ ನಿರೀಕ್ಷೆಗಳನ್ನು ಹೊಂದಿದ್ದಾರೆ. ಆದರೆ ಯೋಜನೆಗೆ ಅಡಿಗಲ್ಲು ಬಿದ್ದು ಒಂದು ದಶಕ ಕಳೆದರೂ ಚಿಕ್ಕಬಳ್ಳಾಪುರದತ್ತ ಎತ್ತಿನಹೊಳೆ ಹರಿಸಲು ಸಾಧ್ಯವಾಗಿಲ್ಲ. 2027ರ ವೇಳೆಗೆ ಚಿಕ್ಕಬಳ್ಳಾಪುರಕ್ಕೆ ಎತ್ತಿನಹೊಳೆ ನೀರು ಬರಲಿದೆ ಎಂದು ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಡಾ.ಎಂ.ಸಿ.ಸುಧಾಕರ್, ಕೃಷ್ಣಬೈರೇಗೌಡ ಪ್ರತಿಪಾದಿಸುತ್ತಿದ್ದಾರೆ. ಲೆಕ್ಕಾಚಾರದಲ್ಲಿ ಈ ಬಾರಿ ಎತ್ತಿನಹೊಳೆ ಯೋಜನೆಗೆ ಚಿಕ್ಕಬಳ್ಳಾಪುರದ ಜನರು ಅಪಾರ ಅನುದಾನದ ನಿರೀಕ್ಷೆ ಹೊಂದಿದ್ದಾರೆ. ಈ ಬಾರಿಯ ಬಜೆಟ್‌ನಲ್ಲಿ ಎತ್ತಿನಹೊಳೆ ಯೋಜನೆಗೆ ಹಣ ದೊರೆಯಲಿದೆ. ನೀರು ಬರಲಿದೆ ಎನ್ನುವ ನಿರೀಕ್ಷೆಗಳು ಅಪಾರವಾಗಿವೆ.

ಮತ್ತೊಂದೆಡೆ ಬೆಂಗಳೂರಿನ ಕೊಳಚೆ ನೀರನ್ನು ಎರಡು ಹಂತದಲ್ಲಿ ಸಂಸ್ಕರಿಸಿ ಚಿಕ್ಕಬಳ್ಳಾಪುರದ ಕೆರೆಗಳಿಗೆ ಎಚ್.ಎನ್. ವ್ಯಾಲಿ ಯೋಜನೆಯಡಿ ಹರಿಸಲಾಗುತ್ತಿದೆ. ಈ ನೀರನ್ನು ಮೂರು ಹಂತದಲ್ಲಿ ಸಂಸ್ಕರಿಸಬೇಕು ಎನ್ನುವ ಆಗ್ರಹವಿದೆ. ಈ ಬಾರಿಯ ಬಜೆಟ್‌ನಲ್ಲಿ ಇದಕ್ಕೆ ಅನುದಾನ ಮೀಸಲಿಡಬೇಕು ಎನ್ನುವ ಕೂಗು ಬಲವಾಗಿ ಎದ್ದಿದೆ. ಹೀಗೆ ನೀರಾವರಿ ವಿಚಾರವೇ ಈ ಬಾರಿಯ ಬಜೆಟ್ ವೇಳೆ ಪ್ರಮುಖವಾಗಿ ಪ್ರತಿಧ್ವನಿಸುತ್ತಿದೆ. ಹೈಟೆಕ್ ಹೂ ಮಾರುಕಟ್ಟೆ, ಕೃಷಿ ಸಂಬಂಧಿ ಉತ್ಪನ್ನಗಳ ಮೌಲ್ಯವರ್ಧನೆಗೆ ಸಂಬಂಧಿಸಿದ ಕೈಗಾರಿಕೆಗಳ ಸ್ಥಾಪನೆ. ನಂದಿಬೆಟ್ಟ ಅಭಿವೃದ್ಧಿ, ನಂದಿ ಅಭಿವೃದ್ಧಿ ಪ್ರಾಧಿಕಾರದ ರಚನೆ–ಹೀಗೆ ಹಲವು ವಿಚಾರಗಳ ಬಗ್ಗೆ 2026ರ ರಾಜ್ಯ ಬಜೆಟ್ ಮೇಲೆ ಚಿಕ್ಕಬಳ್ಳಾಪುರ ಜನರು ಅಪಾರ ನಿರೀಕ್ಷೆಗಳನ್ನು ಹೊಂದಿದ್ದಾರೆ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾದ ನಂತರ 2023ರ ಜುಲೈನಲ್ಲಿ ಮತ್ತು 2024ರ ಫೆಬ್ರುವರಿಯಲ್ಲಿ ಮತ್ತು 2025ರಲ್ಲಿ ಮಂಡಿಸಿದ ಬಜೆಟ್‌ನಲ್ಲಿ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೆ ಯಾವುದೇ ಪ್ರಮುಖ ಯೋಜನೆಗಳ ಪ್ರಸ್ತಾಪ ಇರಲಿಲ್ಲ. ಈಗ ಮತ್ತೆ ಬಜೆಟ್ ಮಂಡನೆಯ ದಿನಗಣನೆ ಆರಂಭವಾಗಿದೆ. ಈ ಹೊತ್ತಿನಲ್ಲಿ ಚಿಕ್ಕಬಳ್ಳಾಪುರಕ್ಕೆ ಏನು ಕೊಡುವರು ಎನ್ನುವ ನಿರೀಕ್ಷೆ ಜನರದ್ದಾಗಿದೆ. ಬಜೆಟ್ ಮೇಲೆ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರದ ಜನರು ಅಪಾರ ನಿರೀಕ್ಷೆಗಳನ್ನೇ ಹೊಂದಿದ್ದಾರೆ.

ನಂದಿಕ್ರಾಸ್‌ನ ತೋಟಗಾರಿಕೆ ಇಲಾಖೆಯ ಜಾಗದಲ್ಲಿ ಹೈಟೆಕ್ ಹೂವಿನ ಮಾರುಕಟ್ಟೆ ನಿರ್ಮಾಣಕ್ಕೆ ಈಗಾಗಲೇ ಜಮೀನು ಮೀಸಲಿಡಲಾಗಿದೆ. ಈ ಮಾರುಕಟ್ಟೆ ನಿರ್ಮಾಣಕ್ಕೆ ಅನುದಾನ ಅಗತ್ಯವಾಗಿದೆ. ಜಿಲ್ಲಾ ಕೇಂದ್ರದಲ್ಲಿರುವ ಸರ್.ಎಂ.ವಿಶ್ವೇಶ್ವರಯ್ಯ ಕ್ರೀಡಾಂಗಣ ಅಧ್ವಾನ ಎನ್ನುವಂತಿದೆ.

### ಕೈಗಾರಿಕೀಕರಣ

**ಶಾಪಗ್ರಸ್ತ ರಾಜಧಾನಿ ಬೆಂಗಳೂರಿಗೆ ಮತ್ತು ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಚಿಕ್ಕಬಳ್ಳಾಪುರ ಸಮೀಪವಿದ್ದರೂ ಕೈಗಾರಿಕೀಕರಣದ ಅಭಿವೃದ್ಧಿಯಲ್ಲಿ ತೀರಾ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ಜಿಲ್ಲೆಯಲ್ಲಿ ಕೈಗಾರಿಕೀಕರಣದ ಪರ್ವ ದೊಡ್ಡ ಮಟ್ಟದಲ್ಲಿ ಆರಂಭವಾಗಿದೆ. ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿ ಮತ್ತು ಸ್ಥಾಪನೆಗೆ ಸರ್ಕಾರ ಮುಂದಾಗಿದೆ. 7856.37 ಎಕರೆ ಭೂ ಪ್ರದೇಶಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದೆ. 2278.10 ಎಕರೆಯನ್ನು ಕರ್ನಾಟಕ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಮೂಲಕ ಸ್ವಾಧೀನಕ್ಕೆ ಪಡೆಯಲಾಗಿದೆ.**



**ಈ ಭೂ ಮಾಲೀಕರಿಗೆ ಪರಿಹಾರ ವಿತರಣೆ ಸಹ ಪ್ರಗತಿಯಲ್ಲಿದೆ. ಹೀಗೆ ಅಂತಿಮ ಅಧಿಸೂಚನೆ ಮತ್ತು ಪ್ರಾಥಮಿಕ ಅಧಿಸೂಚನೆ ಸೇರಿ ಜಿಲ್ಲೆಯಲ್ಲಿ 10134 ಎಕರೆಯು ಕೈಗಾರಿಕೀಕರಣದ ಹಂತದಲ್ಲಿ ಇವೆ. ಹೀಗೆ ಜಿಲ್ಲೆಯ ಚಿಂತಾಮಣಿ ಶಿಡ್ಲಘಟ್ಟ ಗೌರಿಬಿದನೂರು ಮತ್ತು ಬಾಗೇಪಲ್ಲಿಯಲ್ಲಿ ಕೈಗಾರಿಕೀಕರಣಕ್ಕೆ ವೇಗ ದೊರೆತಿದ್ದರೆ. ಚಿಕ್ಕಬಳ್ಳಾಪುರ ಮಾತ್ರ ಕೈಗಾರಿಕೀಕರಣದ ವಿಚಾರವಾಗಿ ಶಾಪಗ್ರಸ್ತವಾಗಿದೆ.**

ಅಂತರಾಳದಿಂದ...
EDITORIAL

# ದೇಶಿ ಕ್ರಿಕೆಟ್‌ಗೆ ಹೊಸ ಮುಕುಟ; ಇದು ಕ್ರೀಡಾಪ್ರೇಮದ ಕಾಶ್ಮೀರ!



ದೇಶಿ ಕ್ರಿಕೆಟ್‌ನ ಅತ್ಯಂತ ಬಲಾಢ್ಯ ತಂಡಗಳಲ್ಲಿ ಒಂದಾಗಿರುವ ಕರ್ನಾಟಕದ ಸವಾಲನ್ನು ಅತ್ಯಂತ ಸುಲಭವಾಗಿ ಮೆಟ್ಟಿ ನಿಂತ ಜಮ್ಮು ಮತ್ತು ಕಾಶ್ಮೀರ ತಂಡವು ರಣಜಿ ಟ್ರೋಫಿಯನ್ನು ಎತ್ತಿ ಹಿಡಿಯುವ ಮೂಲಕ ಹೊಸ 'ರಾಜ'ನಾಗಿ ಹೊರಹೊಮ್ಮಿದೆ. ಭಯೋತ್ಪಾದನೆಯ ಅಟ್ಟಹಾಸ ಮತ್ತು ಅದನ್ನು ಹಿಮ್ಮೆಟ್ಟಿಸಲು ನಡೆದ ಸೈನ್ಯದ ಬಲಪ್ರಯೋಗದಿಂದ ನಲುಗಿ ಹೋಗಿರುವ, ಮಾನಸಿಕವಾಗಿ ಜರ್ಜರಿತವಾಗಿರುವ ಕಾಶ್ಮೀರ ಕಣಿವೆಯ ಪಾಲಿಗೆ ಜೀವನೋತ್ಸಾಹಕ್ಕೆ ಕಾರಣವಾಗುವಂತಹ ಚಾರಿತ್ರಿಕ ಸಾಧನೆ ಇದು. ಹೊಳೆಯುವ ಟ್ರೋಫಿಯನ್ನು ಹೊತ್ತೊಯ್ದಿರುವ ಕಾಶ್ಮೀರವನ್ನು ದೇಶ ಭಿನ್ನ ದೃಷ್ಟಿಕೋನದಿಂದ ನೋಡಲು ರಣಜಿಯ ಗೆಲುವು ಪ್ರೇರಣೆ ಆಗುವಂತಿದೆ. ರಾಜಕೀಯವಾಗಿ ರಾಜ್ಯದ ಸ್ಥಾನಮಾನವನ್ನೇ ಕಳೆದುಕೊಂಡು ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರವು, ತಾನೀಗ ಕ್ರಿಕೆಟ್‌ನ ಅಂಬೆಗಾಲು ಇಡುತ್ತಿರುವ ಕೂಸಲ್ಲ, ಬದಲಾಗಿ ದೇಶಿ ಕ್ರಿಕೆಟ್ ಸಾಮ್ರಾಟ ಎಂದು ಸಾರಿ ಹೇಳಿದೆ. ಕಳೆದ ನಾಲ್ಕು ದಶಕಗಳಿಂದ ಎಲ್ಲಿ ಗನ್‌ಗಳು, ಬಾಂಬ್‌ಗಳೇ ಹೆಚ್ಚಾಗಿ ಮಾತನಾಡುತ್ತಿದ್ದವೋ, ಎಲ್ಲಿ ಶಾಲಾ ಕಾಲೇಜುಗಳು ಹೆಚ್ಚಿನ ಅವಧಿಗೆ ಮುಚ್ಚಿರುತ್ತಿದ್ದವೋ, ಎಲ್ಲಿ ಅರಳಬೇಕಿದ್ದ ಪ್ರತಿಭೆಗಳು ಆಘಾತಕ್ಕೆ ಒಳಗಾಗಿದ್ದವೋ ಅಲ್ಲಿನ ನೆಲದಲ್ಲಿ ಬರೆಯಲಾದ ಯಶೋಗಾಥೆಗೆ ದೊಡ್ಡ ಕಿಮ್ಮತ್ತಿದೆ. ಇನ್ನೇನು ಶತಮಾನೋತ್ಸವ ಆಚರಿಸಿಕೊಳ್ಳಲು ಸಜ್ಜಾಗುತ್ತಿರುವ ರಣಜಿ ಕ್ರಿಕೆಟ್ ಟೂರ್ನಿಗೆ (ಎಂಟು ವರ್ಷಗಳಷ್ಟೇ ಬಾಕಿ), 67 ವರ್ಷಗಳ ಹಿಂದೆ ಪ್ರವೇಶ ಪಡೆದಿದ್ದ ಜಮ್ಮು ಮತ್ತು ಕಾಶ್ಮೀರ ತಂಡವು ಇದೇ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿತ್ತು.

ಮೊದಲ ಯತ್ನದಲ್ಲೇ ದೇಶ ತನ್ನತ್ತ ಬೆರಗಿನಿಂದ ನೋಡುವಂತೆ ಮಾಡಿತು. ಎಂಟು ಸಲದ ಚಾಂಪಿಯನ್ ಕರ್ನಾಟಕ ತಂಡವನ್ನು ಫೈನಲ್‌ನಲ್ಲಿ ಸೋಲಿಸಿದ ಆ ತಂಡ, ಫೈನಲ್‌ವರೆಗಿನ ಹಾದಿಯಲ್ಲಿ ಮಾಜಿ ಚಾಂಪಿಯನ್‌ಗಳಾದ ಐದು ತಂಡಗಳನ್ನು ದೆಹಲಿ, ಹೈದರಾಬಾದ್, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಪಶ್ಚಿಮ ಬಂಗಾಳ ಪರಾಭವಗೊಳಿಸಿದೆ. ಈ ದಾಖಲೆಯೇ ಆ ತಂಡದ ಯಶಸ್ಸಿನ ಹಿರಿಮೆ ಏನೆಂಬುದನ್ನು ಢಾಳಾಗಿ ಹೇಳುತ್ತದೆ.

> **ಭಾರತೀಯ ಕ್ರಿಕೆಟ್‌ನ ಮುಕುಟ ಮಣಿಯಾಗಿ ಹೊಳೆಯುತ್ತಿರುವ ಜಮ್ಮು ಮತ್ತು ಕಾಶ್ಮೀರ ತಂಡದ ಸಾಧನೆಯ ಕಡೆಗೆ ಹೊರಳುನೋಟ ಬೀರಿದರೆ ತಂಡದ ಸಾಂಘಿಕ ಯತ್ನ ಎದ್ದು ಕಾಣುತ್ತದೆ. ಅಕೀಬ್ ನಬಿ ದಾರ್ ಎಂಬ ತಾರೆಯ ಮಿಂಚೂ ಅಲ್ಲಿ ಹರಿಯುತ್ತದೆ.**

ಭಾರತೀಯ ಕ್ರಿಕೆಟ್‌ನ ಮುಕುಟ ಮಣಿಯಾಗಿ ಹೊಳೆಯುತ್ತಿರುವ ಜಮ್ಮು ಮತ್ತು ಕಾಶ್ಮೀರ ತಂಡದ ಸಾಧನೆಯ ಕಡೆಗೆ ಹೊರಳುನೋಟ ಬೀರಿದರೆ ತಂಡದ ಸಾಂಘಿಕ ಯತ್ನ ಎದ್ದು ಕಾಣುತ್ತದೆ. ಅಕೀಬ್ ನಬಿ ದಾರ್ ಎಂಬ ತಾರೆಯ ಮಿಂಚೂ ಅಲ್ಲಿ ಹರಿಯುತ್ತದೆ. ಹತ್ತು ಪಂದ್ಯಗಳಿಂದ 60 ವಿಕೆಟ್ ಪಡೆದ ಈ ವೇಗಿ, ನಿಸ್ಸಂಶಯವಾಗಿ ಪ್ರಸಕ್ತ ರಣಜಿ ಋತು ಕಂಡ ಅದ್ಭುತ ಪ್ರತಿಭೆ. ಸರಾಸರಿ 12.56 ರನ್ ಗಳಿಗೆ ಒಂದರಂತೆ ವಿಕೆಟ್ ಕಿತ್ತಿರುವ, ಓವರ್‌ಗೆ 2.65 ರನ್ ಮಾತ್ರ ನೀಡಿರುವ ಈ ಬೌಲರ್, ತಂಡಕ್ಕೆ ಅಗತ್ಯವಾದಾಗ ಬ್ಯಾಟ್‌ನಿಂದಲೂ ಕಾಣಿಕೆ ನೀಡಿದ್ದಾರೆ. ಪಂದ್ಯದ ದಿಕ್ಕನ್ನೇ ತಿರುಗಿಸಬಲ್ಲ ಅಕೀಬ್ ಅವರಂತಹ ಆಟಗಾರ ಯಾವುದೇ ತಂಡಕ್ಕೂ ದೊಡ್ಡ ಆಸ್ತಿ. ಅಕೀಬ್ ಅವರಿಗೆ ಈಗ 29 ವರ್ಷ.

ಬೇರೆ ರಾಜ್ಯದ ಹುಡುಗನಾಗಿದ್ದರೆ ಈ ವೇಳೆಗೆ ಅವರು ಸ್ಟಾರ್‌ಗಿರಿಯಲ್ಲಿ ಮಿಂದೇಳುತ್ತಿದ್ದರು. ಕಾಶ್ಮೀರದ ಕಣಿವೆಯಿಂದ ಕ್ರಿಕೆಟ್ ಕ್ಷಿತಿಜದಲ್ಲಿ ಕಾಣಿಸಿಕೊಳ್ಳಲೇ ಈ ಅದ್ಭುತ ಬೌಲರ್‌ನಿಗೆ ಇಷ್ಟು ವರ್ಷಗಳು ಬೇಕಾದವು. ಬ್ಯಾಟಿಂಗ್‌ನಲ್ಲಿ ಅಬ್ದುಲ್ ಸಮದ್ ಸ್ಥಿರವಾದ ಪ್ರದರ್ಶನ ನೀಡುವ ಮೂಲಕ ತಂಡಕ್ಕೆ ಬೆನ್ನೆಲುಬಾಗಿ ನಿಂತರು. ಪಾರಸ್ ಡೋಗ್ರಾ ತಂಡಕ್ಕೆ ಅತ್ಯುತ್ತಮ ನಾಯಕತ್ವ ಸಿಗುವಂತೆ ಮಾಡುವ ಜತೆಗೆ ಬ್ಯಾಟಿಂಗ್‌ನಲ್ಲೂ ಮಿಂಚಿದರು. ಕಮ್ರಾನ್ ಇಕ್ಬಾಲ್ ಮತ್ತು ಶುಭಂ ಪುಂಡೀರ್ ಅವರು ತಂಡಕ್ಕೆ ಅಗತ್ಯವಾದಾಗಲೆಲ್ಲ ನೆರವಿಗೆ ಧಾವಿಸಿದರು. ಕೆ. ವಾಧ್ವಾನ್, ಅಬಿದ್ ಮುಸ್ತಾಕ್, ಎಸ್.ಪಿ. ಖಜುರಿಯಾ ಮತ್ತು ಸಾಹಿಲ್ ಲೂತ್ರಾ ಅವರ ಸಾಧನೆ ಕೂಡ ಗಮನಾರ್ಹ. ಹೀಗೆ ಜಮ್ಮು ಮತ್ತು ಕಾಶ್ಮೀರ ಒಂದು ಪರಿಪೂರ್ಣ ತಂಡವಾಗಿದೆ.

ಪ್ರಸಕ್ತ ಕ್ರಿಕೆಟ್ ಋತುವಿನ ಉದ್ದಕ್ಕೂ ಅಮೋಘವಾಗಿ ಆಡಿದ್ದ ಕರ್ನಾಟಕ ತಂಡಕ್ಕೆ ಫೈನಲ್ ಸೋಲು ದೊಡ್ಡ ಪಾಠ. ಟೆಸ್ಟ್ ಪಂದ್ಯಗಳಲ್ಲಿ ಆಡಿದ ಐವರು ಅನುಭವಿಗಳನ್ನು ಹೊಂದಿದ್ದರೂ ಜಮ್ಮು ಮತ್ತು ಕಾಶ್ಮೀರದ ಸವಾಲಿಗೆ ಕರ್ನಾಟಕ ತಂಡದಲ್ಲಿ ಉತ್ತರವಿರಲಿಲ್ಲ. ಬೌಲಿಂಗ್ ದಾಳಿ ಮೊನಚು ಕಳೆದುಕೊಂಡರೆ, ಅನುಭವಿ ಬ್ಯಾಟರ್‌ಗಳು ಅತಿಯಾದ ಆತ್ಮವಿಶ್ವಾಸಕ್ಕಾಗಿ ಬೆಲೆ ತೆರಬೇಕಾಯಿತು. ಆದರೆ, ಆರ್. ಸ್ಮರಣ್ (950 ರನ್), ಶ್ರೇಯಸ್ ಗೋಪಾಲ್ (48 ವಿಕೆಟ್) ಟೂರ್ನಿಯುದ್ದಕ್ಕೂ ಸ್ಥಿರವಾದ ಪ್ರದರ್ಶನ ನೀಡಿ ಗಮನ ಸೆಳೆದರು. ಸೋಲಿನಲ್ಲಿಯೂ ಸಮಾಧಾನ ಮೂಡಿಸುವ ಇಂತಹ ಸಂಗತಿಗಳು ಕರ್ನಾಟಕ ತಂಡಕ್ಕಿವೆ. ಇಡೀ ದೇಶಕ್ಕೆ ಬ್ಯಾಟ್‌ಗಳನ್ನು ಕೊಡುತ್ತಿದ್ದ ಕಾಶ್ಮೀರ ಇನ್ನು ಮುಂದೆ ಭಾರತ ತಂಡಕ್ಕೆ ಬ್ಯಾಟರ್‌ಗಳನ್ನೂ ಬೌಲರ್‌ಗಳನ್ನೂ ಕಳುಹಿಸುತ್ತದೆಂದು ನಿರೀಕ್ಷಿಸಬಹುದಾಗಿದೆ. ಅಕೀಬ್, ಅಬ್ದುಲ್, ಡೋಗ್ರಾ ಅವರಂತಹ ಆಟಗಾರರು ಭಾರತ ತಂಡಕ್ಕೆ ಸೇರ್ಪಡೆಯಾಗಲಿ. ಕ್ರೀಡಾ ಯಶೋಗಾಥೆಯ ಮುಲಾಮು ಕಣಿವೆ ನಾಡಿನ ಗಾಯಗಳನ್ನು ವಾಸಿ ಮಾಡಲಿ.

---

> **ವಸಂತ ಗಾಳಿಯ ಮೃದುವಾದ ಸ್ಪರ್ಶ, ಕೋಗಿಲೆಯ ಕಿರುಚಾಟ, ಹೂಗಳ ಸುಗಂಧ, ಮತ್ತು ಗಗನದಲ್ಲಿ ತೇಲುವ ಬಣ್ಣದ ಪುಡಿ ಇವೆಲ್ಲವೂ ಸೇರಿ ನಮ್ಮ ಮನಸ್ಸಿಗೆ ಹೇಳುವುದು ಒಂದೇ ಮಾತು: ''ಹೋಳಿ ಬಂದಿದೆ!'' ಈ ವರ್ಷದ ಹೋಳಿ ಕೇವಲ ಒಂದು ಹಬ್ಬವಲ್ಲ; ಅದು ನಮ್ಮ ಒಳಮನದ ಬಣ್ಣಗಳನ್ನು ಮತ್ತೆ ಒಮ್ಮೆ ಜಾಗೃತಗೊಳಿಸುವ ಒಂದು ಸಂಭ್ರಮ. ಬಿಳಿ ಬಟ್ಟೆಯಲ್ಲಿ ಮೊದಲ ಬಣ್ಣ ತಾಗಿದ ಕ್ಷಣದಿಂದಲೇ ಮನಸ್ಸಿನಲ್ಲಿದ್ದ ಎಲ್ಲಾ ಮಂಕು, ಬೇಸರ, ದೂರವು ಒಂದೊಂದಾಗಿ ಕರಗತೊಡಗುತ್ತದೆ. ಹೋಳಿ ನಮ್ಮೊಳಗಿನ ಮಕ್ಕಳನ್ನು ಎಬ್ಬಿಸುವ ಹಬ್ಬ.**

# ಹೋಳಿ ಬಣ್ಣಗಳಲ್ಲಿ ಮೂಡುವ ಬದುಕಿನ ಹಬ್ಬ





☛ ವಿಶ್ವಾಸ್.ಡಿ.ಗೌಡ

ಹೋಳಿಯ ಮೂಲದಲ್ಲಿ ಅಡಗಿರುವ ಕಥೆ ನಮಗೆ ಸತ್ಯದ ವಿಜಯವನ್ನು ನೆನಪಿಸುತ್ತದೆ. ಪ್ರಹ್ಲಾದನ ಭಕ್ತಿ ಮತ್ತು ಹಿರಣ್ಯಕಶಿಪುವಿನ ಅಹಂಕಾರ ನಡುವೆ ನಡೆದ ಘರ್ಷಣೆಯಲ್ಲಿ, ಕೊನೆಗೆ ಗೆದ್ದದ್ದು ಭಕ್ತಿಯೇ.

''ಹೋಲಿಕಾ ದಹನ'' ಆ ದುಷ್ಟಶಕ್ತಿಗಳ ದಹನದ ಪ್ರತೀಕ. ಈ ವರ್ಷದ ಹೋಳಿಯಲ್ಲಿ ನಾವು ಕೇವಲ ಹೋಲಿಕೆಯನ್ನು ದಹಿಸುವುದಲ್ಲ, ನಮ್ಮೊಳಗಿನ ಹಿಂಗು, ಅಸೂಯೆ, ಅಹಂಕಾರಗಳನ್ನೂ ಸುಟ್ಟುಹಾಕುವ ಸಂಕಲ್ಪ ಮಾಡೋಣ.

ಹೋಳಿ ಎಂದರೆ ಕೇವಲ ಬಣ್ಣಗಳ ಆಟವಲ್ಲ, ಅದು ಹೃದಯಗಳ ಹಬ್ಬ. ವರ್ಷಪೂರ್ತಿ ದೂರವಾಗಿದ್ದ ಸ್ನೇಹಿತರು, ಬಂಧುಗಳು, ಅಕ್ಕಪಕ್ಕದವರು ಎಲ್ಲರೂ ಒಂದೇ ಬೀದಿಯಲ್ಲಿ ಸೇರಿ, ''ಬುರಾ ನ ಮಾನೋ, ಹೋಳಿ ಹೈ!'' ಎಂದು ನಗುವ ಕ್ಷಣವೇ ಹೋಳಿಯ ಮಧುರತೆ.

ಈ ವರ್ಷದ ಹೋಳಿ ನಮಗೆ ಮತ್ತಷ್ಟು ಆತ್ಮೀಯತೆಯನ್ನು ಕೊಡುಗೆಯಾಗಿ ತರುತ್ತಿದೆ. ಡಿಜಿಟಲ್ ಲೋಕದಲ್ಲಿ ಬಂಧಗಳನ್ನು ಕಳೆದುಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ, ಮುಖಾಮುಖಿಯಾಗಿ ಭೇಟಿಯಾಗಿ ಬಣ್ಣ ಹಚ್ಚುವುದು ಒಂದು ಸಾಂಸ್ಕೃತಿಕ ಪುನರುಜ್ಜೀವನವೇ ಸರಿ.

ಹೋಳಿಯ ಬಣ್ಣಗಳಿಗೆ ತಮ್ಮದೇ ಆದ ಅರ್ಥಗಳಿವೆ. ಕೆಂಪು ಪ್ರೀತಿ ಮತ್ತು ಉತ್ಸಾಹದ ಸಂಕೇತ. ಹಸಿರು ಹೊಸ ಬದುಕಿನ ಆಶೆಯ ಪ್ರತೀಕ. ಹಳದಿ ಆರೋಗ್ಯ ಮತ್ತು ಶಾಂತಿಯ ಸಂಕೇತ.

ನೀಲಿ ಆಕಾಶದಷ್ಟು ವಿಶಾಲವಾದ ಮನಸ್ಸಿನ ಸಂಕೇತ. ಈ ಬಣ್ಣಗಳನ್ನು ಪರಸ್ಪರ ಹಚ್ಚಿಕೊಳ್ಳುವಾಗ, ನಾವು ಕೇವಲ ಮುಖಕ್ಕೆ ಬಣ್ಣ ಹಾಕುವುದಲ್ಲ; ಪರಸ್ಪರ ಮನಸ್ಸಿಗೆ ಬಣ್ಣ ತುಂಬುತ್ತೇವೆ.

ಗ್ರಾಮೀಣ ಪ್ರದೇಶಗಳಲ್ಲಿ ಹೋಳಿ ಸಂಭ್ರಮ ಇನ್ನಷ್ಟು ವಿಶೇಷ. ಡೊಳ್ಳು, ತಾಳ, ಜನಪದ ಹಾಡುಗಳು, ಹಾಸ್ಯ ಆಡುವ ಗುಂಪುಗಳು ಎಲ್ಲವೂ ಸೇರಿ ಹಳ್ಳಿಯ ಬೀದಿಗಳನ್ನು ಹಬ್ಬದ ವೇದಿಕೆಯಾಗಿಸುತ್ತವೆ. ನಗರಗಳಲ್ಲಿ ಅಪಾರ್ಟ್‌ಮೆಂಟ್‌ಗಳ ಆವರಣದಲ್ಲಿಯೂ ಮಕ್ಕಳು ಬಣ್ಣದ ಪಿಚಕಾರಿಗಳೊಂದಿಗೆ ಸಂಭ್ರಮಿಸುತ್ತಾರೆ. ಎಲ್ಲೆಡೆ ಒಂದೇ ಹರ್ಷ, ಒಂದೇ ನಗು, ಒಂದೇ ಬಣ್ಣದ ಮಳೆ.

ಈ ವರ್ಷ ನಾವು ಪರಿಸರ ಸ್ನೇಹಿ ಹೋಳಿಯನ್ನು ಆಚರಿಸೋಣ. ರಾಸಾಯನಿಕ ಬಣ್ಣಗಳ ಬದಲು ಹೂಗಳಿಂದ, ಅರಿಶಿಣದಿಂದ, ಕುಂಕುಮದಿಂದ ತಯಾರಿಸಿದ ನೈಸರ್ಗಿಕ ಬಣ್ಣಗಳನ್ನು ಬಳಸಿ. ನೀರಿನ ಅತಿಯಾದ ವ್ಯರ್ಥತೆಯನ್ನು ತಪ್ಪಿಸಿ. ಹಬ್ಬದ ಸಾರ್ಥಕತೆ ಪ್ರಕೃತಿಯೊಂದಿಗೆ ಹೊಂದಾಣಿಕೆಯಲ್ಲಿ ಇದೆ.

ಹೋಳಿ ನಮಗೆ ಕಲಿಸುವ ಮುಖ್ಯ ಪಾಠ ಏನು ''ಬಾಳು ಬಣ್ಣಗಳಿಂದ ತುಂಬಿರಲಿ.''

ಬದುಕಿನಲ್ಲಿ ದುಃಖದ ಕಪ್ಪು ನೆರಳುಗಳಿರಬಹುದು, ಆದರೆ ಸಂತೋಷದ ಬಣ್ಣಗಳಿಂದ ಅವನ್ನು ಮಸುಕಾಗಿಸಬಹುದು. ಈ ವರ್ಷದ ಹೋಳಿ ನಮ್ಮ ಜೀವನಕ್ಕೆ ಹೊಸ ಆಶಾವಾದ, ಹೊಸ ಸ್ನೇಹ, ಹೊಸ ಪ್ರೇರಣೆಯನ್ನು ತುಂಬಲಿ.

ಬಣ್ಣಗಳಲ್ಲಿ ಮಿದುಳಾಡುವ ಈ ಹಬ್ಬವು ನಮ್ಮ ಸಂಸ್ಕೃತಿಯ ಒಗ್ಗಟ್ಟಿನ ಸಂಕೇತ.

ಧರ್ಮ, ಜಾತಿ, ಭಾಷೆ ಎಲ್ಲಾ ಭೇದಗಳನ್ನೂ ಮರೆತು ಒಟ್ಟಾಗಿ ಆಚರಿಸುವ ಹಬ್ಬವೇ ಹೋಳಿ. ಅದು ನಮಗೆ ಹೇಳುತ್ತದೆ ''ನಾವು ವಿಭಿನ್ನ ಬಣ್ಣಗಳಾದರೂ, ಒಂದೇ ಹಬ್ಬದ ಭಾಗ.''

ಈ ವರ್ಷದ ಹೋಳಿ ನಿಮ್ಮ ಬದುಕಿಗೆ ಪ್ರೀತಿ, ಶಾಂತಿ, ಆರೋಗ್ಯ ಮತ್ತು ಸಮೃದ್ಧಿಯನ್ನು ತರಲಿ. ನಿಮ್ಮ ಕನಸುಗಳು ಬಣ್ಣಗಳಿಂದ ತುಂಬಿ, ನಿಮ್ಮ ನಗು ಸದಾ ಹಸಿರಾಗಿರಲಿ.

ಬಣ್ಣಗಳಿಂದ ಬದುಕನ್ನು ಸುಂದರಗೊಳಿಸೋಣ, ಹೃದಯಗಳಲ್ಲಿ ಪ್ರೀತಿಯ ಹೋಳಿ ಆಡೋಣ!

---

# 'ದೀಪಧಾರಿಣಿ' ನಿರಂತರದ ಅರ್ಪಣೆ

**'ನೃತ್ಯ ದರ್ಪಣ್ ಅಕಾಡೆಮಿ' ಸ್ಟುಡಿಯೋದಲ್ಲಿ ಶ್ರೀ ಬಾಲಲತಿಕಾ ಕುಚಿಪುಡಿ ಸೆಂಟರ್ ಸಹಯೋಗ**

**ಚಿಂತನೆ ಹರಿಸುವ ಭರತನಾಟ್ಯ**





**ವೈವಿಧ್ಯಪೂರ್ಣ ಕಣ್ಮನ ಸೂರೆಗೊಳ್ಳುವ ನೃತ್ಯ**

ಪ್ರತಿವರ್ಷ ಮಾರ್ಚ್ 8 ರಂದು ದೇಶಾದ್ಯಂತ 'ಮಹಿಳಾ ದಿನಾಚರಣೆ' ಅಂಗವಾಗಿ ಮಹಿಳೆಯರ ಅಸ್ಮಿತೆಯನ್ನು ಎತ್ತಿ ಹಿಡಿಯುವ ಅನೇಕ ಮಹತ್ವದ- ಅರ್ಥಪೂರ್ಣ ಕಾರ್ಯಕ್ರಮಗಳು ನಡೆಯುವುದು ವಾಡಿಕೆ. ಅದರಂತೆ 'ನೃತ್ಯದರ್ಪಣ್' -ಖ್ಯಾತ ಕಥಕ್ ನೃತ್ಯ ಸಂಸ್ಥೆಯ ಸಂಸ್ಥಾಪಕರು ಮತ್ತು ಹಿರಿಯ ಕಥಕ್ ನೃತ್ಯಗುರುಗಳು- ಕಲಾವಿದೆಯಾದ ವಿ. ವೀಣಾ ಭಟ್ ಮತ್ತು ನೃತ್ಯಗುರು ಕರ್ಪಗಂ ಬಾಲಲತಿಕಾ ಅವರುಗಳ ನೇತೃತ್ವದಲ್ಲಿ ಮಾರ್ಚ್ 8 ರಂದು ಸಂಜೆ 4.30 ಗಂಟೆಗೆ ಬೆಂಗಳೂರಿನ ಜೆ.ಪಿ. ನಗರದಲ್ಲಿರುವ 'ನೃತ್ಯ ದರ್ಪಣ್ ಅಕಾಡೆಮಿ' ಸ್ಟುಡಿಯೋದಲ್ಲಿ ಶ್ರೀ ಬಾಲಲತಿಕಾ ಕುಚಿಪುಡಿ ಸೆಂಟರ್ ಸಹಯೋಗದೊಂದಿಗೆ ''ದೀಪಧಾರಿಣಿ'- ಶೀರ್ಷಿಕೆಯಲ್ಲಿ ಮಹಿಳಾ ಕಲಾಪ್ರತಿಭೆಗಳ ವಿಶೇಷ ಕಾರ್ಯಕ್ರಮಗಳು ಅನಾವರಣಗೊಳ್ಳಲಿವೆ.


ವಿ. ಡಾ. ರಮ್ಯ ಸೂರಜ್ ಖ್ಯಾತ ನೃತ್ಯಗುರು ಹಾಗೂ ಸಂಗೀತ ಕಲಾವಿದರು ಇವರಿಂದ ಸುಗಮ ಸಂಗೀತದ ಮೂಲಕ 'ಮಾನಿನಿ ಗೀತಾ'- ಸುಶ್ರಾವ್ಯ ಗೀತಧಾರೆ, ವಿ. ದಿವ್ಯಾ ಗೋಸ್ವಾಮಿ 'ಎಕೋಸ್ ಆಫ್ ಡಿವೈನ್ ಫೆಮಿನೈನ್'- ಕುರಿತ ವಿಷಯಾಧಾರಿತ ಕಥಕ್ ನೃತ್ಯ ಪ್ರಸ್ತುತಿ ಮತ್ತು ವಿ. ರಶ್ಮೀ ಅಗರವಾಲ್ 'ಶ್ಯಾಡೋಸ್ ಆಫ್ ವುಮನ್ ಹುಡ್' ವಸ್ತುವಿನ ಸುತ್ತ ಚಿಂತನೆಯನ್ನು ಹರಿಸುವ ಭರತನಾಟ್ಯದ ವೈವಿಧ್ಯಪೂರ್ಣ ಕಣ್ಮನ ಸೂರೆಗೊಳ್ಳುವ ನೃತ್ಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಲಿಪಿಪ್ರಾಜ್ಞೆ ಶ್ರೀಮತಿ ವೈ.ಕೆ .ಸಂಧ್ಯಾ ಶರ್ಮ, ಪ್ರಖ್ಯಾತ ಲೇಖಕಿ , ರಂಗಕರ್ಮಿ, ಅಂಕಣಕಾರ್ತಿ ಮತ್ತು ನೃತ್ಯ - ನಾಟಕಗಳ ವಿಮರ್ಶಕರು ಭಾಗವಹಿಸುತ್ತಾರೆ .

---

## ದಿನಕ್ಕೊಂದು ಮುಕ್ತಕ: 109

**ಸಾಮಾಜಿಕ ಕಳಕಳಿ**



**ಹೆಚ್.ಎಸ್. ಪ್ರತಿಮಾ**
**ಲೇಖಕರು**
**ಸಾಮಾಜಿಕ ಚಿಂತಕಿ ಹಾಗೂ ಶಿಕ್ಷಕಿ, ಹಾಸನ**

*ಜನನಿಯೂ ನೀವಾಗಿ ಬಾಗುತಲೆ ಸೇವೆಯಲಿ*
*ಮನವನದು ಗೆಲ್ಲುತಲಿ ಕಾರ್ಯದಲ್ಲಿ*
*ಸನಿಹದಲಿ ಇರುತಲಿಯೆ ಮಹಿಳೆಯರಿಗೆ ಪ್ರೋತ್ಸಾಹಿಸಿ*
*ಕನಿಕರವ ತೋರುವಿರಿ ಲಕ್ಷ್ಮಿ ದೇವಿ...*

**ಭಾವಾರ್ಥ:** ತಾಯಿಯು ಜನನಿಯಾಗಿ ಎಲ್ಲೆಡೆಯೂ ಬಾಗುತ ತನ್ನದೇ ಆದಂತಹ ಸೇವೆಯನ್ನು ಮಾಡುವುದರಲ್ಲಿ ಮೊದಲಿಗಳಾಗಿರುತ್ತಾಳೆ. ತನ್ನ ಆಸೆ ಆಕಾಂಕ್ಷೆಗಳನ್ನು ಎಷ್ಟೋ ಬಾರಿ ಬಲಿ ಮಾಡಿ ಜೀವನದಲ್ಲಿ ಸಂತಸದ ಬದುಕಿನಂತೆ ವ್ಯಕ್ತಪಡಿಸುತ್ತಾ ಸಾಗುತ್ತಾಳೆ. ಹಾಗೆಯೇ ಎಲ್ಲರ ಮನವನ್ನು ಗೆಲ್ಲುತಲಿ ಕೆಲಸವನ್ನು ಮಾಡುವುದರಲ್ಲಿ ಮುಂದಿರುತ್ತಾಳೆ. ಹಾಗೆಯೇ ಇತರರ ಕಷ್ಟಗಳನ್ನು ಕಂಡು ಸಹಕಾರ ಮಾಡುತ್ತ ಮಹಿಳೆಯರಿಗೂ ಪ್ರೋತ್ಸಾಹ ಸಲಹೆಗಳನ್ನು ನೀಡುತ್ತ , ಅವರಿಗೆ ಕನಿಕರವನ್ನು ತೋರಿಸುತ್ತ ಸಾಗುತ್ತಾಳೆ. ಅದಕ್ಕೆ ಅಲ್ಲವೇ ಆಕೆಯನ್ನು ಮಹಾತ್ಯಾಗಿ ಎಂದು ಕರೆಯುವರು ಆಕೆ ತನ್ನ ಮಕ್ಕಳನ್ನು ಸಾಕುವುದರಲ್ಲಿ ಯಶಸ್ವಿ ಆಗುತ್ತಾಳೆ. ಸಮಾಜದಲ್ಲಿ ಹೆಣ್ಣಿಗೆ ವಿಶೇಷವಾದ ಸ್ಥಾನವಿರುವುದು ಪ್ರತಿಯೊಬ್ಬರಿಗೂ ತಿಳಿದಿರುವಂತಹ ವಿಷಯ. ಅಂತರಾಳದ ಮನದಲ್ಲಿ ಎಷ್ಟೇ ಆಸೆ ಆಕಾಂಕ್ಷೆಗಳಿದ್ದರೂ ಸಹ ಯಾವುದೇ ರೀತಿಯ ಹಠವನ್ನು ಮಾಡದ ರೀತಿ ತನ್ನ ಜೀವನದಲ್ಲಿ ಇರುವ ಜವಾಬ್ದಾರಿಯನ್ನು ನೆನೆಯುತ್ತಾ ಅರಿಯುತ್ತ ಮಕ್ಕಳಿಗಾಗಿ ತನ್ನ ಜೀವನವನ್ನೇ ಮುಡುಪಿಟ್ಟು ಹೋರಾಟದ ಬದುಕನ್ನು ಮಾಡುವವರು ಬಹಳಷ್ಟು ಮಂದಿ ಇದ್ದಾರೆ. ಜಗದ ನಿಯಮಗಳಲ್ಲಿ ಕೆಲವೊಮ್ಮೆ ಆಕೆ ತನಗೆ ತಾನೇ ಮನದಲ್ಲಿ ಅರ್ಥೈಸಿಕೊಂಡು ಮಾಡಲಾಗದಿದ್ದರೂ ಸಹ ಅದಕ್ಕೆ ತಲೆಬಾಗಿ ಕಾರ್ಯ ನಿರ್ವಹಿಸುತಲಿ ಸಾಗುತಿರುವುದನ್ನು ಕಾಣುವ ಉದಾಹರಣೆ ಬಹಳಷ್ಟಿದೆ .



---

# ರಾಮಾಯಣ



**ಶ್ರೀ ಲಕ್ಷ್ಮಣನು ಸುಗ್ರೀವನನ್ನು ರಾಮನ ಬಳಿಗೆ ಕರೆದದ್ದು**

• ಹಿಂದಿನ ಸಂಚಿಕೆಯಿಂದ

## 121 ನೆಯ ಅಧ್ಯಾಯ

ಅಂಥ ಹಣ್ಣುಗಳನ್ನೂ ಗಡ್ಡೆಗೆಣಸುಗಳನ್ನೂ ತೆಗೆದುಕೊಂಡು ಕಪಿನಾಯಕರೆಲ್ಲರೂ ಬಂದು ಸುಗ್ರೀವನಿಗೆ ಕಾಣಿಕೆಯನ್ನರ್ಪಿಸಿದರು. ಇನ್ನೂ ಬಹುಪ್ರದೇಶಗಳಿಂದ ವಾನರರು ತಂಡತಂಡವಾಗಿ ಬರುತ್ತಿದ್ದಾರೆಂಬ ಸಂತೋಷದ ವಾರ್ತೆಯನ್ನು ಸುಗ್ರೀವನಿಗೆ ಮುಟ್ಟಿಸಿದರು.

**ಸುಗ್ರೀವನು ಶ್ರೀ ರಾಮನನ್ನು ಕಾಣಿಸಿಕೊಂಡದ್ದು**

ಇತ್ತ ಸುಗ್ರೀವನಿಗೆ ಸಂತೋಷವಾಗುವಂತೆ ಲಕ್ಷ್ಮಣನು ಆತನನ್ನು ಕುರಿತು ಸುಗ್ರೀವ ಇನ್ನು ನಿನ್ನ ಚಿತ್ರಕ್ಕೆ ವರ್ಷವಾದ ಪಕ್ಷದಲ್ಲಿ ಶ್ರೀರಾಮನಿರುವ ಎಡೆಗೆ ಹೋಗೋಣ ಎಂದು ಹೇಳಿದನು.

ಆ ಮಾತನ್ನು ಕೇಳಿ ಸುಗ್ರೀವನು ಪ್ರೀತಿಯಿಂದ ಲಕ್ಷ್ಮಣ, ನೀನು ಹೇಳಿದ ಪ್ರಕಾರ ನಾನು ಕೇಳಿ ಕೊಂಡಿರುವೆನು. ನನಗೆ ಸಂತೋಷವಾಯಿತು. ಶ್ರೀರಾಮನ ಸಮೀಪಕ್ಕೆ ಹೋಗೋಣ ಬಾ ಎಂದು ಹೇಳಿ ತಾರಾದೇವಿಯ ಮೊದಲಾದ ಸ್ತ್ರೀಯರನ್ನು ಅಂತಃಪುರಕ್ಕೆ ಕಳುಹಿಸಿ ತನ್ನ ಪ್ರಧಾನರನ್ನು ಕರೆದು ಶೀಘ್ರವಾಗಿ ಪಾಲಕಿಯನ್ನು ಸಜ್ಜುಗೊಳಿಸಲು ಕಟ್ಟುಮಾಡಿದನು.

ಆ ಪ್ರಧಾನರು ಮಹಾಪ್ರಸಾದವೆಂದು ಆತನ ವಾಕ್ಯವನ್ನು ಶಿರಸಾವಹಿಸಿ ಶೀಘ್ರದಲ್ಲಿ ಪಾಲಕಿಯನ್ನು ತಂದರು. ಸುಗ್ರೀವನು ಆ ಪಾಲಕಿಯನ್ನು ನೋಡಿ ಸಂತೋಷದಿಂದ ಲಕ್ಷ್ಮಣನನ್ನು ಸಂತವಿಟ್ಟು, ಆತನೊಡನೆ ಪಾಲಕಿಯನ್ನೇರಿಕೊಂಡು ಶ್ವೇತಚ್ಛತ್ರ, ಶ್ವೇತಚಾಮರ ಶಂಖ ಭೇರಿ ಮೊದಲಾದ ರಾಜಚಿಹ್ನೆಗಳಿಂದ ದೇದೀಪ್ಯಮಾನವಾಗಿ ಒಪ್ಪುತ್ತ ಆಯುಧಪಾಣಿಗಳಾದ ಅನೇಕ ಕಪಿನಾಯಕರನ್ನು ಕೂಡಿಕೊಂಡು ಶ್ರೀರಾಮನ ಸಮೀಪಕ್ಕೆ ಹೋದನು. ಅನಂತರ ಸುಗ್ರೀವನು ಸಮಸ್ತ ಕಪಿನಾಯಕರೂ ಕೈಮುಗಿದುಕೊಂಡಿರಲು ಶ್ರೀರಾಮನಿಗೆ ಸಾಷ್ಟಾಂಗವಾಗಿ ಎರಗಿದನು.


ಮಹತ್ತಾದ ತಟಾಕದಲ್ಲಿ ತಾವರೆಯ ಮೊಗ್ಗುಗಳು ಇಟ್ಟುಸಿರುವಂತೆ ಒಪ್ಪುತ್ತಿದ್ದ ಆ ಕಪಿಸೇನೆ ಯನ್ನು ಕಂಡು ಶ್ರೀರಾಮನು ಅತ್ಯಂತ ಪ್ರೀತಿಯುಳ್ಳವನಾದನು. ಸುಗ್ರೀವನನ್ನು ತನ್ನ ಹಸ್ತಗಳಿಂದ ಹಿಡಿದೆತ್ತಿ ತೋಳುಗಳಿಂದ ತಬ್ಬಿಕೊಂಡು ಕುಳ್ಳಿರಿಸಿ ಆತನನ್ನು ಕುರಿತು ಎಲೈ ಸುಗ್ರೀವ, ಲೋಕದಲ್ಲಿ ಯಾವ ಮನುಷ್ಯನು ಅರ್ಥವನ್ನು ಸಂಪಾದಿಸುವ ಕಾಲದಲ್ಲಿ ಧರ್ಮಕಾಮಗಳಿಗೆ ವಿರುದ್ಧವಲ್ಲದಂತೆಯೂ ಧರ್ಮವನ್ನು ಸಂಪಾದಿಸುವ ಕಾಲದಲ್ಲಿ ಅರ್ಥಕಾಮಗಳಿಗೆ ವಿರುದ್ಧ ವಲ್ಲದಂತೆಯೂ ಕಾಮವನ್ನು ಸಂಪಾದಿಸುವ ಕಾಲದಲ್ಲಿ ಧರ್ಮಾರ್ಥಗಳಿಗೆ ವಿರುದ್ಧವಲ್ಲದಂತೆಯೂ ಪುರುಷಾರ್ಥಗಳನ್ನು ಸಂಪಾದಿಸುವನೋ ಆತನೇ ಲೋಕನಾಯಕನಾಗುವನು. ಹಾಗಲ್ಲದೆ ಧರ್ಮಾರ್ಥಗಳನ್ನು ಕೆಡಿಸಿ ಕಾಮವನ್ನು ಸಂಪಾದಿಸುವವನು, ವೃಕ್ಷದ ಮೇಲೆ ಮಲಗಿ ಮೈಮರೆತವನು ಕೆಳಗೆ ಬಿದ್ದಮೇಲೆ ಎಚ್ಚರದೊಂದುವಂತೆ ಅಧೋಗತಿಯನ್ನು ಹೊಂದಿದ ಮೇಲೆಯೇ ಜಾಗರೂಕನಾಗುವನು.

ಮುಂದುವರಿಯುವುದು...

---

**ಕೆಮ್ಮು ಯಾವುದೇ ಸಮಯದಲ್ಲಿ ಬರಬಹುದು, ಆದರೆ ಕೆಲವರಿಗೆ ವಿಶೇಷವಾಗಿ ರಾತ್ರಿಯಲ್ಲಿ, ಮಲಗಲು ಹೋದ ತಕ್ಷಣ ಕೆಮ್ಮಲಾರಂಭಿಸುತ್ತಾರೆ. ದಿನವಿಡೀ ಎಲ್ಲವೂ ಸಾಮಾನ್ಯವೆಂದು ತೋರುತ್ತದೆ ಆದರೆ ಮಲಗಿದ ತಕ್ಷಣ ಗಂಟಲು ಕಿರಿಕಿರಿ ಅಥವಾ ನಿರಂತರ ಕೆಮ್ಮು ಪ್ರಾರಂಭವಾಗುತ್ತದೆ. ಈ ಸ್ಥಿತಿಯನ್ನು ರಾತ್ರಿ ಕೆಮ್ಮು ಎಂದು ಕರೆಯಲಾಗುತ್ತದೆ. ಇದು ನಿದ್ರಾಹೀನತೆಗೆ ಕಾರಣವಾಗಬಹುದು ಮತ್ತು ಬೆಳಿಗ್ಗೆ ಆಯಾಸ, ಕಿರಿಕಿರಿ ಮತ್ತು ದೌರ್ಬಲ್ಯಕ್ಕೆ ಕಾರಣವಾಗಬಹುದು. ಈ ರೀತಿ ರಾತ್ರಿ ಕೆಮ್ಮಿಗೆ ಕಾರಣವೇನು, ಇದನ್ನು ಯಾವ ರೀತಿ ಪರಿಹರಿಸಬಹುದು ಎನ್ನುವುದನ್ನು ತಿಳಿಯೋಣ.**

# ರಾತ್ರಿ ಮಲಗಿದ ತಕ್ಷಣ ಕೆಮ್ಮು ಶುರುವಾಗುತ್ತಾ



**ರಾತ್ರಿ ಮಲಗುವಾಗ ಕೆಮ್ಮು**

ಹೆಲ್ತ್ ತಂಡ ಬೆಂಗಳೂರಿನ ಆಸ್ಟರ್ ಆರ್‌ವಿ ಆಸ್ಪತ್ರೆಯ ಶ್ವಾಸಕೋಶಶಾಸ್ತ್ರಜ್ಞರು ಡಾ. ಕೌಶಿಕ್.ಎನ್ ಅವರನ್ನು ಸಂಪರ್ಕಿಸಿದ್ದು, ಕೆಲವರಿಗೆ ಆಗಾಗ್ಗೆ ರಾತ್ರಿ ಕೆಮ್ಮು ಕಾಣಿಸಿಕೊಳ್ಳಲು ಕಾರಣವನ್ನು ತಿಳಿಸಿದ್ದಾರೆ. ಜನರು ಮಲಗಿದಾಗ ಅದರ ತೀವ್ರತೆ ಹೆಚ್ಚಾಗುತ್ತದೆ ಏಕೆಂದರೆ ಅವರ ದೇಹದ ಸ್ಥಾನವು ವಾಯುಮಾರ್ಗದ ಅಡಚಣೆಗೆ ಹೆಚ್ಚಿನ ಸಂವೇದನೆಯನ್ನು ಉಂಟುಮಾಡುತ್ತದೆ.

ಈ ಸ್ಥಿತಿಗೆ ಪ್ರಾಥಮಿಕ ಕಾರಣವೆಂದರೆ ಸೈನಸ್ ಲೋಳೆಯು ಗಂಟಲಿಗೆ ಹರಿಯುವಂತೆ ಮಾಡುತ್ತದೆ. ಮಲಗಿದ ತಕ್ಷಣ ಮೂಗಿನ ಲೋಳೆಯು ಗಂಟಲಿನ ಹಿಂಭಾಗದಲ್ಲಿ ಹರಿಯುತ್ತದೆ, ಇದನ್ನು ಪೋಸ್ಟ್‌ನಾಸಲ್ ಡ್ರಿಪ್ ಎಂದು ಕರೆಯಲಾಗುತ್ತದೆ, ಇದು ಕೆಮ್ಮನ್ನು ಪ್ರಚೋದಿಸುತ್ತದೆ. ಇದಲ್ಲದೆ, ಕೋಣೆಯ ಒಣ ಗಾಳಿಯು ಗಂಟಲಿನಲ್ಲಿ ತುರಿಕೆ ಮತ್ತು ಕಿರಿಕಿರಿಯನ್ನು ಉಂಟುಮಾಡಬಹುದು. ಚಪ್ಪಟೆಯಾಗಿ ಮಲಗಿದಾಗ ಕೆಮ್ಮುವಿಕೆಯನ್ನು ಪ್ರಾರಂಭಿಸುತ್ತದೆ.

**ಆಸಿಡ್ ರಿಫ್ಲಕ್ಸ್**

ಆಸಿಡ್ ರಿಫ್ಲಕ್ಸ್ ಮತ್ತೊಂದು ಸಾಮಾನ್ಯ ಕಾರಣವಾಗಿದೆ ಏಕೆಂದರೆ ಮಲಗಿದ ಸ್ಥಾನವು ಹೊಟ್ಟೆಯ ಆಮ್ಲವನ್ನು ಗಂಟಲಿಗೆ ಪ್ರವೇಶಿಸಲು ಅನುವು ಮಾಡಿಕೊಡುತ್ತದೆ.

ಇದು ವಾಯುಮಾರ್ಗದ ಕಿರಿಕಿರಿಯನ್ನು ಉಂಟುಮಾಡುತ್ತದೆ.

ಮನೆಯಲ್ಲಿ ಜನರು ಆಸ್ತಮಾ ಲಕ್ಷಣಗಳನ್ನು ಅನುಭವಿಸಿದಾಗ ಅಥವಾ ಅಲರ್ಜಿ ಸಮಸ್ಯೆಗಳನ್ನು ಎದುರಿಸಿದಾಗ ಅಥವಾ ಒಣ ಗಾಳಿಯನ್ನು ಉಸಿರಾಡಿದಾಗ ಅಥವಾ ಉಸಿರಾಟದ ಸೋಂಕನ್ನು ಸಂಕುಚಿತಗೊಳಿಸಿದಾಗ ಅಥವಾ ಧೂಳಿನ ಕಣಗಳನ್ನು ಎದುರಿಸಿದಾಗ ರಾತ್ರಿಯ ಕೆಮ್ಮು ಹೆಚ್ಚು ತೀವ್ರವಾಗುತ್ತದೆ. ತಂಪಾದ ರಾತ್ರಿ ಗಾಳಿ ಮತ್ತು ನಿದ್ರೆಯ ಅವಧಿಯಲ್ಲಿ ನುಂಗುವ ಸಾಮರ್ಥ್ಯ ಕಡಿಮೆಯಾಗುವುದರ ಸಂಯೋಜನೆಯು ಗಂಟಲಿನ ಕಿರಿಕಿರಿಯುಂಟುಮಾಡುವ ವಸ್ತುಗಳು ದೀರ್ಘಕಾಲದವರೆಗೆ ಗಂಟಲಿನಲ್ಲಿ ಸಿಲುಕಿಕೊಳ್ಳಲು ಅನುವು ಮಾಡಿಕೊಡುತ್ತದೆ.

**ರಾತ್ರಿ ಕೆಮ್ಮಿಗೆ ಇನ್ನಿತರ ಕಾರಣವೇನು**

ರಾತ್ರಿಯಲ್ಲಿ ಕೆಮ್ಮು ಹೆಚ್ಚಾಗಲು ಹಲವು ಕಾರಣಗಳಿವೆ, ಅವುಗಳಲ್ಲಿ ಮಲಗುವ ಭಂಗಿ, ಕೋಣೆಯ ವಾತಾವರಣ, ಕೆಲವು ಔಷಧಿಗಳು ಅಥವಾ ಆಧಾರವಾಗಿರುವ ಆರೋಗ್ಯ ಸಮಸ್ಯೆಗಳು ಸೇರಿವೆ.

ಆಸಿಡ್ ರಿಫ್ಲಕ್ಸ್ ಹೆಚ್ಚಾಗಿ ಒಂದು ಪ್ರಮುಖ ಕಾರಣವಾಗಿದೆ. ಮಲಗುವುದು ಹೊಟ್ಟೆಯ ಆಮ್ಲವನ್ನು ಗಂಟಲಿಗೆ ತಳ್ಳಬಹುದು, ಇದು ಒಣ ಕೆಮ್ಮನ್ನು ಪ್ರಚೋದಿಸುತ್ತದೆ. ಅದೇ ರೀತಿ, ಅಲರ್ಜಿಗಳು, ಆಸ್ತಮಾ, ನ್ಯುಮೋನಿಯಾ, ನಾಯಿಕೆಮ್ಮುನಂತಹ ಶ್ವಾಸಕೋಶದ ಕಾಯಿಲೆಗಳು ರಾತ್ರಿಯಲ್ಲಿ ಕೆಮ್ಮನ್ನು ಹೆಚ್ಚಿಸಬಹುದು.

**ಇದನ್ನು ಹೇಗೆ ತಡೆಯಬಹುದು**

ರಾತ್ರಿಯ ಕೆಮ್ಮು ಮತ್ತು ನಿದ್ರೆಯ ಸಮಸ್ಯೆಗಳ ಚಿಕಿತ್ಸೆಯನ್ನು ಬಹು ಪರಿಣಾಮಕಾರಿ ಮನೆಮದ್ದುಗಳ ಮೂಲಕ ಪರಿಹರಿಸಬಹುದು.

ಕೆಲವು ಸರಳ ಹಂತಗಳು ರಾತ್ರಿಯ ಕೆಮ್ಮನ್ನು ನಿವಾರಿಸಲು ಸಹಾಯ ಮಾಡುತ್ತದೆ. ಒದ್ದೆ ಕೆಮ್ಮಿಗೆ, ಕಫ ತೆಳುಗೊಳಿಸುವ ಔಷಧಿಗಳಾದ ಕಫ ನಿವಾರಕಗಳು ಸಹಾಯಕವಾಗಬಹುದು. ಒಣ ಕೆಮ್ಮಿಗೆ, ಕೆಮ್ಮಿನ ಡ್ರಾಪ್ಸ್‌ಗಳನ್ನು ಬಳಸಬಹುದು. ಕೋಣೆಯಲ್ಲಿ 40 ರಿಂದ 50 ಪ್ರತಿಶತದಷ್ಟು ಆರ್ದ್ರತೆಯನ್ನು ಕಾಪಾಡಿಕೊಳ್ಳಲು ಆರ್ದ್ರಕವು ಉಪಯುಕ್ತವಾಗಿದೆ.

ಜೇನುತುಪ್ಪದ ಒಂದು ಟೀಚಮಚ ಸೇವನೆಯು ಗಂಟಲಿನ ಹೊದಿಕೆ ಮತ್ತು ಕಿರಿಕಿರಿಯನ್ನು ನಿವಾರಿಸುತ್ತದೆ, ಇದು ಕೆಮ್ಮಿನ ಲಕ್ಷಣಗಳನ್ನು ಕಡಿಮೆ ಮಾಡುತ್ತದೆ.

## ಕೆಮ್ಮು ಇರುವವರು ಈ ಟಿಪ್ಸ್‌ಗಳನ್ನು ಅನುಸರಿಸುವುದು ಉತ್ತಮ

- ಮಲಗುವ ಮುನ್ನ ಬೆಚ್ಚಗಿನ ಉಪ್ಪು ನೀರಿನಿಂದ ಬಾಯಿ ಮುಕ್ಕಳಿಸುವುದು.
- ದಿನವಿಡೀ ಸಾಕಷ್ಟು ನೀರು ಕುಡಿಯುವುದು ಮತ್ತು ತಲೆಯನ್ನು ಮೇಲಕ್ಕೆತ್ತಿ ಮಲಗುವುದು ಸಹ ಸಹಾಯ ಮಾಡುತ್ತದೆ.
- ಬೆಚ್ಚಗಿನ ನೀರಿನೊಂದಿಗೆ ಒಂದು ಟೀಚಮಚ ಜೇನುತುಪ್ಪ ಅಥವಾ ನಿಂಬೆಹಣ್ಣು ಬೆರೆಸಿ ಕುಡಿಯುವುದರಿಂದ ಗಂಟಲು ನೋವು ಶಮನವಾಗುತ್ತದೆ.
- ಮಲಗುವ ಮುನ್ನ ಬಿಸಿನೀರಿನ ಸ್ನಾನ ಮಾಡುವುದರಿಂದ ಹಬೆಯಿಂದ ಉಂಟಾಗುವ ದಟ್ಟಣೆ ಕಡಿಮೆಯಾಗುತ್ತದೆ.
- ನೀವು ಧೂಮಪಾನ ಮಾಡುತ್ತಿದ್ದರೆ, ಧೂಮಪಾನ ಬಿಡುವುದು ದೊಡ್ಡ ಹೆಜ್ಜೆಯಾಗಿರಬಹುದು ಮತ್ತು ಒಂದು ವಾರದೊಳಗೆ ವ್ಯತ್ಯಾಸವನ್ನುಂಟು ಮಾಡುತ್ತದೆ.
- ಮಲಗುವ ಮುನ್ನ ಭಾರೀ ಊಟ, ಕೆಫೀನ್ ಮತ್ತು ಮಸಾಲೆಯುಕ್ತ ಆಹಾರಗಳನ್ನು ತಪ್ಪಿಸುವುದು ರಾತ್ರಿಯ ಕೆಮ್ಮನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

# ರೈತರು ನೈಸರ್ಗಿಕ ಕೃಷಿ ಪದ್ಧತಿಯ ಮೂಲಕ ಬದುಕ ಬೇಕು : ನೀಲಂ ಪಟೇಲ್

• ಉದಯವಾಹಿನಿ ಕಮಲನಗರ

ತಾಲ್ಲೂಕಿನ ಡೋಣಗಾಂವ(ಎಮ್) ಗ್ರಾಮದ ಪ್ರಗತಿಪರ ರೈತ ಬಾಬುರಾವ ಸೋಮುರೆ ಅವರು ಇತೀಚಿಗೆ ನಡೆದ ಗುಜರಾತ ರಾಜ್ಯದ ಭುಜ ಪಟ್ಟಣದಲ್ಲಿ ನಡೆದ ಎರಡು ದಿನಗಳ ರಾಷ್ಟ್ರೀಯ ಮಟ್ಟದ ನ್ಯಾಚುರಲ್ ಫಾಮಿರ್‌ಂಗ್ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು. ಈ ಕಾರ್ಯ ಉತ್ಸಾಹಭರಿತವಾಗಿ ನೆರವೇರಿತು. ದೇಶದ ಎಲ್ಲಾ ರಾಜ್ಯಗಳಿಂದ ರೈತ ಪ್ರತಿನಿಧಿಗಳು, ಕೃಷಿ ತಜ್ಞರು ಹಾಗೂ ಅಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಕಾರ್ಯಾಗಾರವನ್ನು ನೀತಿ ಆಯೋಗ ಅವರ ಮಾರ್ಗದರ್ಶನದಲ್ಲಿ ಆಯೋಜಿಸಲಾಗಿತ್ತು.

ನೀತಿ ಆಯೋಗದ ಮುಖ್ಯ ಸಲಹೆಗಾರ್ತಿ ನೀಲಂ ಪಟೇಲ್ ಅವರ ನ್ಯಾಚುರಲ್ ಫಾಮಿರ್‌ಂಗ್‌ನ ಐದು ಪ್ರಮುಖ ತತ್ವಗಳನ್ನು ವಿವರವಾಗಿ ತಿಳಿಸಲಾಯಿತು. ಅದರಲ್ಲಿ ಬೀಜಾಮೃತ, ಜೀವಾಮೃತ, ಮಲ್ಚಿಂಗ್ (ಆವರಣೆ), ವಾಫ್ಸಾ ಮತ್ತು ಸ್ವಾಭಾವಿಕ ಕೀಟ ನಿಯಂತ್ರಣ ಬ್ರಹ್ಮಾಸ್ತ್ರ ಇತ್ಯಾದಿ) ತತ್ವಗಳು ಒಳಗೊಂಡಿದವು. ದೇಶಿ ಹಸುವಿನ ಆಧಾರಿತ ಕೃಷಿ, ಉತ್ಪಾದನಾ ವೆಚ್ಚದಲ್ಲಿ ಕಡಿತ, ಮಣ್ಣಿನ ಸಸ್ಯೋತ್ಪಾದಕತೆ ಹೆಚ್ಚಿಸುವುದು ಹಾಗೂ ರಾಸಾಯನಿಕರಹಿತ ಆಹಾರ ಉತ್ಪಾದನೆ ಕುರಿತು ತಜ್ಞರು ಮಾರ್ಗದರ್ಶನ ನೀಡಿದರು. ಶಾಶ್ವತ ಕೃಷಿ ಮತ್ತು ಆತ್ಮನಿರ್ಭರ ಭಾರತದ ದಿಸೆಯಲ್ಲಿ ನ್ಯಾಚುರಲ್ ಫಾಮಿರ್‌ಂಗ್ ಮಹತ್ವದ ಪಾತ್ರ ವಹಿಸಲಿದೆ ಎಂದು ತಿಳಿಸಿದರು. ಈ ಕಾರ್ಯಾಗಾರದಲ್ಲಿ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಗ್ರಾಮೀಣ ಕೃಷಿ ಅಭಿವೃದ್ಧಿ ಮತ್ತು ಸಂಶೋಧನಾ ಸಂಸ್ಥೆ ಅಧ್ಯಕ್ಷ ಶ್ರೀ ಬಾಬುರಾವ್ ಸೋಮೂರೆ ಭಾಗವಹಿಸಿದರು. ಅವರು ಕಮಲನಗರ್ ತಾಲ್ಲೂಕು ಕೃಷಿ ಅಧಿಕಾರಿ ಶತ್ರುಘ್ನ


ಉದಯವಾಹಿನಿ ಚಿತ್ರ

ಮಾರ್ಗದರ್ಶನ ಹಾಗೂ ಶ್ರೀ ಸಾಹೇಬರ ಮಾರ್ಗದರ್ಶನದಲ್ಲಿ ಈ ರಾಷ್ಟ್ರೀಯ ಕಾರ್ಯಾಗಾರದಲ್ಲಿ ಹಾಜರಿದ್ದರು. ಕಾರ್ಯಾಗಾರದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಂಡು ವಿವಿಧ ರಾಜ್ಯಗಳ ರೈತರೊಂದಿಗೆ ಸಂವಾದ ನಡೆಸಿದರು. ಭುಜ್‌ನಲ್ಲಿ ನಡೆದ ಈ ರಾಷ್ಟ್ರೀಯ ಕಾರ್ಯಾಗಾರದಿಂದ ಪ್ರೇರಣೆ ಪಡೆದು ಕಮಲನಗರ್ ತಾಲ್ಲೂಕಿನ ರೈತರಿಗೆ ಶೀಘ್ರದಲ್ಲೇ ಮಾರ್ಗದರ್ಶನ ಶಿಬಿರ, ಪ್ರಾತ್ಯಕ್ಷಿಕೆ ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಶ್ರೀ ಸೋಮೂರೆ ತಿಳಿಸಿದ್ದಾರೆ. ನ್ಯಾಚುರಲ್ ಫಾಮಿರ್‌ಂಗ್ ಮೂಲಕ ರೈತರ ಆದಾಯ ಹೆಚ್ಚಿಸುವುದು, ಉತ್ಪಾದನಾ ವೆಚ್ಚ ಕಡಿಮೆ ಮಾಡುವುದು ಹಾಗೂ ಶಾಶ್ವತ ಕೃಷಿಗೆ ಉತ್ತೇಜನ ನೀಡುವುದು ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ ಎಂದರು.

## ಹಿಂದೂಗಳ ಮೇಲೆ ದಾಳಿ: ಕ್ರಮಕ್ಕೆ ಒತ್ತಾಯ


ಉದಯವಾಹಿನಿ ಚಿತ್ರ

• ಉದಯವಾಹಿನಿ ಬೀದರ್

ರಾಜ್ಯದ ವಿವಿಧ ಭಾಗಗಳಲ್ಲಿ ಹಿಂದೂ ಸಮುದಾಯದ ಮನೆಗಳು, ಶಾಂತಿಯುತ ಮೆರವಣಿಗೆಗಳು ಹಾಗೂ ವ್ಯಕ್ತಿಗಳ ಮೇಲೆ ನಿರಂತರ ದಾಳಿ ನಡೆಯುತ್ತಿರುವ ಘಟನೆಗಳ ಬಗ್ಗೆ ಹಿಂದೂ ರಾಷ್ಟ್ರ ಸಮನ್ವಯ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿದೆ. ಈ ಕುರಿತು ಗೃಹ ಸಚಿವರು, ಪೊಲೀಸ್ ಮಹಾನಿರ್ದೇಶಕರಿಗೆ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಫೆಬ್ರವರಿ 22ರಂದು ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಡೆಯುತ್ತಿದ್ದ ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆದಿದ್ದು, ಕರ್ತವ್ಯದಲ್ಲಿದ್ದ ಎಸ್‌ಪಿ ಸಿದ್ಧಾರ್ಥ್ ಗೋಯಲ್ ಸೇರಿದಂತೆ ಕೆಲವರು ಗಾಯಗೊಂಡಿದ್ದಾರೆ.

ಫೆಬ್ರವರಿ 24ರಂದು ಚಿಕ್ಕಮಗಳೂರು (ತಿಲಕ್ ಪಾರ್ಕ್ ಸಮೀಪ) ಹಾಗೂ ಉತ್ತರ ಕನ್ನಡ ಜಿಲ್ಲೆಯ ಬೈಲೂರು, ಮುರುಡೇಶ್ವರ ಪ್ರದೇಶಗಳಲ್ಲಿ ಹಿಂದೂ ಮನೆಗಳ ಮೇಲೆ ಕಲ್ಲು ತೂರಾಟ ನಡೆಸಿ ಆತಂಕ ಸೃಷ್ಟಿಸಿರುವುದಾಗಿ ಆರೋಪಿಸಲಾಗಿದೆ. ಕೆಲವು ಆರೋಪಿಗಳನ್ನು ಸ್ಥಳೀಯರು ಹಿಡಿದು ಪೊಲೀಸರಿಗೆ ಒಪ್ಪಿಸಿರುವುದಾಗಿ ತಿಳಿಸಲಾಗಿದೆ.

ಇದೇ ದಿನ ಶಿವಮೊಗ್ಗ ಜಿಲ್ಲೆಯ ಊರಗಡೂರಿನಲ್ಲಿ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಯ ಹತ್ಯೆ ನಡೆದಿರುವುದಾಗಿ ಹಾಗೂ ಫೆಬ್ರವರಿ 25ರಂದು ಚಿತ್ರದುರ್ಗದಲ್ಲಿ ಮೊಬೈಲ್ ಅಂಗಡಿ ಮಾಲೀಕ ಹಾಗೂ ಹಿಂದೂ ನಾಯಕ ವಿಕ್ರಮ್ ಚೌದ್ರಿಗೆ ಚಾಕು ಇರಿತ ನಡೆದಿರುವ ಘಟನೆಗಳನ್ನೂ ಸಮಿತಿ ಉಲ್ಲೇಖಿಸಿದೆ. ಈ ಎಲ್ಲಾ ಘಟನೆಗಳ ಬಗ್ಗೆ ವೇಗವಾದ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕು, ಅಪರಾಧಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು, ಪರಾರಿಯಾಗಿರುವ ಆರೋಪಿಗಳನ್ನು ಬಂಧಿಸಲು ವಿಶೇಷ ತಂಡ ರಚಿಸಬೇಕು ಹಾಗೂ ಮೆರವಣಿಗೆಗಳು ಮತ್ತು ಮನೆಗಳಿಗೆ ಸಮರ್ಪಕ ಪೊಲೀಸ್ ಭದ್ರತೆ ಒದಗಿಸಬೇಕು ಎಂದು ಸಮಿತಿ ಆಗ್ರಹಿಸಿದೆ.

### ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳ ಎಪಿಎಂಸಿ ಮಾರುಕಟ್ಟೆಗಳಲ್ಲಿ ಮೂಲಸೌಕರ್ಯ ಸಮಸ್ಯೆ

# ಎಪಿಎಂಸಿ ಸೌಲಭ್ಯಕ್ಕೆ ರೂ. 500 ಕೋಟಿಗೆ ಬೇಡಿಕೆ

• ಉದಯವಾಹಿನಿ ಹುಬ್ಬಳ್ಳಿ

ಧಾರವಾಡ, ಹಾವೇರಿ ಜಿಲ್ಲೆ ಸೇರಿದಂತೆ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿನ ಎಪಿಎಂಸಿ ಮಾರುಕಟ್ಟೆಗಳಲ್ಲಿ ಕುಡಿಯುವ ನೀರು, ಗೋದಾಮು, ರಸ್ತೆ, ಮಳಿಗೆ ಸೇರಿ ವಿವಿಧ ಮೂಲಸೌಕರ್ಯಗಳ ಕೊರತೆಯಿದ್ದು, ಅವುಗಳನ್ನು ನೀಗಿಸುವುದಕ್ಕಾಗಿಯೇ 2026-27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ರೂ.500 ಕೋಟಿ ಅನುದಾನ ಮೀಸಲಿಡಬೇಕು ಎಂದು ಇಲ್ಲಿನ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯು (ಕೆಸಿಸಿಐ) ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಈ ಭಾಗದ ಎಪಿಎಂಸಿ ಮಾರುಕಟ್ಟೆಗಳು ಇಂದಿಗೂ ಅಗತ್ಯ ಸೌಕರ್ಯಗಳ ಕೊರತೆ ಎದುರಿಸುತ್ತಿದ್ದು, ಇದು ರೈತರಿಗೆ ದೊಡ್ಡ ಸಮಸ್ಯೆಯಾಗಿದೆ. ಕೆಲ ಎಪಿಎಂಸಿಗಳಲ್ಲಿ ಉತ್ತಮ ರಸ್ತೆಗಳು ಇದ್ದರೂ, ರೈತ ಭವನ, ಕುಡಿಯುವ ನೀರು, ಶೌಚಾಲಯ ಮತ್ತು ನೆರಳಿನ ವ್ಯವಸ್ಥೆಯಿಲ್ಲದೆ ರೈತರು ಪರದಾಡುತ್ತಿದ್ದಾರೆ. ಇನ್ನೂ ಕೆಲ ಎಪಿಎಂಸಿಗಳಲ್ಲಿ ವ್ಯಾಪಾರ ಮಳಿಗೆಗಳಿಲ್ಲದೇ ರೈತರು ರಸ್ತೆ ಬದಿ, ಶೆಡ್‌ಗಳಲ್ಲಿ ದಲ್ಲಾಳಿಗಳು ಕೇಳಿದ ದರಕ್ಕೆ ಬೆಳೆಗಳನ್ನು ಮಾರಾಟ ಮಾಡುತ್ತಿರುವುದೂ ಇದೆ.

ಹುಬ್ಬಳ್ಳಿಯ ಅಮರಗೋಳದ ಎಪಿಎಂಸಿ ಮಾರುಕಟ್ಟೆಯು ವಿಶಾಲವಾಗಿದೆ. ಇಲ್ಲಿ ಈರುಳ್ಳಿ, ಒಣಮೆಣಸಿನಕಾಯಿ, ಕಾಳುಕಡಿ ವಿಭಾಗ, ಅಕ್ಕಿ, ಹೂವು-ಹಣ್ಣು, ತರಕಾರಿ ಸಗಟು ವ್ಯಾಪಾರ ಹೆಚ್ಚು ನಡೆಯುತ್ತಿದೆ. ತರಕಾರಿ ಸಗಟು ಮಾರುಕಟ್ಟೆ ವಿಭಾಗದಲ್ಲಿ ನಿತ್ಯ ಲಕ್ಷಾಂತರ ರೂಪಾಯಿ ವಹಿವಾಟು ನಡೆಯುತ್ತದೆ.

ಈರುಳ್ಳಿ ಹಾಗೂ ಒಣಮೆಣಸಿನಕಾಯಿ ಋತುವಿನಲ್ಲಿ ಕೋಟಿಗಟ್ಟಲೆ ರೂಪಾಯಿ ವಹಿವಾಟು ನಡೆಯುತ್ತದೆ. ಇಲ್ಲಿ ವಿಶಾಲವಾದ ಉತ್ತಮ ರಸ್ತೆಗಳಿವೆ. ಆದರೆ, ಇಲ್ಲಿಗೆ ಬರುವ ರೈತರ ಸಂಖ್ಯೆಗೆ ಅನುಗುಣವಾಗಿ ರೈತಭವನ, ಶೌಚಾಲಯ ವ್ಯವಸ್ಥೆ, ಕುಡಿಯುವ ನೀರು, ಬೆಳೆಗಳ ರಕ್ಷಣೆಗೆ ಅಗತ್ಯ ಶೀತಲೀಕರಣ ಘಟಕ/ ಗೋದಾಮು ಸೌಲಭ್ಯಗಳಿಲ್ಲ.

ಉತ್ತರ ಕರ್ನಾಟಕದ ಜಿಲ್ಲೆಗಳ ರೈತರು ಸೇರಿದಂತೆ ನೆರೆಯ ರಾಜ್ಯದ ರೈತರೂ ಇಲ್ಲಿಗೆ ಕೃಷಿ ಉತ್ಪನ್ನಗಳ ಮಾರಾಟಕ್ಕೆ ಬರುತ್ತಾರೆ. ರೈತರ ಬೆಳೆಗಳ ರಕ್ಷಣೆಗಾಗಿ ಶೀತಲೀಕರಣ ಘಟಕ, ಗೋದಾಮು ನಿರ್ಮಿಸಬೇಕು, ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಮಾರುಕಟ್ಟೆ ಆವರಣದಲ್ಲಿಯೇ ಪೊಲೀಸ್ ಠಾಣೆ ಆರಂಭಿಸಬೇಕು ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗಾಗಿ ರೈತರು ಮನವಿ ಸಲ್ಲಿಸಿದರೂ ಇಂದಿಗೂ ಈಡೇರಿಲ್ಲ. ರೈತರಿಂದ ಲಕ್ಷಾಂತರ ರೂಪಾಯಿ ತೆರಿಗೆ ಸಂಗ್ರಹಿಸಲಾಗುತ್ತಿದೆ. ಆದರೆ, ಆ ಮಟ್ಟಿಗಿನ ಸೌಕರ್ಯ ಮಾತ್ರ ಇಲ್ಲ.


ಉದಯವಾಹಿನಿ ಚಿತ್ರ

**ಸೌಕರ್ಯ ಉನ್ನತೀಕರಣಕ್ಕೆ ಪ್ರಸ್ತಾವ**

'ಉತ್ತರ ಕರ್ನಾಟಕ ಕಲ್ಯಾಣ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿನ ಎಪಿಎಂಸಿ ಮಾರುಕಟ್ಟೆಗಳಲ್ಲಿ ಸೌಕರ್ಯಗಳ ಉನ್ನತೀಕರಣವಾಗಬೇಕಿದೆ' ಎಂದು ಕೆಸಿಸಿಐ ಅಧ್ಯಕ್ಷ ಜಿ.ಕೆ. ಆದಪ್ಪಗೌಡರ ತಿಳಿಸಿದರು. 'ಅಗತ್ಯವಿರುವ ಎಲ್ಲಾ ಎಪಿಎಂಸಿಗಳಲ್ಲಿ ಇ- ಟೆಂಡರ್ ವ್ಯವಸ್ಥೆ ಕಲ್ಪಿಸಿಕೊಡಬೇಕು. ವೈ-ಫೈ ಸೌಲಭ್ಯ ಅಳವಡಿಸಬೇಕು. ಸಿಸಿಟಿವಿ ಕ್ಯಾಮೆರಾ ಅಳವಡಿಸಬೇಕು. ಇ- ಸ್ವತ್ತು ಸರಳೀಕರಣ ಮಾಡಬೇಕು. ಸೂಪರ್‌ವೈಜ್ ಚಾರ್ಜ್ ರದ್ದು ಮಾಡಬೇಕು. ವರ್ತಕರಿಗೆ ಎಪಿಎಂಸಿಯಿಂದ ಹಂಚಿಕೆಯಾದ ಆಸ್ತಿಗಳ ಮೇಲೆ ತೆರಿಗೆ ವಿನಾಯಿತಿ ನೀಡಬೇಕು. ಶಿತಲೀಕರಣ ಘಟಕ ಗೋದಾಮುಗಳನ್ನು ನಿರ್ಮಾಣ ಮಾಡಬೇಕು. ಕುಡಿಯುವ ನೀರು ರಸ್ತೆ ಒಳಚರಂಡಿ ವ್ಯವಸ್ಥೆ ಇನ್ನಿತರ ಸೌಕರ್ಯ ಕಲ್ಪಿಸಲು ಈ ಬಾರಿಯ ಬಜೆಟ್‌ನಲ್ಲಿ ಅನುದಾನ ಮೀಸಲಿಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪ್ರಸ್ತಾವ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

**ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿನ ಎಪಿಎಂಸಿ ಮಾರುಕಟ್ಟೆಗಳಲ್ಲಿ ಸೌಕರ್ಯ ಕಲ್ಪಿಸಲು ಈ ಬಾರಿಯ ಬಜೆಟ್‌ನಲ್ಲಿ ರೂ.500 ಕೋಟಿ ಅನುದಾನ ಮೀಸಲಿಡಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ**
**-ಜಿ.ಕೆ.ಆದಪ್ಪಗೌಡರ, ಅಧ್ಯಕ್ಷ ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ**

**ಅಮರಗೋಳದ ಎಪಿಎಂಸಿ ಮಾರುಕಟ್ಟೆ ವಿಶಾಲವಾಗಿದ್ದು ಸುತ್ತಮುತ್ತಲ ಜಿಲ್ಲೆಗಳಿಂದ ಹೆಚ್ಚು ಸಂಖ್ಯೆಯಲ್ಲಿ ರೈತರು ಬರುತ್ತಾರೆ. ಇಲ್ಲಿ ಶೀತಲೀಕರಣ ಘಟಕ ಸೇರಿ ಮೂಲಸೌಕರ್ಯಗಳ ಉನ್ನತೀಕರಣವಾಗಬೇಕಿದೆ**
**-ಕೆ.ಎಚ್. ಗುರುಪ್ರಸಾದ್, ಎಪಿಎಂಸಿ ಕಾರ್ಯದರ್ಶಿ**

## ಮಿನಿ ನ್ಯೂಸ್

### ಮಹಿಳೆಯರು ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಿ: ವಿಜಯಶ್ರೀ

• ಉದಯವಾಹಿನಿ ವಿಜಯಪುರ

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಸಾಧನೆಗಳಿಗೆ ಸಾಕಷ್ಟು ಅವಕಾಶಗಳಿದ್ದು ಮಹಿಳೆಯರು ಇದರಲ್ಲಿ ತೊಡಗಿಸಿಕೊಳ್ಳಬೇಕು ಎಂದು ಬೆಂಗಳೂರಿನ ಇಸ್ರೊದ ಯು. ಆರ್. ರಾವ್ ಸ್ಯಾಟಲೈಟ್ ಕೇಂದ್ರದ ವಿಜ್ಞಾನಿ ವಿಜಯಶ್ರೀ ಎಂ.ಕೆ ಹೇಳಿದ್ದಾರೆ. ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆಯ ಅಂಗವಾಗಿ ಅಪ್ಲೈಡ್ ಸೈನ್ಸ್ ಮತ್ತು ಟೆಕ್ನಾಲಜಿ ಶಾಲೆ, ಅಲೈಡ್ ಹೆಲ್ತ್ ಸೈನ್ಸ್ ಶಾಲೆ, ಸಂಶೋಧನ ಮತ್ತು ಅಭಿವೃದ್ಧಿ ಘಟಕದ ಸಹಯೋಗದಲ್ಲಿ ಆಯೋಜಿಸಲಾದ ವಿಕಸಿತ ಭಾರತದ ವಿಜ್ಞಾನದಲ್ಲಿ ಮಹಿಳೆಯರ ಪಾತ್ರ ಕುರಿತು ಒಂದು ದಿನದ ವಿಶೇಷ ಕಾರ್ಯಕ್ರಮದಲ್ಲಿ ಅವರು ಆನಲೈನ್ ಮೂಲಕ ಪಾಲ್ಗೊಂಡು ಮಾತನಾಡಿದರು. ಬೆಳಗಾವಿಯ ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯಯದ ಬೆಳಗಾವಿಯ ವೈಜ್ಞಾನಿಕ ಅಧಿಕಾರಿ ಡಾ. ಜಿ. ಸಿ. ಕಡಕೋಳ ಮಾತನಾಡಿ, ನ್ಯಾಯ ವಿಜ್ಞಾನ ಕ್ಷೇತ್ರದಲ್ಲಿ ಅಪರಾಧ ತನಿಖೆಯ ಸಂದರ್ಭದಲ್ಲಿ ಎದುರಾಗುವ ಸವಾಲುಗಳು ಹಾಗೂ ವೈಜ್ಞಾನಿಕ ಮನೋಭಾವದ ಮಹತ್ವವನ್ನು ವಿವರಿಸಿದರು

### ಶಿಥಿಲಕಟ್ಟಡ ದುರಸ್ತಿಗೆ ಆಗ್ರಹ

• ಉದಯವಾಹಿನಿ ಲಕ್ಷ್ಮೇಶ್ವರ

ಪುರಸಭೆಯಿಂದ ಸುಮಾರು 25 ವರ್ಷಗಳ ಹಿಂದೆ ಪುರಸಭೆಯ ಪಕ್ಕದಲ್ಲಿಯೇ ನಿರ್ಮಿಸಿದ್ದ ವಾಣಿಜ್ಯ ಸಂಕಿರಣದ ಮೊದಲ ಮಹಡಿ ಪುರಸಭೆ ಕಾಂಪೌಂಡಿಗೆ ಹೊಂದಿಕೊಂಡಿರುವ ಒಂದು ಭಾಗ ಸಂಪೂರ್ಣ ಶಿಥಿಲಗೊಂಡು ಕಿಟಕಿ ಬಾಗಿಲುಗಳು ನೇತಾಡುತ್ತಿದ್ದು ಪೈರಿ ಸಹ ಹಾಳಾಗಿದೆ. ಪುರಸಭೆಯ ಕಂಪೌಂಡಿಗೆ ಹೊಂದಿಕೊಂಡಿರುವ ಈ ಕಟ್ಟಡ ಸಂಪೂರ್ಣ ಶಿಥಿಲವಾಗಿದ್ದು ಕೆಳಭಾಗದಲ್ಲಿ ಎರಡು ಅಂಗಡಿಗಳು ಕಾರ್ಯನಿರ್ವಹಿಸುತ್ತಿವೆ.

ಸುಮಾರು 25 ವರ್ಷಗಳ ಹಿಂದೆ ನಿರ್ಮಿಸಿದ ಈ ಕಟ್ಟಡದಲ್ಲಿ ಮೊದಲ ನಾಡಕಚೇರಿ ಆರಂಭಗೊಂಡಿತ್ತು ಅದು ಸ್ಥಳಾಂತರವಾದ ನಂತರ ಪುರಸಭೆಯವರು ಮೇಲಂತಸ್ತಿನ ಕಟ್ಟಡವನ್ನು ಸಂಪೂರ್ಣ ನಿರ್ಲಕ್ಷಿಸಿ ಅದನ್ನು ಉಗ್ರಾಣವನ್ನಾಗಿ ಮಾರ್ಪಡಿಸಿಕೊಂಡಿದ್ದು ಅದರಲ್ಲಿ ಈಗ ನಿರುಪಯುಕ್ತ ವಸ್ತುಗಳನ್ನು ತುಂಬಿದ್ದಾರೆ. ಇದುವರೆಗೂ ಆಡಳಿತದಲ್ಲಿದ್ದ ಚುನಾಯಿತ ಪ್ರತಿನಿಧಿಗಳು ಸಹ ನಿರ್ಲಕ್ಷಿಸಿದ್ದು ಪುರಸಭೆಯ ಅಧಿಕಾರಿಗಳು ಗಂಗಾರಾಮ್ ಕಟ್ಟಡದ ದುರಂತ ಆಗುವ ಮೊದಲೇ ಮುನ್ನೆಚ್ಚರಿಕೆ ವಹಿಸಬೇಕು ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

### ಮಟ್ಕಾ ಅಡ್ಡೆ ಮೇಲೆ ಲಮಾಣಿ ದಾಳಿ

• ಉದಯವಾಹಿನಿ ಗುತ್ತಲ

ಪಟ್ಟಣದ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯ ಸಮೀಪದಲ್ಲಿಯೇ ಕೊಠಡಿಯೊಂದರಲ್ಲಿ ಮಟ್ಕಾ ಬರೆಯುತ್ತಿದ್ದಾರೆ. ಇದನ್ನು ಯಾರೊಬ್ಬರೂ ತಡೆಯುತ್ತಿಲ್ಲ ಎಂದು ಆರೋಪಿಸಿ ಸ್ಥಳೀಯ ಮಹಿಳೆಯರು ಶಾಸಕ ರುದ್ರಪ್ಪ ಲಮಾಣಿ ಅವರಿಗೆ ಮುತ್ತಿಗೆ ಹಾಕಿದರು. ಇದರಿಂದ ಎಚ್ಚೆತ್ತ ರುದ್ರಪ್ಪ ಲಮಾಣಿ, ಕೊಠಡಿ ಮೇಲೆ ದಾಳಿ ಮಾಡಿ ಮಟ್ಕಾ ಬರೆಯುತ್ತಿದ್ದ ವ್ಯಕ್ತಿಯೊಬ್ಬನನ್ನು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಪಟ್ಟಣದಲ್ಲಿರುವ ನಾಡ ಕಚೇರಿ ಉದ್ಘಾಟನೆ ಮತ್ತು ಪಟ್ಟಣ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲು ರುದ್ರಪ್ಪ ಲಮಾಣಿ ಮತ್ತು ತಹಶೀಲ್ದಾರ್ ಶರಣಮ್ಮ ಬಂದಿದ್ದರು. ಅವರನ್ನು ಅಡ್ಡಗಟ್ಟಿದ್ದ ಮಹಿಳೆಯರು, ಮೀನು, ಮಾಂಸದಂಗಡಿಯವರು ತ್ಯಾಜ್ಯವನ್ನು ಎಲ್ಲೆಂದರಲ್ಲಿ ಎಸೆಯುತ್ತಿದ್ದಾರೆ. ದುರ್ವಾಸನೆ ಬರುತ್ತಿದೆ. ಅದನ್ನು ತಿನ್ನಲು ಬರುವ ನಾಯಿಗಳು ಮಕ್ಕಳ ಮೇಲೆ ದಾಳಿ ಮಾಡುತ್ತಿವೆ. ಇದರ ನಡುವೆಯೇ ಮಟ್ಕಾ ಹಾವಳಿ ಹೆಚ್ಚಾಗಿದೆ ಎಂದು ಅಳಲು ತೋಡಿಕೊಂಡಿದ್ದರು.

## ಡಯಾಲಿಸಿಸ್ ಕೇಂದ್ರ ಆರಂಭ

• ಉದಯವಾಹಿನಿ ಇಳಕಲ್

ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಸೇವೆಯ ಘಟಕವನ್ನು ಶಾಸಕ ವಿಜಯಾನಂದ ಕಾಶಪ್ಪನವರ ಉದ್ಘಾಟಿಸಿದರು.

ಅವರು ಈ ಸಂದರ್ಭದಲ್ಲಿ ಮಾತನಾಡಿ, '8 ತಿಂಗಳ ಹಿಂದೆ ಹುನಗುಂದ ಸಾರ್ವಜನಿಕ ಆಸ್ಪತ್ರೆಯಲ್ಲಿ ಡಯಾಲಿಸಿಸ್ ಕೇಂದ್ರ ಪ್ರಾರಂಭವಾಗಿದೆ. ಆಗಲೇ ಇಳಕಲ್ ನಗರದಲ್ಲೂ ಡಯಾಲಿಸಿಸ್ ಸೇವೆಯ ಅಗತ್ಯವನ್ನು ಮನವರಿಕೆ ಮಾಡಿದ್ದರು. ಆರೋಗ್ಯ ಸಚಿವರೊಂದಿಗೆ ಚರ್ಚಿಸಿ, ಇಳಕಲ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಈಗ ಪ್ರಾರಂಭವಾಗಿದೆ. ಉಚಿತವಾಗಿರುವ ಈ ಸೇವೆಯು ಬಡ ರೋಗಿಗಳ ಪಾಲಿಗೆ ಸಂಜೀವಿನಿಯಾಗಿದೆ ಎಂದರು.

ಡಯಾಲಿಸಿಸ್ ಕೇಂದ್ರದಲ್ಲಿ ಪ್ರತಿದಿನ ಬೆಳಿಗ್ಗೆ 7.30 ರಿಂದ 11.30, ಮಧ್ಯಾಹ್ನ 12.30 ರಿಂದ 04.30ಕ್ಕೆ ಹಾಗೂ ಸಂಜೆ 5.30 ರಿಂದ 9.30ರವರೆಗೆ


ಉದಯವಾಹಿನಿ ಚಿತ್ರ

ಒಟ್ಟು ಮೂರು ಶೀಫ್ಟ್‌ಗಳಲ್ಲಿ ಸೇವೆ ಇರಲಿದೆ. ಡಯಾಲಿಸಿಸ್ ಉಚಿತವಾಗಿದೆ. ಸಂಬಂಧಿಸಿದ ಕಿಟ್ ಅನ್ನು ಕೂಡ ನೀಡಲಾಗುವುದು' ಎಂದು ಆಸ್ಪತ್ರೆಯ ಸಿಬ್ಬಂದಿ ತಿಳಿಸಿದರು. ಸಾರ್ವಜನಿಕ ಆಸ್ಪತ್ರೆಯ ಪರವಾಗಿ ವೈದ್ಯಾಧಿಕಾರಿ ಹಾಗೂ ಸಿಬ್ಬಂದಿ ಶಾಸಕ ವಿಜಯಾನಂದ ಕಾಶಪ್ಪನವರ ಅವರನ್ನು ಸನ್ಮಾನಿಸಿದರು. ಮುಖಂಡರಾದ ವೆಂಕಟೇಶ ಸಾಕಾ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ರಾಘವೇಂದ್ರ ಚಿಂಚಮಿ, ಮಹಾಂತೇಶ ಹನಮನಾಳ ಇದ್ದರು.

## ಪ್ರೀತಿ ಸೌಹಾರ್ದತೆಯ ಹಬ್ಬವೇ ಹೋಳಿ ಹಬ್ಬ : ಶರಣಪ್ಪಾ ಪಂಚಾಕ್ಷರಿ

• ಉದಯವಾಹಿನಿ ಔರಾದ

ಪಟ್ಟಣದ ಟೀಚರ್ಸ್ ಕಾಲೋನಿಯಲ್ಲಿ ಸೋಮವಾರ ಸಂಜೆ ಓಣಿಯ ಜನ ದಹನವನ್ನು ಧಗಿಸಿ ಎಲ್ಲರೂ ಒಂದುಕಡೆ ಸೇರಿ ಬಬ್ಬಿ ಹೊಡೆದು ಹೋಳಿ ಹಬ್ಬದ ಸೌಹಾರ್ದತೆ ಹಂಚಿಕೊಂಡರು. ಹೋಳಿ ಹಬ್ಬವು ಕೆಟ್ಟದ್ದರ ಮೇಲೆ ಒಳಿತಿನ ವಿಜಯ, ವಸಂತಕಾಲದ ಆಗಮನ, ಮತ್ತು ಪ್ರೀತಿ-ಏಕತೆಯ ಸಂಕೇತವಾಗಿ ಆಚರಿಸಲಾಗುವ ಪ್ರಮುಖ ಭಾರತೀಯ ಹಬ್ಬವಾಗಿದೆ. ಫಾಲ್ಗುಣ ಮಾಸದ ಹುಣ್ಣಿಮೆಯಂದು ಆಚರಿಸಲಾಗುವ ಈ ಹಬ್ಬವು, ಭಕ್ತ ಪ್ರಹ್ಲಾದನ ರಕ್ಷಣೆ ಮತ್ತು ಹೋಳಿಕಾ ದಹನದ ಪೌರಾಣಿಕ ಹಿನ್ನೆಲೆಯನ್ನು ಹೊಂದಿದೆ, ಇದು ಸಮಾಜದಲ್ಲಿ ಸೌಹಾರ್ದತೆ ಮತ್ತು ಸಂತೋಷವನ್ನು ಹರಡುತ್ತದೆ ಎಂದು ಒಣಿಯ ಹಿರಿಯರಾದ ಶರಣಪ್ಪಾ ಪಂಚಾಕ್ಷರಿ ಹೇಳಿದರು. ಪತ್ರಕರ್ತ ಅಂಬಾದಾಸ ನಳಗೆ ಚಳಿಗಾಲದ ಅಂತ್ಯ ಮತ್ತು ವಸಂತಕಾಲದ ಆರಂಭವನ್ನು ಈ ಹಬ್ಬ ಸೂಚಿಸುತ್ತದೆ.


ಉದಯವಾಹಿನಿ ಚಿತ್ರ

ಇದು ಪ್ರಕೃತಿಯಲ್ಲಿನ ಬದಲಾವಣೆ ಮತ್ತು ನವ ಜೀವನದ ಸಂಕೇತವಾಗಿದೆ. ಜಾತಿ, ಧರ್ಮ, ಶ್ರೀಮಂತ-ಬಡವ ಎಂಬ ಭೇದಭಾವವಿಲ್ಲದೆ ಎಲ್ಲರೂ ಒಂದಾಗಿ ಬಣ್ಣಗಳನ್ನು ಎರಚಿಕೊಳ್ಳುವ ಮೂಲಕ ಪ್ರೀತಿ ಮತ್ತು ಸಹೋದರತ್ವವನ್ನು ಬೆಳೆಸುವುದು ಎಂದರು. ಈ ಸಂದರ್ಭದಲ್ಲಿ ಹಿರಿಯರಾದ ಶರಣಪ್ಪಾ ಪಂಚಾಕ್ಷರಿ, ಹಾವಯ್ಯ ಸ್ವಾಮಿ,ಸಂಜು ಮಡಿವಾಳ, ಸಚಿನ ಪಂಚಾಕ್ಷರಿ, ಅಂಬಾದಾಸ ನಳಗೆ, ಶರಣಬಸವ ಸಾವಳೆ, ಶರಣಯ್ಯ ಸ್ವಾಮಿ ಬೇಲೂರ, ಮಹೇಶ ದ್ಯಾಡೆ , ಕೇದಾರ ಪಂಚಾಕ್ಷರಿ, ಶುಭಂ ದ್ಯಾಡೆ, ಹಾಗೂ ಒಣಿಯ ತಾಯಂದಿರು ಮತ್ತು ಕಸ್ತೂರಬಾ ಶಾಲೆಯ ಮಕ್ಕಳು ಉಪಸ್ಥಿತರಿದ್ದರು.

**ಜೀವನಕ್ಕೆ ಉತ್ಸಾಹವನ್ನು ತುಂಬುವ ವರ್ಣಮಯ ಹಬ್ಬ**

**ಹೋಳಿ ಹಬ್ಬವು ಹಳೆಯ ಕಹಿ ನೆನಪುಗಳು, ದ್ವೇಷಗಳನ್ನು ಮರೆತು, ಹೊಸ ಸಂಬಂಧಗಳಿಗೆ ಬಣ್ಣದೊಂದಿಗೆ ನಾಂದಿ ಹಾಡುವ ಹಬ್ಬವಾಗಿದೆ. ಹೋಳಿಯು ಸ್ನೇಹ ಮತ್ತು ಪ್ರೀತಿಯನ್ನು ಹಂಚುವ, ಜೀವನಕ್ಕೆ ಹೊಸ ಉತ್ಸಾಹವನ್ನು ತುಂಬುವ ವರ್ಣಮಯ ಹಬ್ಬವಾಗಿದೆ.**

## ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಎಚ್ಚರಿಕೆ ವಹಿಸಿ: ಬಾಲಚಂದ್ರ ಜಾರಕಿಹೊಳಿ

• ಉದಯವಾಹಿನಿ ಗೋಕಾಕ

ಬೇಸಿಗೆಯಲ್ಲಿ ಸಾರ್ವಜನಿಕರು ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಈಗಿನಿಂದಲೇ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ನಿರ್ಲಕ್ಷ್ಯ ಮಾಡುವಂತಿಲ್ಲ' ಎಂದು ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ತಾಕೀತು ಮಾಡಿದರು. ತಾಲ್ಲೂಕಿನ ದುರದುಂಡಿ ಗ್ರಾಮ ಪಂಚಾಯಿತಿ ಸಭಾ ಭವನದಲ್ಲಿ ಸೋಮವಾರ ನಡೆದ ಮೂಡಲಗಿ ಮತ್ತು ಗೋಕಾಕ ತಾಲ್ಲೂಕು ಮಟ್ಟದ ಅಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಭವನೀಯ ಕುಡಿಯುವ ನೀರಿನ ಸಮಸ್ಯೆಗಳು ಎದುರಾಗದಂತೆ ಅಗತ್ಯವಿರುವ ಎಲ್ಲಾ ಕ್ರಮಗಳನ್ನು ಕೈಕೊಳ್ಳಿ' ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಇದೀಗ ಆರಂಭವಾಗಿರುವ ಬೇಸಿಗೆ ಮೇ ತಿಂಗಳ ಅಂತ್ಯದವರೆಗೆ ಏರುತ್ತಲೇ ಇರುತ್ತದೆ. ಈ ಮೂರು ತಿಂಗಳ ಅವಧಿಯಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆಗಳು ತಲೆದೋರದಂತೆ ಪ್ರತಿ ಗ್ರಾಮಗಳಲ್ಲಿ ಅಧಿಕಾರಿಗಳು ನೀಗಾವಹಿಸಬೇಕು. ಎಲ್ಲಿ ಯಾವ ಸಮಸ್ಯೆಗಳು ಉದ್ಭವವಾಗಿವೆ, ಅವುಗಳ ಪರಿಹಾರಕ್ಕೆ ಅಗತ್ಯವಿರುವ ಕ್ರಮಗಳು ಯಾವುವು ಎಂಬುದರ ಕುರಿತು



ಉದಯವಾಹಿನಿ ಚಿತ್ರ

ಚಿಂತಿಸಬೇಕು. ಕುಡಿಯುವ ನೀರು ಪೂರೈಸಲು ಮೇಲಾಧಿಕಾರಿಗಳ ಜತೆ ಸಮನ್ವಯ ಸಾಧಿಸಬೇಕು. ಕೆಲವೆಡೆ ಪ್ರತಿ ವರ್ಷ ಕುಡಿಯುವ ನೀರಿನ ಹಾಹಾಕಾರ ಉಂಟಾಗುತ್ತದೆ. ಅಂಥ ಊರುಗಳನ್ನು ಮೊದಲೇ ಗುರುತಿಸಬೇಕು' ಎಂದರು.

ಎಲ್ಲೆಲ್ಲಿ ಸಮಸ್ಯೆಗಳು ಆವರಿಸಬಹುದು ಎಂಬುದನ್ನು ಅಧಿಕಾರಿಗಳು ಪಟ್ಟಿ ತಯಾರಿಸಬೇಕು. ಜನರಿಗೆ ಅಗತ್ಯ ಬಿದ್ದರೆ ಟ್ಯಾಂಕರ್ ಮೂಲಕ ನೀರು ಪೂರೈಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು. ಬೋರ್‌ವೆಲ್‌ಗಳನ್ನು ದುರಸ್ತಿ ಮಾಡಿಸಿ ಜನರಿಗೆ ಅನುಕೂಲ ಕಲ್ಪಿಸಿಕೊಡುವಂತೆ ಅವರು ಸೂಚಿಸಿದರು. ಮೂಡಲಗಿ ತಹಶೀಲ್ದಾರ ಶ್ರೀಶೈಲ ಗುಡುಮೆ, ಗೋಕಾಕ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಪರಶುರಾಮ ರಸ್ತೆ, ಮೂಡಲಗಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ನೇರ್ಲೇಕರ, ಪುರಸಭೆ, ಪಟ್ಟಣ ಪಂಚಾಯತಿಗಳ ಮುಖ್ಯಾಧಿಕಾರಿಗಳು, ಮೂಡಲಗಿ ಹಾಗೂ ಗೋಕಾಕ ತಾಲ್ಲೂಕುಗಳ ಪಿಡಿಒಗಳು, ಗ್ರಾಮ ಆಡಳಿತ ಅಧಿಕಾರಿಗಳು, ಇಂಜಿನಿಯರ್‌ಗಳೂ ಇದ್ದರು.

**ಅಕ್ರಮ ತಡೆಯಿರಿ**

**'ಮದ್ಯ ಮಾರಾಟ ಅಕ್ರಮವಾಗಿ ನಡೆಯುತ್ತಿರುವ ವರದಿಗಳು ಬರುತ್ತಿವೆ. ಪೊಲೀಸ್ ಹಾಗೂ ಅಬಕಾರಿ ಅಧಿಕಾರಿಗಳು ಇದಕ್ಕೆ ತಡೆ ಹಾಕಬೇಕು. ಪರವಾನಗಿ ಪಡೆದವರು ಮಾತ್ರ ಮದ್ಯ ಮಾರಾಟ ಮಾಡಬೇಕು. ಹಳ್ಳಿಗಳಲ್ಲಿ ಅಕ್ರಮ ಮದ್ಯ ಮಾರಾಟದಿಂದ ಅನೇಕ ಸಮಸ್ಯೆಗಳು ಉದ್ಭವಿಸುತ್ತಿವೆ. ಕುಡಿತದಿಂದ ಅಪಘಾತಗಳು ಸಂಭವಿಸಬಹುದು. ಇದಕ್ಕೆಲ್ಲ ಅಧಿಕಾರಿಗಳು ಸೂಕ್ತ ಕ್ರಮಗಳನ್ನು ಕೈಕೊಳ್ಳಬೇಕು' ಎಂದು ಶಾಸಕ ಸೂಚಿಸಿದರು.**

## ಏತ ನೀರಾವರಿ ಯೋಜನೆಗೆ ಚಾಲನೆ ನೀಡಲು ಹೋರಾಟ

• ಉದಯವಾಹಿನಿ ಜೇವರ್ಗಿ

ಮಲ್ಲಾಬಾದ್ ಏತ ನೀರಾವರಿ ಯೋಜನೆಗೆ ತಕ್ಷಣ ಚಾಲನೆ ನೀಡಬೇಕು ಹಾಗೂ ಸರ್ಕಾರಿ ಶಾಲೆಗಳ ಮುಚ್ಚುವಿಕೆ ಕ್ರಮವನ್ನು ಹಿಂಪಡೆಯಬೇಕು ಎಂದು ರೈತ ಮುಖಂಡರು ಒತ್ತಾಯಿಸಿ, ಹೋರಾಟವನ್ನು ತೀವ್ರಗೊಳಿಸಲು ತೀರ್ಮಾನಿಸಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಮಹತ್ವದ ಸಭೆಯಲ್ಲಿ ಸರ್ಕಾರದ ಧೋರಣೆ ಕುರಿತು ತೀವ್ರ ಅಸಮಾಧಾನ ವ್ಯಕ್ತವಾಯಿತು. ಸಭೆಯಲ್ಲಿ ಮಾತನಾಡಿದ ಮಹೇಶ್ ಕುಮಾರ್ ರಾಥೋಡ್ ಅವರು, ಮಲ್ಲಾಬಾದ್ ಏತ ನೀರಾವರಿ ಯೋಜನೆ ರೈತರ ಜೀವನಾಡಿ. ಹಲವು ವರ್ಷಗಳಿಂದ ಬಾಕಿ ಉಳಿದಿರುವ ಈ ಯೋಜನೆಯನ್ನು ತಕ್ಷಣ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಬಾಬು ಪಾಟೀಲ್ ಮುತ್ತಕೋಡ ಅವರು, ಸರ್ಕಾರಿ ಶಾಲೆಗಳ ಮುಚ್ಚುವಿಕೆ ಗ್ರಾಮೀಣ ಬಡ ಮಕ್ಕಳ ಭವಿಷ್ಯಕ್ಕೆ ದೊಡ್ಡ ಹೊಡೆತ. ಶಾಲೆಗಳನ್ನು ಉಳಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಎಚ್ಚರಿಸಿದರು.

ಇಬ್ರಾಹಿಂ ಪಟೇಲ್ ಯಾಳವಾರ್ ಶಾಂತಿಪೂರ್ಣ ಹೋರಾಟದ ಮೂಲಕ ಸರ್ಕಾರದ ಗಮನ ಸೆಳೆಯಲು ಕರೆ ನೀಡಿದರು. ಮೈನುದ್ದಿನ್ ಇನಾಮ್ದಾರ್ (ವಕೀಲರು) ಅಗತ್ಯವಿದ್ದರೆ ಕಾನೂನು ಹೋರಾಟಕ್ಕೂ


ಉದಯವಾಹಿನಿ ಚಿತ್ರ

ಮುಂದಾಗುವುದಾಗಿ ತಿಳಿಸಿದರು.

ಸರ್ಕಾರ ತಕ್ಷಣ ಸ್ಪಂದಿಸದಿದ್ದರೆ ಹಂತ ಹಂತವಾಗಿ ಪ್ರತಿಭಟನೆ ನಡೆಸುವ ಕುರಿತು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು. ಮೊದಲ ಹಂತದಲ್ಲಿ ಮನವಿ ಸಲ್ಲಿಕೆ, ನಂತರ ತಾಲ್ಲೂಕು ಮಟ್ಟದ ಧರಣಿ ಹಾಗೂ ಅಗತ್ಯವಿದ್ದರೆ ಭಾರಿ ಪ್ರತಿಭಟನೆ ನಡೆಸಲು ರೂಪರೇಖೆ ಸಿದ್ಧಪಡಿಸಲಾಗಿದೆ. ಒಟ್ಟಾರೆ, ಜೇವರ್ಗಿಯಲ್ಲಿ ಮಲ್ಲಾಬಾದ್ ಏತ ನೀರಾವರಿ ಯೋಜನೆ ಮತ್ತು ಸರ್ಕಾರಿ ಶಾಲೆಗಳ ಉಳಿವಿನ ವಿಚಾರ ಜನಾಂದೋಲನದ ರೂಪ ಪಡೆಯುತ್ತಿರುವುದು ಗಮನಾರ್ಹವಾಗಿದೆ. ಸರ್ಕಾರ ಈ ಬೇಡಿಕೆಗಳಿಗೆ ಸ್ಪಂದಿಸುತ್ತದೆಯೇ ಎಂಬುದು ಕಾದು ನೋಡಬೇಕಾಗಿದೆ.

# ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಗೆ ಸಮನ್ವಯದಿಂದ ಕಾರ್ಯ ನಿರ್ವಹಿಸಿ

## ಪರೀಕ್ಷೆ ಎಂಬುದು ಜೀವನದ ಅಂತಿಮ ಗುರಿಯಲ್ಲ; ಅದು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಒಂದು ಹಂತ ಮಾತ್ರ

• ಉದಯವಾಹಿನಿ ಔರಾದ್

ಎಸ್ಸೆಸ್ಸೆಲ್ಸಿ ಫಲಿತಾಂಶ ಸುಧಾರಣೆಗೆ ಶಿಕ್ಷಕರು ಮತ್ತು ಪಾಲಕರು ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ತಹಸೀಲ್ದಾರ್ ಮಹೇಶ ಪಾಟೀಲ್ ಹೇಳಿದರು.

ಪಟ್ಟಣದ ಆದರ್ಶ ವಿದ್ಯಾಲಯದಲ್ಲಿ ನಡೆದ ತಾಲ್ಲೂಕಿನ ಪ್ರೌಢ ಶಾಲಾ ಮುಖ್ಯಗುರುಗಳ ಸಭೆಯಲ್ಲಿ ಮಾತನಾಡಿದ ಅವರು, ಎಸ್ಸೆಸ್ಸೆಲ್ಸಿ ಪರೀಕ್ಷೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳಲ್ಲಿ ಕಾಣಿಸಿಕೊಳ್ಳುವ ಆತಂಕ ಮತ್ತು ಭಯವನ್ನು ದೂರ ಮಾಡುವುದು ಅತ್ಯಂತ ಮುಖ್ಯವಾಗಿದೆ ಎಂದು ತಿಳಿಸಿದರು. ಪರೀಕ್ಷೆ ಎಂಬುದು ಜೀವನದ ಅಂತಿಮ ಗುರಿಯಲ್ಲ, ಅದು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಒಂದು ಹಂತ ಮಾತ್ರ ಎಂಬ ಮನೋಭಾವವನ್ನು ಮಕ್ಕಳಲ್ಲಿ ಬೆಳೆಸಬೇಕು ಎಂದು ಹೇಳಿದರು.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದು, ಅವರ ಶಕ್ತಿಸಾಮರ್ಥ್ಯಗಳನ್ನು ಗುರುತಿಸಿ ಉತ್ತೇಜಿಸುವುದು ಶಿಕ್ಷಕರ ಮುಖ್ಯ ಕರ್ತವ್ಯವಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ವಿಭಿನ್ನ ಸಾಮರ್ಥ್ಯ ಹೊಂದಿರುತ್ತಾನೆ. ಶೇ. 40ರೊಳಗಿನ ಅಂಕಗಳನ್ನು ಪಡೆಯುವ ಅಥವಾ ಅನುತ್ತೀರ್ಣರಾಗುವ ಸಾಧ್ಯತೆ ಇರುವ ವಿದ್ಯಾರ್ಥಿಗಳನ್ನು ಗುರುತಿಸಿ, ಅವರಿಗೆ ವಿಶೇಷ ತರಗತಿಗಳು, ಮರುಪಾಠ ಮತ್ತು ವೈಯಕ್ತಿಕ ಮಾರ್ಗದರ್ಶನ ನೀಡಬೇಕು. ವಾರದ ಅವಧಿಯಲ್ಲಿ ಪ್ರಗತಿ ಪರಿಶೀಲನೆ ನಡೆಸಿ, ದುರ್ಬಲ ವಿಷಯಗಳ ಮೇಲೆ ಹೆಚ್ಚು ಗಮನ ಹರಿಸಬೇಕು ಎಂದು ಸೂಚಿಸಿದರು.

ತಾಪಂ ಇಒ ಕಿರಣ ಪಾಟೀಲ್ ಮಾತನಾಡಿ, ಜಿಪಂ ಸಿಇಒ ಅವರ ಮಾರ್ಗದರ್ಶನದಲ್ಲಿ ಫಲಿತಾಂಶ ಸುಧಾರಣೆಗೆ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಮಾದರಿ ಪರೀಕ್ಷೆಗಳ ಆಯೋಜನೆ, ವಿಷಯವಾರು ಕಾರ್ಯಾಗಾರಗಳು ಮತ್ತು ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ನಡೆಯುತ್ತಿವೆ. ಈ ವರ್ಷ ಉತ್ತಮ ಸಾಧನೆ ಮಾಡುವ ಸಂಕಲ್ಪ ತೆಗೆದುಕೊಳ್ಳಬೇಕು ಎಂದು ಹೇಳಿದರು.

ಪಾಲಕರ ಪಾತ್ರವೂ ಅತ್ಯಂತ ಮಹತ್ವದ್ದು. ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗುವವರೆಗೆ ಮನೆಯಲ್ಲಿ ಟಿವಿ, ಮೊಬೈಲ್ ಮತ್ತು ಇತರೆ ಮನರಂಜನಾ ಸಾಧನಗಳ ಬಳಕೆಯನ್ನು ನಿಯಂತ್ರಿಸುವ ಮೂಲಕ ಮಕ್ಕಳ ಅಧ್ಯಯನದ ಕಡೆಗೆ ಹೆಚ್ಚು ಗಮನ ಹರಿಸಬೇಕು. ಮಕ್ಕಳೊಂದಿಗೆ ಸ್ನೇಹಪೂರ್ವಕವಾಗಿ ಮಾತನಾಡಿ, ಅವರ ಸಂದೇಹಗಳನ್ನು ಕೇಳಿ ಪರಿಹರಿಸಬೇಕು. ಒತ್ತಡವನ್ನು ಹೆಚ್ಚಿಸುವ ಬದಲು ಪ್ರೋತ್ಸಾಹದ ಮಾತುಗಳ ಮೂಲಕ ಆತ್ಮಸ್ಥೈರ್ಯ ತುಂಬಬೇಕು ಎಂದು ತಿಳಿಸಿದರು.

ಈ ವೇಳೆ ಸಭೆಯಲ್ಲಿ ನಾನಾ ಶಾಲೆಗಳ ಮುಖ್ಯಗುರುಗಳು ತಮ್ಮ ಶಾಲೆಗಳಲ್ಲಿ ಕೈಗೊಂಡಿರುವ ಕ್ರಮಗಳನ್ನು ಹಂಚಿಕೊಂಡರು. ಕೆಲವರು ಬೆಳಿಗ್ಗೆ ಮತ್ತು ಸಂಜೆ ವಿಶೇಷ ತರಗತಿಗಳನ್ನು ನಡೆಸುತ್ತಿರುವುದಾಗಿ ತಿಳಿಸಿದರೆ, ಇನ್ನು ಕೆಲವರು ಪೋಷಕರ ಸಭೆಗಳ ಮೂಲಕ ಜಾಗೃತಿ ಮೂಡಿಸುತ್ತಿರುವುದಾಗಿ ಹೇಳಿದರು. ಎಸ್ಸೆಸ್ಸೆಲ್ಸಿ ಫಲಿತಾಂಶವನ್ನು ಉತ್ತಮ ಸ್ಥಾನಕ್ಕೆ ತರುವ ಉದ್ದೇಶದಿಂದ ಎಲ್ಲರೂ ಸಮನ್ವಯದಿಂದ ಕೆಲಸ ಮಾಡುವಂತೆ ಅಧಿಕಾರಿಗಳು ಕರೆ ನೀಡಿದರು.

ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕರ ಮಾರ್ಗದರ್ಶನ ಮತ್ತು ಪಾಲಕರ ಸಹಕಾರ ಒಟ್ಟುಗೂಡಿದರೆ ಉತ್ತಮ ಫಲಿತಾಂಶ ಸಾಧಿಸುವುದು ಸಾಧ್ಯವೆಂದು ಸಭೆಯಲ್ಲಿ ವಿಶ್ವಾಸ ವ್ಯಕ್ತವಾಯಿತು. ಬಿಇಒ ಬಿಜಿ ರಂಗೇಶ, ರಾಜಕುಮಾರ, ಸುನಿಲ ವಾಘಮಾರೆ ಸೇರಿದಂತೆ ಇತರರಿದ್ದರು.


ಉದಯವಾಹಿನಿ ಚಿತ್ರ

**ಬಿಸಿಯೂಟಕ್ಕೆ ಕಟ್ಟುನಿಟ್ಟಿನ ನಿಗಾ ವಹಿಸಿ**

**ತಾಲ್ಲೂಕಿನ ಶಾಲೆಗಳಲ್ಲಿ ಬಿಸಿಯೂಟ ವಿತರಣೆಯಲ್ಲಿ ಯಾವುದೇ ಸಮಸ್ಯೆ ಉಂಟಾಗದಂತೆ ಮುಖ್ಯಗುರುಗಳು ಜಾಗ್ರತೆ ವಹಿಸಬೇಕು ಎಂದು ತಹಸೀಲ್ದಾರ್ ಮಹೇಶ ಪಾಟೀಲ್ ಹಾಗೂ ಇಒ ಕಿರಣ ಪಾಟೀಲ್ ಸೂಚಿಸಿದರು. ತಾಲ್ಲೂಕಿನ ಜಮಾಲಪುರ ಶಾಲೆಯಲ್ಲಿ ನಡೆದ ಘಟನೆಯಂತೆ ಮರುಕಳಿಸದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಆಹಾರದ ಗುಣಮಟ್ಟ, ಸ್ವಚ್ಛತೆ ಹಾಗೂ ಸಂಗ್ರಹಣೆ ಕ್ರಮಗಳನ್ನು ನಿಯಮಿತವಾಗಿ ಪರಿಶೀಲಿಸಿ, ಯಾವುದೇ ದೂರುಗಳು ಬಂದಲ್ಲಿ ತಕ್ಷಣ ಸಂಬಂಧಿತ ಅಧಿಕಾರಿಗಳಿಗೆ ಪತ್ರ ಬರೆದು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ.**

**ಬಾಲ್ಯ ವಿವಾಹ ಸುಳಿವು ಕಂಡಲ್ಲಿ ಅಧಿಕಾರಿಗಳ ಗಮನಕ್ಕೆ ತನ್ನಿ**

**ಶಾಲೆಗೆ ಬರುವ ಮಕ್ಕಳ ಸ್ಥಿತಿ-ಪರಿಸ್ಥಿತಿಗಳ ಬಗ್ಗೆ ಶಿಕ್ಷಕರಿಗೆ ಸಮಗ್ರ ಮಾಹಿತಿ ಇರುತ್ತದೆ. ಬಾಲ್ಯ ವಿವಾಹ ನಡೆಯುವ ಸುಳಿವು ದೊರೆತರೂ ಅದನ್ನು ಮುಚ್ಚಿಡದೆ ತಕ್ಷಣ ಸಂಬಂಧಿತ ಅಧಿಕಾರಿಗಳ ಗಮನಕ್ಕೆ ತರಬೇಕು ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ. ಗಾಯತ್ರಿ ತಿಳಿಸಿದರು. ಮಕ್ಕಳ ಭವಿಷ್ಯ ಹಾಳಾಗದಂತೆ ಕಾನೂನುಬದ್ಧ ಕ್ರಮ ಕೈಗೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದರು.**

**ಫಲಿತಾಂಶ ಸುಧಾರಣೆಗೆ ಹಲವು ಯೋಜನೆ**

# ಇರಾನ್ ಗಲ್ಫ್ ರಾಷ್ಟ್ರಗಳ ಮೇಲೆ ಯುದ್ಧ ಮಾಡ್ತಿರೋದೇಕೆ?

## ಮಧ್ಯಪ್ರಾಚ್ಯದಲ್ಲಿ ಅಮೆರಿಕಾದ ಎಲ್ಲಾ ನೆಲೆಗಳು ಇರಾನ್ ನ ಕಾನೂನುಬದ್ಧ ಗುರಿಗಳು ಎಂದ ಇರಾನ್ ಸಚಿವ



**ಟೆಹ್ರಾನ್:** ಅಮೆರಿಕಾ-ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ದಾಳಿ ನಡೆಸಿ ಯುದ್ಧವನ್ನು ಸಾರಿ ಇರಾನ್ ಸುಪ್ರೀಂ ಲೀಡರ್ ಖಮೇನಿ ಹತ್ಯೆಗೆ ಕಾರಣವಾಗಿದೆ. ಆದರೆ, ಇರಾನ್ ಇಸ್ರೇಲ್ ಹಾಗೂ ಅಮೆರಿಕಾ ಮೇಲೆ ದಾಳಿಯ ಜೊತೆಜೊತೆಗೆ ತನ್ನ ನರೆ ರಾಷ್ಟ್ರಗಳ ಮೇಲೂ ದಾಳಿ ಮಾಡುತ್ತಿದ್ದು, ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಾರ್ಮೋಡ ಆವರಿಸುವಂತೆ ಮಾಡಿದೆ. ಇದು ಹಲವರಿಗೆ ಇರಾನ್ ತನ್ನ ಮೇಲೆ ದಾಳಿ ನಡೆಸಿದವರ ಜೊತೆಗೆ ತಮ್ಮ ನೆರೆರಾಷ್ಟ್ರಗಳ ಮೇಲೇಕೆ ದಾಳಿಗೆ ಮುಂದಾಗಿದೆ ಎಂಬ ಪ್ರಶ್ನೆ ಕಾಡಿತ್ತು. ಸದ್ಯ ಇದಕ್ಕೆ ಇರಾನ್‌ನ ಉಪ ವಿದೇಶಾಂಗ ಸಚಿವ ಮಜೀದ್ ತಖ್ತ್-ರಾವಂಚಿ ಉತ್ತರ ನೀಡಿದ್ದಾರೆ.

ಇರಾನ್ ತನ್ನ ನೆರೆಹೊರೆಯವರ ಮೇಲೆ ವೈಮಾನಿಕ



ದಾಳಿಗಳನ್ನು ಮಾಡುವ ಮೂಲಕ ಗಲ್ಫ್ ರಾಷ್ಟ್ರಗಳಲ್ಲಿ ಹಲವು ಕಟ್ಟಡಗಳು ಹಾಗೂ ಸೌಲಭ್ಯಗಳನ್ನು ಧ್ವಂಸಗೊಳಿಸುತ್ತಿದೆ. ಹೀಗೆ ತನ್ನ ಮೇಲೆ ಯುದ್ಧ ಸಾರಿದವರ ಜೊತೆಗೆ ಯಾವುದೇ ತಪ್ಪು ಮಾಡದ ನೆರೆರಾಷ್ಟ್ರಗಳ ಮೇಲೆಯೂ ಸಹ ಯುದ್ಧಕ್ಕೆ ಮುಂದಾಗಿರುವುದೇಕೆ ಎಂಬುದನ್ನು ಇರಾನ್ ಉಪ ವಿದೇಶಾಂಗ ಸಚಿವ ಮಜೀದ್ ತಖ್ತ್-ರಾವಂಚಿ ಸಂದರ್ಶನದಲ್ಲಿ ವಿವರಿಸಿದ್ದಾರೆ.

ಇರಾನ್ ಆಕ್ರಮಣಕ್ಕೂ ಮೊದಲೇ ಒಂದು ವೇಳೆ, ಅಮೆರಿಕಾ ಅಥವಾ ಇಸ್ರೇಲ್ ಇರಾನ್ ಮೇಲೆ ದಾಳಿ ಮಾಡುವ ಮೂಲಕ ದ್ವೇಷ ಸಾಧಿಸಲು ಮುಂದಾದರೆ, ನಮ್ಮ ಆತ್ಮರಕ್ಷಣೆಗಾಗಿ ನಾವು ತಮ್ಮ ಪ್ರದೇಶದಲ್ಲಿನ ಅಮೆರಿಕಾದ ಆಸ್ತಿಗಳು ಮತ್ತು ನೆಲೆಗಳನ್ನು ಗುರಿಯಾಗಿಸಿಕೊಳ್ಳುತ್ತೇವೆ ಎಂದು ನಮ್ಮ ನೆರೆರಾಷ್ಟ್ರಗಳಿಗೆ ಎಚ್ಚರಿಕೆ ನೀಡಿದ್ದೇವೆ ಎಂದು ತಿಳಿಸಿದ್ದಾರೆ.

### ಮಧ್ಯಪ್ರಾಚ್ಯದಲ್ಲಿ ಯುಎಸ್ ಮಿಲಿಟರಿ ಸಾಮರ್ಥ್ಯ ಎಲ್ಲೇ ಇದ್ದರೂ ದಾಳಿ ಪಕ್ಕಾ

ಈ ಸಮಯದಲ್ಲಿ ದುಬೈನಲ್ಲಿರುವ ಹೊಟೇಲ್ ಮೇಲೆ ನಡೆಸಿದ ದಾಳಿಗಳು ಕಾನೂನುಬದ್ಧವೇ ಎಂದು ಸಂದರ್ಶಕ ಕೇಳಿದ ಪ್ರಶ್ನೆಗೆ ಉತ್ತರಿಸಿದ ಇರಾನ್ ಉಪ ವಿದೇಶಾಂಗ ಸಚಿವ ನೀತಿ ಸ್ಪಷ್ಟವಾಗಿದ್ದು, ನಾವು ಅಮೆರಿಕಾದ ಮಿಲಿಟರಿ ನೆಲೆಗಳು ಅದರ ವಸ್ತುಗಳ ಮೇಲೆ ಗುರಿಯಾಗಿಸುತ್ತೇವೆ. ಒಂದು ವೇಳೆ ಅವರು ಅದನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಬದಲಿಸಿದರೆ, ಅದು ನಮ್ಮ ಸಂಬಂಧಪಟ್ಟಿದ್ದಲ್ಲ ಎಂದು ಹೇಳುವ ಮೂಲಕ ಯುಎಸ್‌ನ ಮಿಲಿಟರಿ ನೆಲೆಗಳು ಹಾಗೂ ಮಿಲಿಟರಿ ವಸ್ತುಗಳು ಮಧ್ಯಪ್ರಾಚ್ಯದಲ್ಲಿ ಎಲ್ಲೇ ಇದ್ದರೂ ಇರಾನ್ ಅದರ ಮೇಲೆ ದಾಳಿ ಮಾಡಲಿದೆ ಎಂದು ಖಚಿತಪಡಿಸಿದ್ದಾರೆ.

### ಇರಾನ್ ತನ್ನ ನೆರೆರಾಷ್ಟ್ರಗಳ ಮೇಲೆ ದಾಳಿ ಮಾಡಲು ಕಾರಣವೇನು?

ಈ ಕುರಿತು ಸಂದರ್ಶನದಲ್ಲಿ ಇರಾನ್ ಉಪ ವಿದೇಶಾಂಗ ಸಚಿವ ಮಜೀದ್ ತಖ್ತ್-ರಾವಂಚಿ ಮಾತನಾಡುತ್ತಾ, ನಮ್ಮ ನೆರೆಹೊರೆಯವರೊಂದಿಗೆ ನಮ್ಮ ಸಂಬಂಧ ಚೆನ್ನಾಗಿಯೇ ಇದೆ ಹಾಗೂ ಇರಾನ್ ತನ್ನ ನೆರೆರಾಷ್ಟ್ರಗಳೊಂದಿಗೆ ಉತ್ತಮ ಸಂಬಂಧವನ್ನು ಹೊಂದುವುದನ್ನು ಬಯಸುತ್ತದೆ. ಆದಾಗ್ಯೂ, ವಿಶ್ವಸಂಸ್ಥೆಯ ಚಾರ್ಟರ್‌ನ 54 ನೇ ವಿಧಿಯ ಪ್ರಕಾರ ಈ ಪಶ್ಚಿಮ ಏಷ್ಯಾದ ದೇಶಗಳಲ್ಲಿರುವ ಅಮೆರಿಕಾದ ನೆಲೆಗಳು ಕಾನೂನುಬದ್ಧ ಗುರಿಗಳಾಗಿವೆ.

ಇನ್ನು, ಸೌದಿ ಅರೇಬಿಯಾದಲ್ಲಿ ತೈಲ ಘಟಕಗಳ ಮೇಲಿನ ದಾಳಿ ಕುರಿತು ಮಾತನಾಡಿ ಸೌದಿ ತೈಲ ಘಟಕಗಳಿಗೆ ದಾಳಿಯಾದರೆ, ಅದಕ್ಕೆ ನಾವು ಜವಾಬ್ದಾರರಲ್ಲ. ನಾವು ಈಗಾಗಲೇ ನಮ್ಮ ಸೌದಿ ಸಹೋದರರೊಂದಿಗೆ ಸಂಪರ್ಕದಲ್ಲಿದ್ದೇವೆ ಮತ್ತು ಈ ವಿಷಯದ ಬಗ್ಗೆ ಮಾತನಾಡಿದ್ದೇವೆ. ಸೌದಿ ಅರೇಬಿಯಾದಲ್ಲಿ ತೈಲ ಸ್ಥಾವರಗಳ ಮೇಲಿನ ದಾಳಿಗೆ ಇರಾನ್ ಜವಾಬ್ದಾರನಾಗುವುದಿಲ್ಲ ಎಂದು ತಿಳಿಸಿದ್ದಾರೆ. ಹೀಗೆ ಇರಾನ್ ಏಕೆ ತನ್ನ ನೆರೆರಾಷ್ಟ್ರಗಳ ಮೇಲೆ ದಾಳಿ ಮಾಡುವ ಮೂಲಕ ಸಮರ ಸಾರುತ್ತಿದೆ ಎಂಬುದನ್ನು ಸ್ವತಃ ಇರಾನ್ ಉಪ ವಿದೇಶಾಂಗ ಸಚಿವರೇ ತಿಳಿಸಿದ್ದು, ಈ ಮೂಲಕ ತನ್ನ ನೆರೆರಾಷ್ಟ್ರಗಳು ಯುಎಸ್ ಮೇಲೆ ಒತ್ತಡವನ್ನು ಹೇರಿ ಯುದ್ಧಕ್ಕೆ ಅಂತ್ಯಹಾಡುವಂತೆ ಮಾಡುವ ತಂತ್ರವನ್ನು ಇರಾನ್ ಬಳಸುತ್ತಿರುವಂತಿದೆ.

# ಉಕ್ರೇನ್ ಕದನ ವಿರಾಮಕ್ಕೆ ಸಹಾಯ ಮಾಡಿದ್ರೆ, ನಾವು ನೆರವಾಗ್ತೀವಿ: ಝೆಲೆನ್ಸ್ಕಿ

**ಕೀವ್:** ಮಧ್ಯಪ್ರಾಚ್ಯದಲ್ಲಿ ಸದ್ಯ ಯುದ್ಧದ ಕಾರ್ಮೋಡ ಆವರಿಸಿದ್ದು, ಇಸ್ರೇಲ್-ಇರಾನ್ ದಾಳಿಗೆ ಪ್ರತಿಕ್ರಿಯೆಯಾಗಿ ಇರಾನ್ ತನ್ನ ನೆರೆರಾಷ್ಟ್ರಗಳ ಮೇಲೆ ದಾಳಿ ನಡೆಸುತ್ತಾ ಇಡೀ ಮಧ್ಯಪ್ರಾಚ್ಯವೇ ನಲುಗುವಂತೆ ಮಾಡುತ್ತಿದೆ. ಈ ನಡುವೆ ಇರಾನ್ ದಾಳಿಗೆ ಒಳಗಾಗುತ್ತಿರುವ ಗಲ್ಫ್ ರಾಷ್ಟ್ರಗಳಿಗೆ ಮತ್ತೊಂದು ಯುದ್ಧ ಪೀಡಿತ ದೇಶ ಉಕ್ರೇನ್ ಸಹಾಯ ಮಾಡಲು ಮುಂದಾಗಿದೆ. ಆದರೆ, ಹೀಗೆ ಗಲ್ಫ್ ರಾಷ್ಟ್ರಗಳಿಗೆ ಉಕ್ರೇನ್‌ನಿಂದ ಸಹಾಯ ದೊರಕಬೇಕಾದರೆ ಒಂದು ಷರತ್ತನ್ನು ಸಹ ವಿಧಿಸಿದೆ.

ಇರಾನ್-ಇಸ್ರೇಲ್ ಯುದ್ಧ ಸದ್ಯ ಗಲ್ಫ್ ರಾಷ್ಟ್ರಗಳ ಪಾಲಿಗೆ ತಲೆ ನೋವಾಗಿ ಪರಿಣಮಿಸಿದ್ದು, ಇದರಿಂದ ತನ್ನ ಬೇಳೆ ಬೇಯಿಸಿಕೊಳ್ಳಲು ಹಲವರು ಉಕ್ರೇನ್ ನೋಡುತ್ತಿರುವಂತಿದೆ.

ಇದಕ್ಕೆ ಕಾರಣ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಇರಾನ್ ಡ್ರೋನ್ ಮತ್ತು ಕ್ಷಿಪಣಿ ಬೆದರಿಕೆಗಳನ್ನು ಎದುರಿಸುತ್ತಿರುವ ಗಲ್ಫ್ ರಾಷ್ಟ್ರಗಳಿಗೆ ಸಹಾಯವನ್ನು ನೀಡುವುದಾಗಿ ಏನೂ ಘೋಷಿಸಿದ್ದಾರೆ ಸರಿ, ಆದರೆ, ಹೀಗೆ ಉಕ್ರೇನ್ ಸಹಾಯ ಮಾಡಬೇಕಾದರೆ, ರಷ್ಯಾದೊಂದಿಗೆ ಉತ್ತಮ ಸಂಬಂಧವನ್ನು ಹೊಂದಿರುವ ಈ ಗಲ್ಫ್ ರಾಷ್ಟ್ರಗಳು ಉಕ್ರೇನ್‌ನಲ್ಲಿ ತಾತ್ಕಾಲಿಕವಾಗಿ ಕದನವಿರಾಮವಾಗುವಂತೆ ಮಾಡಬೇಕು ಎಂಬ ಷರತ್ತನ್ನು ವಿಧಿಸಿದ್ದಾರೆ.

### ಇರಾನ್ ದಾಳಿ ಮಧ್ಯೆ ಗಲ್ಫ್ ರಾಷ್ಟ್ರಗಳಿಗೆ ಉಕ್ರೇನ್ ಆಫರ್

**ಉಕ್ರೇನ್ ಕದನ ವಿರಾಮಕ್ಕೆ ರಷ್ಯಾಗೆ ಸಲಹೆ ನೀಡಲು ಗಲ್ಫ್ ರಾಷ್ಟ್ರಗಳಿಗೆ ಝೆಲೆನ್ಸ್ಕಿ ಕರೆ:** ಈ ಕುರಿತು ಹೇಳಿಕೆ ನೀಡಿರುವ ಝೆಲೆನ್ಸ್ಕಿ ಗಲ್ಫ್ ರಾಷ್ಟ್ರಗಳ ನಾಯಕರು ರಷ್ಯಾದೊಂದಿಗೆ ಬಲವಾದ ಆರ್ಥಿಕ ಹಾಗೂ ಇತರೆ ಸಂಬಂಧವನ್ನು ಹಾಗೂ ಪ್ರಭಾವವನ್ನು ಹೊಂದಿದ್ದಾರೆ. ಒಂದು ವೇಳೆ ಇವರೆನಾದರೂ ಉಕ್ರೇನ್ ನೊಂದಿಗಿನ ಯುದ್ಧವನ್ನು ಕೆಲ ಸಮಯದವರೆಗೆ ಅಂದರೆ ಕನಿಷ್ಠ 1-2 ತಿಂಗಳು ಕದನವಿರಾಮವಾಗುವಂತೆ ರಷ್ಯಾಗೆ ಸಲಹೆ ನೀಡಿದರೆ, ಆಗ ನಾವು ಗಲ್ಫ್ ಪ್ರದೇಶದಲ್ಲಿನ ನಾಗರಿಕ ಜನಸಂಖ್ಯೆಯನ್ನು ರಕ್ಷಿಸಲು ತಜ್ಞರನ್ನು ನಿಯೋಜಿಸಬಹುದು ಎಂದು ತಿಳಿಸಿದ್ದಾರೆ.

**ಮಾ.5ರಿಂದ ಅಬುಧಾಬಿಯಲ್ಲಿ ಶಾಂತಿ ಮಾತುಕತೆ ನಿಗದಿ:** ಇದೇ ಮಾರ್ಚ್ 5ರಿಂದ 8 ಅಥವಾ 9ನೇ ದಿನಾಂಕದವರೆಗೂ ಅಬುಧಾಬಿಯಲ್ಲಿ ಆಯೋಜಿಸಲಾಗಿರುವ ರಷ್ಯಾ-ಉಕ್ರೇನ್ ಮಾತುಕತೆಗಳನ್ನು ಸಹ ಉಲ್ಲೇಖಿಸಿದ್ದಾರೆ. ಈ ಶಾಂತಿ ಮಾತುಕತೆಗಳನ್ನು ಅಬುಧಾಬಿಯಲ್ಲಿ ನಡೆಸುವುದಾಗಿ ತಾತ್ಕಾಲಿಕವಾಗಿ ಯೋಜಿಸಲಾಗಿದೆ. ಆದಾಗ್ಯೂ, ಒಂದು ವೇಳೆ ಸದ್ಯದ ಅಲ್ಲಿನ ಪರಿಸ್ಥಿತಿಗಳಿಂದ ಯೋಜನೆಗಳು ಬದಲಾದರೆ, ಉಕ್ರೇನ್ ಬೇರೆ ಸ್ಥಳದಲ್ಲಿ ಸಭೆಸೇರಲು ಮುಕ್ತವಾಗಿದ್ದು, ಟರ್ಕಿ, ಸ್ವಿಟ್ಜರ್ಲೆಂಡ್‌ನಲ್ಲಿಯೂ ಸಭೆಯನ್ನು ಆಯೋಜಿಸಬಹುದು ಎಂದು ತಿಳಿಸಿದ್ದಾರೆ.



**ಇರಾನ್ ಡ್ರೋನ್ ಬಳಸಿ ಇರಾನ್ ಮೇಲೆ ದಾಳಿ:** ಇನ್ನು, ಬ್ಲೂಮ್ ಬರ್ಗ್ ನ್ಯೂಸ್ ಗೆ ನೀಡಿದ ಪ್ರತ್ಯೇಕ ಸಂದರ್ಶನದಲ್ಲಿಯೂ ಸಹ ಗಲ್ಫ್ ರಾಷ್ಟ್ರಗಳಿಗೆ ಸಹಾಯ ಒದಗಿಸುವುದಾಗಿ ಝೆಲೆನ್ಸ್ಕಿ ಹೇಳಿದ್ದು, ಈ ರಾಷ್ಟ್ರಗಳಿಗೆ ಸಹಾಯ ಮಾಡಲು ಉಕ್ರೇನ್ ತನ್ನ ಡ್ರೋನ್ ರಷ್ಯಾದೊಂದಿಗೆ ನಡೆಯುತ್ತಿರುವ ಯುದ್ಧದ ಸಮಯದಲ್ಲಿ ಡ್ರೋನ್‌ಗಳನ್ನು ಪ್ರತಿಬಂಧಿಸುವಲ್ಲಿ ಕೀವ್ ವಿಶಿಷ್ಟ ಪರಿಣತಿಯನ್ನು ಅಭಿವೃದ್ಧಿಪಡಿಸಿದೆ ಎಂದು ಹೇಳಿದರು, ಅವುಗಳಲ್ಲಿ ಹಲವು ಇರಾನ್ ನಿರ್ಮಿತ ಮಾನವರಹಿತ ವೈಮಾನಿಕ ವಾಹನಗಳು ಇವೆ. ಕದನ ವಿರಾಮ ಘೋಷಣೆಯಾಗುವಲ್ಲಿ ಗಲ್ಫ್ ರಾಷ್ಟ್ರಗಳು ಸಹಾಯ ಮಾಡಿದರೆ, ಇವುಗಳನ್ನು ನಿರ್ವಹಿಸುವವರನ್ನು ಕಳುಹಿಸುತ್ತೇವೆ ಎಂದು ಪುನರುಚ್ಚರಿಸಿದ್ದಾರೆ.

ಈ ಮೂಲಕ ಮಧ್ಯಪ್ರಾಚ್ಯದಲ್ಲಿನ ಯುದ್ಧವನ್ನು ಬಳಸಿಕೊಂಡು ಉಕ್ರೇನ್ ತನ್ನ ದೇಶದಲ್ಲಿ ನಡೆಯುತ್ತಿರುವ ಯುದ್ಧಕ್ಕೆ ಕದನವಿರಾಮ ಘೋಷಣೆಯಾಗುವಂತೆ ಮಾಡುವ ತಂತ್ರವನ್ನು ರೂಪಿಸುತ್ತಿದೆ. ಸದ್ಯ ಝೆಲೆನ್ಸ್ಕಿ ಈ ಆಫರ್ ಗೆ ಗಲ್ಫ್ ರಾಷ್ಟ್ರಗಳು ಯಾವ ಪ್ರತಿಕ್ರಿಯೆಯನ್ನು ನೀಡಿಲಿವೆ ಎಂದು ಕಾದು ನೋಡಬೇಕಿದೆ.

# ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಉಗ್ರರ ವಿರುದ್ಧ ಇಸ್ರೇಲ್ ಕಾರ್ಯಾಚರಣೆ

**ದುಬೈ:** ಹಿಜ್ಬೊಲ್ಲಾ ವಿರುದ್ಧ ದಾಳಿ ಮುಂದುವರಿಸಿರುವ ಇಸ್ರೇಲಿ ಸೇನೆ ದಕ್ಷಿಣ ಲೆಬನಾನ್‌ಗೆ ನುಗ್ಗಿದೆ.ಹಿಜ್ಬೊಲ್ಲಾ ಉಗ್ರಗಾಮಿಗಳೊಂದಿಗೆ ಹೋರಾಟದ ನಡುವೆ ಲೆಬನಾನ್‌ನಲ್ಲಿ ನಮ ಸೈನಿಕರು ಕಾರ್ಯಾಚರಣೆ ನಡೆಸುತ್ತಿದೆ ಎಂದು ಲೆಫ್ಟಿನೆಂಟ್ ಕರ್ನಲ್ ನಾದವ್ ಶೋಶಾನಿ ಹೇಳುತ್ತಾರೆ. ಮುಂದಿನ ರಕ್ಷಣಾ ಭಂಗಿ ಎಂದು ವಿವರಿಸಿದ ಗಡಿಯ ಬಳಿ ಹಲವಾರು ಸ್ಥಳಗಳಲ್ಲಿ ಪಡೆಗಳನ್ನು



ಇರಿಸಲಾಗಿದೆ. ಲೆಬನಾನ್ ಗಡಿಯ ಬಳಿ ಉತ್ತರ ಇಸ್ರೇಲ್‌ನ ನಿವಾಸಿಗಳಿಗೆ ಭದ್ರತೆಯನ್ನು ಹೆಚ್ಚಿಸುವ ವಿಶಾಲ ಪ್ರಯತ್ನದ ಭಾಗವಾಗಿ ನಿಯೋಜನೆ ಇದೆ ಎಂದು ಅದು ಹೇಳಿದ್ದಾರೆ. ಈ ಪ್ರದೇಶದಲ್ಲಿ ಪಡೆಗಳು ಮತ್ತು ವಾಯು ರಕ್ಷಣೆಯನ್ನು ಹೆಚ್ಚಿಸಿದೆ. ಗಡಿ ಪ್ರದೇಶಗಳ ಇಸ್ರೇಲಿ ನಿವಾಸಿಗಳನ್ನು ಸ್ಥಳಾಂತರಿಸುವ ಯಾವುದೇ ಯೋಜನೆಗಳಿಲ್ಲ ಎಂದು ಸೇನೆ ಹೇಳುತ್ತದೆ. ನವೆಂಬರ್ 2024 ರ ಕದನ ವಿರಾಮವು ಹೆಜ್ಬೊಲ್ಲಾ ಜೊತೆಗಿನ ಒಂದು ವರ್ಷಕ್ಕೂ ಹೆಚ್ಚು ಕಾಲದ ಹೋರಾಟವನ್ನು ಕೊನೆಗೊಳಿಸಿದಾಗಿನಿಂದ ಇಸ್ರೇಲ್ ದಕ್ಷಿಣ ಲೆಬನಾನ್‌ನಲ್ಲಿ ಐದು ಸ್ಥಾನಗಳನ್ನು ಆಕ್ರಮಿಸಿಕೊಂಡಿದೆ. ಇಸ್ರೇಲಿ ಗಡಿ ಪಟ್ಟಣಗಳ ಮೇಲಿನ ದಾಳಿಗಳನ್ನು ತಡೆಯುವ ಉದ್ದೇಶದಿಂದ ಹೊಸ ನಿಯೋಜನೆಯು ಆ ಐದು ಸ್ಥಾನಗಳನ್ನು ಬಳಸಲಾಗಿದೆ ಎಂದು ಲೆಫ್ಟಿನೆಂಟ್ ಕರ್ನಲ್ ನಾದವ್ ಶೋಶಾನಿ ಹೇಳುತ್ತಾರೆ.

# ಇರಾನ್ ಕ್ರಮ ಭಯೋತ್ಪಾದಕ ಆಡಳಿತ: ನೆತನ್ಯಾಹು

**ಟೆಲ್ ಅವೀವ್:** ಮಧ್ಯಪ್ರಾಚ್ಯದಲ್ಲಿ ಹೆಚ್ಚುತ್ತಿರುವ ಉದ್ವಿಗ್ನತೆಯ ಮಧ್ಯೆ, ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಇರಾನ್ ನ ಕ್ರಮಗಳನ್ನು ಭಯೋತ್ಪಾದಕ ಆಡಳಿತ ಎಂದು ಖಂಡಿಸಿದ್ದಾರೆ. ಟೆಹ್ರಾನ್ ನಾಗರಿಕರನ್ನು ಗುರಿಯಾಗಿಸಿಕೊಂಡರೆ, ಇಸ್ರೇಲ್ ತನ್ನ ಜನರನ್ನು ರಕ್ಷಿಸುವತ್ತ ಗಮನ ಹರಿಸುತ್ತಿದೆ ಎಂದು ಹೇಳಿದ್ದಾರೆ. ಇಸ್ರೇಲ್‌ನ ನಡೆಯುತ್ತಿರುವ ಮಿಲಿಟರಿ ಕಾರ್ಯಾಚರಣೆ, ಆಪರೇಷನ್ ರೋರಿಂಗ್ ಲಯನ್, ಇರಾನ್ ಒಡ್ಡುವ ಅಸ್ತಿತ್ವದ ಬೆದರಿಕೆಗಳ ವಿರುದ್ಧ ರಕ್ಷಿಸಲು ಎಂದು ಅವರು ಒತ್ತಿ ಹೇಳಿದರು. ಟೆಹ್ರಾನ್ ನಲ್ಲಿನ ಭಯೋತ್ಪಾದಕ ಆಡಳಿತವು ನಾಗರಿಕರ ಮೇಲೆ ಗುಂಡು ಹಾರಿಸುತ್ತಿದೆ ಮತ್ತು ನಾಗರಿಕರನ್ನು ರಕ್ಷಿಸಲು ನಾವು ಭಯೋತ್ಪಾದಕ ಆಡಳಿತದ ಮೇಲೆ ಗುಂಡು ಹಾರಿಸುತ್ತಿದ್ದೇವೆ'' ಎಂದು ನೆತನ್ಯಾಹು ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಬರೆದಿದ್ದಾರೆ.



ಇಸ್ರೇಲ್ ನ ಮಿಲಿಟರಿ ಅಭಿಯಾನವು ತನ್ನ ಜನರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವ ಗುರಿಯನ್ನು ಹೊಂದಿದೆ ಮತ್ತು ಇರಾನಿನ ಜನರು ತಮ್ಮ ದಬ್ಬಾಳಿಕೆಯ ಸರ್ಕಾರವನ್ನು ಉರುಳಿಸಲು ಪರಿಸ್ಥಿತಿಗಳನ್ನು ಸೃಷ್ಟಿಸುತ್ತದೆ ಎಂದು ಅವರು ಒತ್ತಿ ಹೇಳಿದರು. ಈ ದಿನ ಬರುತ್ತಿದೆ ಮತ್ತು ಅದು ಬಂದಾಗ, ಇಸ್ರೇಲ್ ಮತ್ತು ಅಮೆರಿಕ ಇರುತ್ತದೆ ಎಂದು ನೆತನ್ಯಾಹು ಹೇಳಿದರು.

ಇದೇ ವೇಳೆ, ಹೋಮ್ ಫ್ರಂಟ್ ಕಮಾಂಡ್‌ನ ಸೂಚನೆಗಳನ್ನು ಅನುಸರಿಸುವಂತೆ ನೆತನ್ಯಾಹು ಇಸ್ರೇಲಿ ನಾಗರಿಕರನ್ನು ಒತ್ತಾಯಿಸಿದರು. ಇದು ಅನೇಕ ಜೀವಗಳನ್ನು ಉಳಿಸಿದೆ ಎಂದು ಅವರು ಹೇಳಿದರು. ಸಂಘರ್ಷದಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ಅವರು ಸಂತಾಪ ಸೂಚಿಸಿದರು ಮತ್ತು ಗಾಯಗೊಂಡವರು ಶೀಘ್ರವಾಗಿ ಚೇತರಿಸಿಕೊಳ್ಳಲಿ ಎಂದು ಹಾರೈಸಿದರು.

ರಕ್ಷಣಾ ಮತ್ತು ಪುನರ್ ನಿರ್ಮಾಣ ತಂಡಗಳ ಪ್ರಯತ್ನಗಳನ್ನು ಅವರು ಶ್ಲಾಘಿಸಿದರು, ನಾವು ಪುನರ್ ನಿರ್ಮಿಸುತ್ತೇವೆ ಮತ್ತು ಇನ್ನೂ ಹೆಚ್ಚಿನದನ್ನು ನಿರ್ಮಿಸುತ್ತೇವೆ ಎಂದು ಅವರು ಹೇಳಿದರು.

# ಮಧ್ಯಪ್ರಾಚ್ಯದಲ್ಲಿ ಸಿಲುಕಿರುವ ಭಾರತೀಯರನ್ನು ಕರೆತರಲು ಹೊರಟ 10 ವಿಮಾನಗಳು

**ನವದೆಹಲಿ:** ಇರಾನ್-ಇಸ್ರೇಲ್ ಯುದ್ಧದಿಂದಾಗಿ ಮಧ್ಯಪ್ರಾಚ್ಯದಲ್ಲಿ ಸಿಲುಕಿರುವ ಭಾರತೀಯರನ್ನು ವಾಪಸ್ ಕರೆತರಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವಾಲಯ ತಿಳಿಸಿದೆ.

ವಾಯುಪ್ರದೇಶಗಳ ಮೂಲಕ ಭಾರತೀಯರನ್ನು ಕರೆತರಲು ವಿಶೇಷ ಕಾರ್ಯಾಚರಣೆ ನಡೆಸಲಾಗುತ್ತಿದೆ. ಇಂಡಿಗೋ ಏರ್‌ಲೈನ್ಸ್‌ನ 10 ವಿಶೇಷ ವಿಮಾನಗಳು ಜೆದ್ದಾಗೆ ತೆರಳಿ ಭಾರತೀಯರನ್ನು ಕರೆತರಲು ಉದ್ದೇಶಿಸಿವೆ ಎಂದು ಸಚಿವಾಲಯ ತಿಳಿಸಿದೆ. ಜೆದ್ದಾದಲ್ಲಿರುವ ಭಾರತೀಯ ರಾಯಭಾರಿ ಕಚೇರಿಯೊಂದಿಗೆ ಇಂಡಿಗೋ ಸಂಪರ್ಕದಲ್ಲಿದೆ. ಯಾವ ವಾಯುಮಾರ್ಗದ ಮೂಲಕ ಕಾರ್ಯಾಚರಣೆ ನಡೆಸಬಹುದು ಎಂಬ ಬಗ್ಗೆ ಸಮಾಲೋಚನೆ ನಡೆಸಲಾಗುತ್ತಿದೆ.

ಅಲ್ಲಿ ಸಿಲುಕಿರುವ ಪ್ರಯಾಣಿಕರ ಸುರಕ್ಷಿತ ವಾಪಸಾತಿಗೆ ವಿಶೇಷ ವ್ಯವಸ್ಥೆಗಳನ್ನು ಮಾಡಲಾಗಿದೆ. ಅಗತ್ಯವಿದ್ದಲ್ಲಿ ಹೆಚ್ಚುವರಿ ವಿಮಾನಗಳನ್ನು ಕಳುಹಿಸಲಾಗುವುದು. ವಿದೇಶಿ ವಿಮಾನಯಾನ ಸಂಸ್ಥೆಗಳು ಮತ್ತು ಭಾರತೀಯ ದೂತಾವಾಸ ಕಚೇರಿಗಳೊಂದಿಗೆ ಸಮನ್ವಯ ಸಾಧಿಸಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.



### ಅಗತ್ಯವಿದ್ದಲ್ಲಿ ಹೆಚ್ಚುವರಿ ವಿಮಾನ

ಪರ್ಯಾಯ ವಾಯುಮಾರ್ಗಗಳ ಮೂಲಕ ವಿಮಾನ ಸಂಚಾರನಿರ್ಬಂಧಿತ ವಾಯುಪ್ರದೇಶದ ಬದಲಿಗೆ ಪರ್ಯಾಯ ಮಾರ್ಗಗಳ ಮೂಲಕ ದೀರ್ಘ ಹಾಗೂ ಅತಿ ದೀರ್ಘ ದೂರದ ವಿಮಾನ ಸೇವೆಗಳನ್ನು ಹಂತ ಹಂತವಾಗಿ ಪುನರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ವಿಮಾನಗಳು ಮತ್ತು ಸಿಬ್ಬಂದಿಯ ಮರುಸ್ಥಾಪನೆ ಕಾರ್ಯವೂ ಪ್ರಗತಿಯಲ್ಲಿ ಇದೆ ಎಂದು ಸಚಿವಾಲಯ ತಿಳಿಸಿದೆ. ಭಾರತ ಮತ್ತು ಗಲ್ಫ್ ರಾಷ್ಟ್ರಗಳ ನಡುವೆ ಸಂಚರಿಸುವ ವಿದೇಶಿ ವಿಮಾನ ಸಂಸ್ಥೆಗಳೂ ಮಿತ ಪ್ರಮಾಣದಲ್ಲಿ ಕಾರ್ಯಾಚರಣೆ ನಡೆಸುತ್ತಿವೆ. ಎಲ್ಲಾ ವಿಮಾನಯಾನ ಸಂಸ್ಥೆಗಳಿಗೂ ಪ್ರಯಾಣಿಕರೊಂದಿಗೆ ಪಾರದರ್ಶಕವಾಗಿ ಮಾಹಿತಿ ಹಂಚಿಕೊಳ್ಳುವಂತೆ ಸೂಚಿಸಲಾಗಿದೆ.

ಪ್ರಯಾಣದ ಸಮಯ ಮರುನಿಗದಿ ಸೇರಿದಂತೆ ನಿಯಮಾನುಸಾರ ಸೇವೆಗಳನ್ನು ಒದಗಿಸುವಂತೆ ಸೂಚಿಸಲಾಗಿದೆ. ಪ್ರಯಾಣಿಕರು ವಿಮಾನ ನಿಲ್ದಾಣಕ್ಕೆ ಹೊರಡುವ ಮೊದಲು ತಮ್ಮ ವಿಮಾನಗಳ ಸ್ಥಿತಿಯನ್ನು ಸಂಬಂಧಿತ ವಿಮಾನಯಾನ ಸಂಸ್ಥೆಗಳ ಅಧಿಕೃತ ಮೂಲಗಳಿಂದ ಪರಿಶೀಲಿಸಿಕೊಳ್ಳುವಂತೆ ಸಲಹೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ. ಕೇಂದ್ರ ನಾಗರಿಕ ವಿಮಾನಯಾನ ಸಚಿವ ರಾಮಮೋಹನ್ ನಾಯ್ಡು ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯ ಬಳಿಕ ಈ ನಿರ್ಧಾರಕ್ಕೆ ಬರಲಾಯಿತು. ನಾಗರಿಕ ವಿಮಾನಯಾನ ಕಾರ್ಯದರ್ಶಿ ಸಮೀರ್ ಕುಮಾರ್ ಸಿನ್ಹಾ ಸೇರಿದಂತೆ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು ಎಂದು ಸಚಿವಾಲಯ ತಿಳಿಸಿದೆ.

# ಕಾಶ್ಮೀರದಲ್ಲಿ ಮುಸ್ಲಿಮರ ಬೃಹತ್ ಪ್ರತಿಭಟನೆ, ಭದ್ರತಾ ಪಡೆ ಹೈಅಲರ್ಟ್

**ಶ್ರೀನಗರ:** ಇರಾನ್‌ನ ಸರ್ವೋಚ್ಚ ನಾಯಕ ಅಯತೊಲ್ಲಾ ಅಲಿ ಖಮೇನಿ ಹತ್ಯೆಯನ್ನು ವಿರೋಧಿಸಿ ಕಣಿವೆಯಾದ್ಯಂತ ನಡೆದ ಬೃಹತ್ ಪ್ರತಿಭಟನೆಗಳ ನಂತರ ಇಂದು ಕೂಡ ಕಾಶ್ಮೀರದಲ್ಲಿ ಕಠಿಣ ನಿರ್ಬಂಧಗಳನ್ನು ವಿಧಿಸಲಾಗಿದೆ.

ಮುನ್ನೆಚ್ಚರಿಕೆ ಕ್ರಮವಾಗಿ ನಿನ್ನೆಯಿಂದ ಶಿಕ್ಷಣ ಸಂಸ್ಥೆಗಳನ್ನು ಎರಡು ದಿನಗಳ ಕಾಲ ಮುಚ್ಚಲಾಯಿತು ಮತ್ತು ಮೊಬೈಲ್ ಇಂಟರ್ನೆಟ್ ವೇಗವನ್ನು ಕಡಿಮೆ ಮಾಡಲಾಯಿತು, ಕೆಲವು ಸ್ಥಳಗಳಲ್ಲಿ ಪ್ರತಿಭಟನೆಗಳು ಹಿಂಸಾತ್ಮಕವಾಗಲು ಪ್ರಾರಂಭಿಸಿದಾಗ ಅಧಿಕಾರಿಗಳು ಕಣಿವೆಯಲ್ಲಿ ಭದ್ರತಾ ಪಡೆಗಳ ಎಲ್ಲಾ ಬೆಂಗಾವಲುಗಳ ಸಂಚಾರವನ್ನು ರದ್ದುಗೊಳಿಸಿದರು.

ಉದ್ವಿಗ್ನತೆಯನ್ನು ತಪ್ಪಿಸಲು, ಭದ್ರತಾ ಪಡೆಗಳ ಯಾವುದೇ ರಸ್ತೆ ತೆರೆಯುವ ಪಕ್ಷಗಳನ್ನು ನಿಯೋಜಿಸದಿರಲು ಅವರು ನಿರ್ಧರಿಸಿದ್ದಾರೆ. ಖಮೇನಿ ಹತ್ಯೆಯ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ನಿನ್ನೆ ಭುಗಿಲೆದ್ದ ಪ್ರತಿಭಟನೆಗಳಲ್ಲಿ ಆರು ಭದ್ರತಾ ಸಿಬ್ಬಂದಿ ಸೇರಿದಂತೆ ಕನಿಷ್ಠ 14 ಜನರು ಗಾಯಗೊಂಡಿದ್ದಾರೆ.

ಕಾಶ್ಮೀರ ಕಣಿವೆಯ ವಿವಿಧ ಸ್ಥಳಗಳಲ್ಲಿ 75 ರ್ಯಾಲಿಗಳು ನಡೆದಿವೆ ಮತ್ತು ಜಮ್ಮು ಪ್ರದೇಶದಲ್ಲಿ ಕೆಲವು ಪ್ರದರ್ಶನಗಳು ನಡೆದಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.ಆಗಸ್ಟ್ 2019 ರ ನಂತರ ಕಾಶ್ಮೀರದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಪ್ರತಿಭಟನೆಗಳು ನಡೆದಿರುವುದು ಇದೇ ಮೊದಲು.

ಕಾಶ್ಮೀರ ವಿಭಾಗದ ಆಡಳಿತವು ಜನರು ಸಂಯಮದಿಂದ ವರ್ತಿಸುವಂತೆ ಮತ್ತು ಅಧಿಕಾರಿಗಳು ನೀಡುವ ಸಲಹೆಗಳನ್ನು ಪಾಲಿಸುವಂತೆ ಮನವಿ ಮಾಡಿದೆ. ವಿಭಾಗೀಯ ಆಡಳಿತ, ಕಾಶ್ಮೀರ, ಕಣಿವೆಯಲ್ಲಿ ಶಾಂತಿಯನ್ನು ಕಾಪಾಡುವಲ್ಲಿ ಮತ್ತು ಕಾನೂನು ಮತ್ತು ಸುವ್ಯವಸ್ಥೆಯನ್ನು ಎತ್ತಿಹಿಡಿಯುವಲ್ಲಿ ಎಲ್ಲಾ ಸಮುದಾಯಗಳ ಪಾತ್ರವನ್ನು ಗುರುತಿಸುತ್ತದೆ. ನಾಗರಿಕರು ಸಂಯಮದಿಂದ ವರ್ತಿಸಲು, ಸ್ಥಳೀಯ ಆಡಳಿತವು ನೀಡುವ ಸಲಹೆಗಳನ್ನು ಪಾಲಿಸಲು ಮತ್ತು ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳಲ್ಲಿ ಪರಿಶೀಲಿಸಿದ ಮಾಹಿತಿಯನ್ನು ಮಾತ್ರ ಹಂಚಿಕೊಳ್ಳಲು ಸೂಚಿಸಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

## ಮಿನಿ ನ್ಯೂಸ್

### ಸುಂಕ ಮರುಪಾವತಿ ವಿಳಂಬ, ಟ್ರಂಪ್ ಲೆಕ್ಕಾಚಾರ ತಲೆಕೆಳಗು ಮಾಡಿದ ನ್ಯಾಯಾಲಯ

**ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸುಂಕ ನೀತಿಯು ವಿಶ್ವಾದ್ಯಂತ ಚರ್ಚೆಯ ವಿಷಯವಾಗಿದೆ. ಟ್ರಂಪ್ ಈಗ ತಮ್ಮ ಸುಂಕಗಳಿಗೆ ಸಂಬಂಧಿಸಿದಂತೆ ಎರಡು ಪಟ್ಟು ಹೊಡೆತವನ್ನು ಅನುಭವಿಸಿದ್ದಾರೆ. ಒಂದೆಡೆ, ಅಮೆರಿಕದ ಸುಪ್ರೀಂ ಕೋರ್ಟ್ ಅಮೆರಿಕದ ಸುಂಕಗಳನ್ನು ಕಾನೂನುಬಾಹಿರವೆಂದು ಘೋಷಿಸಿ ಅವುಗಳನ್ನು ಸಂಪೂರ್ಣವಾಗಿ ರದ್ದುಗೊಳಿಸಲು ತೀರ್ಪು ನೀಡಿದೆ. ಮತ್ತೊಂದೆಡೆ, ಕಳೆದ ತಿಂಗಳು ಅಮೆರಿಕದ ಸುಪ್ರೀಂ ಕೋರ್ಟ್ ಕಾನೂನುಬಾಹಿರವೆಂದು ಘೋಷಿಸಿದ ಸುಂಕಗಳನ್ನು ಮರುಪಾವತಿಸುವ ಪ್ರಕ್ರಿಯೆಯನ್ನು ನಿಧಾನಗೊಳಿಸಬೇಕೆಂಬ ಟ್ರಂಪ್ ಆಡಳಿತದ ವಿನಂತಿಯನ್ನು ಅಮೆರಿಕದ ಫೆಡರಲ್ ನ್ಯಾಯಾಲಯವೂ ತಿರಸ್ಕರಿಸಿದೆ.

ಅಮೆರಿಕದ ಫೆಡರಲ್ ಅಮೆರಿಕ ಸರ್ಕಾರದ ಸುಂಕ ಮರುಪಾವತಿ ವಿಳಂಬ ತಂತ್ರವನ್ನು ತಿರಸ್ಕರಿಸಿದೆ. ಮರುಪಾವತಿ ವಿಚಾರಣೆ ಹಾಗೂ ವಿಚಾರಣೆಗೆ ಬರುವ ಮೊದಲು ನಾಲ್ಕು ತಿಂಗಳವರೆಗೆ ವಿಳಂಬ ಮಾಡಬೇಕೆಂದು ಟ್ರಂಪ್ ಆಡಳಿತ ವಾದಿಸಿತ್ತು.ಸುಂಕ ಮರುಪಾವತಿಗೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಗಳನ್ನು ವಿಳಂಬಗೊಳಿಸುವ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಒತ್ತಾಯವನ್ನು ಅಮೆರಿಕದ ಫೆಡರಲ್ ಮೇಲ್ಮನವಿ ನ್ಯಾಯಾಲಯ ತಿರಸ್ಕರಿಸಿದ್ದು, ಕೆಳ ನ್ಯಾಯಾಲಯದಲ್ಲಿ ಹೋರಾಟ ಮುಂದುವರಿಯಲು ಅವಕಾಶ ಮಾಡಿಕೊಟ್ಟಿದೆ.

### 3ನೇ ವ್ಯಕ್ತಿ ಜೊತೆ ಅಕ್ರಮ ಸಂಬಂಧ; ಗಂಡ, ಪ್ರಿಯಕರನಿಂದ ಮಹಿಳೆಯ ಬರ್ಬರ ಹತ್ಯೆ

**ಪಲ್ನಾಡು:** ಆಂಧ್ರಪ್ರದೇಶದಲ್ಲಿ ಮಹಿಳೆಯೊಬ್ಬರು ತನ್ನ ಪತಿ , ಪ್ರಿಯಕರನಿಂದ ದಾರುಣವಾಗಿ ಕೊಲೆಯಾಗಿದ್ದಾರೆ. ಈ ಘಟನೆ ಫೆಬ್ರವರಿ 26ರಂದು ಪಲ್ನಾಡು ಜಿಲ್ಲೆಯ ರಾಜುಪಾಲಂ ಮಂಡಲದ ಉಪ್ಪಲಪಾಡುವಿನಲ್ಲಿ ಕೋಲಾಹಲಕ್ಕೆ ಕಾರಣವಾಯಿತು. ಈ ಗ್ರಾಮದ ಕೊಟ್ಟಿಗೆಯಲ್ಲಿ 44 ವರ್ಷದ ಮಹಿಳೆಯೊಬ್ಬರು ಮೃತಪಟ್ಟಿರುವುದು ಪತ್ತೆಯಾಗಿತ್ತು. ಆಕೆಯ ಶವವನ್ನು ಪರೀಕ್ಷಿಸಿದ ಸ್ಥಳೀಯರಿಗೆ ಇದು ಕೊಲೆ ಎಂದು ಗೊತ್ತಾಯಿತು. ಕೊನೆಗೆ ಆ ಮಹಿಳೆಯ ಮಗಳ ದೂರಿನ ಆಧಾರದ ಮೇಲೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಸ್ಥಳಕ್ಕೆ ಧಾವಿಸಿ ಸಾಕ್ಷ್ಯಗಳನ್ನು ಸಂಗ್ರಹಿಸಿದ್ದರು. ತನಿಖೆ ವೇಳೆ ಆಕೆಯ ಪತಿ ಮತ್ತು ಪ್ರಿಯಕರ ಒಟ್ಟಿಗೆ ಸೇರಿ ಈ ಕೊಲೆ ಮಾಡಿದ್ದಾರೆ ಎಂದು ಕಂಡುಬಂದಿದ್ದು, ಇಬ್ಬರನ್ನೂ ಬಂಧಿಸಲಾಗಿದೆ.

### ಯಮುನಾ ಎಕ್ಸ್‌ಪ್ರೆಸ್ ವೇ ನಲ್ಲಿ ವ್ಯಾನ್‌ಗೆ ಗುದ್ದಿದ ಸ್ಲೀಪರ್ ಬಸ್, 6 ಮಂದಿ ಸಾವು

**ಲಕ್ನೋ:** ಉತ್ತರ ಪ್ರದೇಶದ ಯಮುನಾ ಎಕ್ಸ್‌ಪ್ರೆಸ್ ವೇಯಲ್ಲಿ ವ್ಯಾನ್‌ಗೆ ಸ್ಲೀಪರ್ ಬಸ್ ಡಿಕ್ಕಿ ಹೊಡೆದ ಪರಿಣಾಮ 6 ಮಂದಿ ಮೃತಪಟ್ಟಿದ್ದಾರೆ. ಬೆಳಗಿನ ಜಾವ 4.20 ರ ಸುಮಾರಿಗೆ ಸದಾಬಾದ್ ಪೊಲೀಸ್ ಠಾಣೆ ಪ್ರದೇಶದಲ್ಲಿ ಈ ಅಪಘಾತ ಸಂಭವಿಸಿದೆ ಎಂದು ಅವರು ತಿಳಿಸಿದ್ದಾರೆ. 13 ಪ್ರಯಾಣಿಕರನ್ನು ಹೊತ್ತ ವ್ಯಾನ್ ದೆಹಲಿಯ ಪ್ರೇಮ್ ನಗರದಿಂದ ರಾಜಸ್ಥಾನದ ಧೋಲ್ಪುರಕ್ಕೆ ತೆರಳುತ್ತಿದ್ದಾಗ ನೋಯ್ಡಾದಿಂದ ಗೋರಖ್ಪುರಕ್ಕೆ ಪ್ರಯಾಣಿಸುತ್ತಿದ್ದ ಸ್ಲೀಪರ್ ಬಸ್ ಹಿಂದಿನಿಂದ ಡಿಕ್ಕಿ ಹೊಡೆದಿದೆ ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಆನಂದ್ ಕುಶ್ವಾಹ ತಿಳಿಸಿದ್ದಾರೆ. ವ್ಯಾನ್‌ನಲ್ಲಿದ್ದವರೆಲ್ಲರೂ ದೆಹಲಿಯ ಪ್ರೇಮ್ ನಗರದ ನಿವಾಸಿಗಳಾಗಿದ್ದು, ಧೋಲ್‌ಪುರಕ್ಕೆ ಪ್ರಯಾಣಿಸುತ್ತಿದ್ದ ಬೇರೆ ಬೇರೆ ಕುಟುಂಬಗಳಿಗೆ ಸೇರಿದವರಾಗಿದ್ದರು. ಈ ಅಪಘಾತದಲ್ಲಿ ಮೂವರು ಮಹಿಳೆಯರು ಸೇರಿದಂತೆ ಆರು ಜನರು ಸಾವನ್ನಪ್ಪಿದ್ದಾರೆ. ವ್ಯಾನ್ ಚಾಲಕ ಯಾವುದೇ ಗಾಯಗಳಿಲ್ಲದೆ ಪಾರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಹಲವು ಮಂದಿ ಗಾಯಗೊಂಡಿದ್ದಾರೆ.

### ಇಂಡೋನೇಷ್ಯಾದ ಸುಮಾತ್ರ ದ್ವೀಪದಲ್ಲಿ 6.1 ತೀವ್ರತೆಯ ಪ್ರಬಲ ಭೂಕಂಪನ

**ಜಕಾರ್ತ:** ಇಂಡೋನೇಷ್ಯಾದ ಸುಮಾತ್ರಾ ದ್ವೀಪದಲ್ಲಿ 6.1 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ ಎಂದು ಯುನೈಟೆಡ್ ಸ್ಟೇಟ್ಸ್ ಭೂವೈಜ್ಞಾನಿಕ ಸಮೀಕ್ಷೆ ತಿಳಿಸಿದೆ. ಪೆಸಿಫಿಕ್ ರಿಂಗ್ ಆಫ್ ಫೈರ್‌ನಲ್ಲಿ ಹಲವಾರು ಟೆಕ್ಟೋನಿಕ್ ಪ್ಲೇಟ್‌ಗಳು ಒಮ್ಮುಖವಾಗುವ ಕಾರಣದಿಂದಾಗಿ ಆಗಾಗ್ಗೆ ಭೂಕಂಪನ ಚಟುವಟಿಕೆಯನ್ನು ಅನುಭವಿಸುವ ಪ್ರದೇಶವಾದ ಸುಮಾತ್ರಾ, ಬಳಿಯ ನೀರಿನಲ್ಲಿ ಕಂಪನ ಸಂಭವಿಸಿದೆ. ಸಾವುನೋವುಗಳು ಅಥವಾ ಹಾನಿಯ ಬಗ್ಗೆ ಇದುವರೆಗೂ ಯಾವುದೇ ವರದಿಯಾಗಿಲ್ಲ. ಇಂಡೋನೇಷ್ಯಾ ಭೂಕಂಪ, ಸುನಾಮಿ, ಜ್ವಾಲಾಮುಖಿ ಸ್ಫೋಟ, ಚಂಡಮಾರುತ, ಪ್ರವಾಹ, ಭೂಕುಸಿತಗಳು ಮತ್ತು ಬರ ಸೇರಿದಂತೆ ಬಹು ನೈಸರ್ಗಿಕ ಅಪಾಯಗಳಿಗೆ ಗುರಿಯಾಗುತ್ತಿರುತ್ತದೆ. ದೇಶವು ಪ್ರಬಲ ಭೂಕಂಪ ಮತ್ತು ಜ್ವಾಲಾಮುಖಿ ಚಟುವಟಿಕೆ ಮತ್ತು ತೀವ್ರ ಹವಾಮಾನ ಘಟನೆಗಳಿಗೆ ಒಡ್ಡಿಕೊಳ್ಳುತ್ತದೆ. ಇಂಡೋನೇಷ್ಯಾ ಮೆಗಾಥ್ರಸ್ಟ್ ಭೂಕಂಪಗಳ ಅಪಾಯದಲ್ಲಿದೆ. ಇವು ಅತ್ಯಂತ ಶಕ್ತಿಶಾಲಿ ಮತ್ತು 2004 ರ ಹಿಂದೂ ಮಹಾಸಾಗರದ ಭೂಕಂಪ ಮತ್ತು ಸುನಾಮಿಯಂತಹ ವಿನಾಶಕಾರಿ ಸುನಾಮಿಗಳನ್ನು ಉಂಟುಮಾಡಬಹುದು.

# ಹಾರ್ಮುಜ್ ಜಲಸಂಧಿಯಲ್ಲಿ 700 ತೈಲ ಹಡಗುಗಳು ಲಾಕ್

## • ಯುರೋಪಿಯನ್ ಗ್ಯಾಸ್ ಬೆಲೆ ಶೇ.40ರಷ್ಟು ಜಿಗಿತ, ಭಾರತದಲ್ಲಿ ಪೆಟ್ರೋಲ್, ಡಿಸೇಲ್ ಬೆಲೆ ಏರಿಕೆಯಾಗುತ್ತಾ?

**ಹೊಸದಿಲ್ಲಿ:** ಇರಾನ್ ಹಾಗೂ ಇಸ್ರೇಲ್ ಸಂಘರ್ಷದಿಂದ ಜಾಗತಿಕ ಇಂಧನ ಮಾರುಕಟ್ಟೆಯಲ್ಲಿ ತಲ್ಲಣ ಶುರುವಾಗಿದೆ. ಕಚ್ಚಾ ತೈಲ ಪೂರೈಕೆಯ ಅತ್ಯಂತ ಪ್ರಮುಖ ಮಾರ್ಗವಾಗಿರುವ ಹಾರ್ಮುಜ್ ಜಲಸಂಧಿಯಲ್ಲಿ ಸುಮಾರು 700ಕ್ಕೂ ಹೆಚ್ಚು ತೈಲ ಹಡಗುಗಳ ಸಂಚಾರ ಬಹುತೇಕ ಸ್ಥಗಿತಗೊಂಡಿದೆ. ಪೂರ್ವ-ಪಶ್ಚಿಮ ಕಚ್ಚಾ ತೈಲ ಸಾಗಣೆಯು ಬರೋಬ್ಬರಿ ಶೇಕಡಾ 86ರಷ್ಟು ಕುಸಿದಿದ್ದು, ಜಾಗತಿಕ ಇಂಧನ ಮಾರುಕಟ್ಟೆಯನ್ನು ತೀವ್ರ ಬಿಕ್ಕಟ್ಟಿನ ಅಂಚಿಗೆ ದೂಡಿದೆ. ಮ್ಯಾರಿಟೈಮ್ ಅನಾಲಿಟಿಕ್ಸ್ ಸಂಸ್ಥೆಗಳಾದ ವಿಂಡ್‌ವರ್ಡ್ ಮತ್ತು ಕೆಪ್ಲರ್ ದತ್ತಾಂಶಗಳ ಪ್ರಕಾರ, ಈ ಜಲಮಾರ್ಗವನ್ನು ಅಧಿಕೃತವಾಗಿ ಮುಚ್ಚಿಲ್ಲವಾದರೂ, ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಬಹುತೇಕ ಬಂದ್ ಆದಂತೆ ಎಂದು ಹೇಳಲಾಗುತ್ತಿದೆ. 2026ರ ದೈನಂದಿನ ಸರಾಸರಿ 19.8 ಮಿಲಿಯನ್ ಬ್ಯಾರೆಲ್‌ಗಳ ಸಾಗಣೆಗೆ ಹೋಲಿಸಿದರೆ, ಮಾರ್ಚ್ 1ರಂದು ಕೇವಲ 2.8 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಹೊತ್ತ ಕೇವಲ ಮೂರು ಟ್ಯಾಂಕರ್ ಮಾತ್ರ ಹಾರ್ಮುಜ್ ಜಲಸಂಧಿಯನ್ನು ದಾಟಿವೆ. ಮಾರ್ಚ್ 2ರ ಹೊತ್ತಿಗೆ ಕೇವಲ ಒಂದು ಸಣ್ಣ ಟ್ಯಾಂಕರ್ ಮತ್ತು ಒಂದು ಸರಕು ಸಾಗಣೆ ಹಡಗು ಮಾತ್ರ ಸಂಚರಿಸಿದೆ.

**ಜಲಸಂಧಿಯಲ್ಲಿ 706 ತೈಲ ಹಡಗುಗಳು ಲಾಕ್:** ಇದರ ಪರಿಣಾಮವಾಗಿ ಸುಮಾರು 706 ಇರಾನ್ ಯೇತರ ಟ್ಯಾಂಕರ್‌ಗಳು ಜಲಂಧಿಯ ಎರಡೂ ಬದಿಗಳಲ್ಲಿ ಸಾಲುಗಟ್ಟಿ ನಿಂತಿವೆ. ಇದರಲ್ಲಿ 334 ಕಚ್ಚಾ ತೈಲ ಕ್ಯಾರಿಯರ್‌ಗಳು, 109 ಡರ್ಟಿ ಮತ್ತು 263 ಕ್ಲೀನ್ ಪ್ರಾಡಕ್ಟ್ ಹಡಗುಗಳು ಸೇರಿವೆ. ಗಲ್ಫ್ ಆಫ್ ಒಮನ್‌ನಲ್ಲಿ ನೂರಾರು ಹಡಗುಗಳು ನಿಂತಲ್ಲೇ ನಿಂತಿದ್ದು, ನಿಗದಿತ ಸ್ಥಳಗಳು ಇಲ್ಲದೇ ಪರದಾಡುತ್ತಿವೆ.



### ಎಲ್‌ಪಿಜಿ ಪೂರೈಕೆಗೆ ಕಂಟಕ ..?

ಭಾರತವು ತನ್ನ ಸಂಸ್ಕರಿಸಿದ ಇಂಧನಗಳ ಪೈಕಿ ಶೇ.30 ರಷ್ಟು ಪೆಟ್ರೋಲ್ ಹಾಗೂ ಶೇ.25ರಷ್ಟು ಡಿಸೇಲ್ ರಫ್ತು ಮಾಡುತ್ತದೆ. ಆದ್ರೆ ಅಡುಗೆ ಅನಿಲದ ವಿಚಾರದಲ್ಲಿ ಭಾರತ ಹೆಚ್ಚು ದುರ್ಬಲವಾಗಿದೆ. ಭಾರತವು ತನ್ನ ಎಲ್‌ಪಿಸಿ ಅಗತ್ಯದ 80-85% ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ಅದರಲ್ಲಿ ಬಹುಪಾಲು ಇದೇ ಹಾರ್ಮುಜ್ ಜಲಸಂಧಿಯ ಮೂಲಕ ಗಲ್ಫ್ ರಾಷ್ಟ್ರಗಳಿಂದ ಬರುತ್ತದೆ. ಹಡಗುಗಳ ಸಂಚಾರ ಹೀಗೆಯೇ ನಿಂತರೆ, ಸದ್ಯ ಭಾರತದಲ್ಲಿರುವ ಎಲ್‌ಪಿಜಿ ದಾಸ್ತಾನು ಕೇವಲ ಎರಡು ವಾರಗಳಿಗೆ ಮಾತ್ರ ಸಾಕಾಗಬಹುದು ಎಂದು ಕೈಗಾರಿಕ ವಲಯ ಅಂದಾಜಿಸಿದೆ.

**ಮಾರುಕಟ್ಟೆ ಮೇಲೆ ತಕ್ಷಣವೇ ಪರಿಣಾಮ ಬೀರುತ್ತಾ?:** ತೈಲ ಸಂಚಾರ ಸ್ಥಗಿತಗೊಳ್ಳುತ್ತಿದ್ದಂತೆಯೇ ಮಾರುಕಟ್ಟೆ ತಕ್ಷಣವೇ ಪ್ರತಿಕ್ರಿಯಿಸಿದೆ. ಸೌದಿ ಅರೇಬಿಯಾದ ರಾಸ್ ತನುರಾ ಸಂಸ್ಕರಣಾಗಾರ ಮತ್ತು ಕತಾರ್‌ನ ಎಲ್‌ಎನ್‌ಜಿ ಘಟಕದ ಮೇಲೆ ನಡೆದ ದಾಳಿಯಿಂದಾಗಿ ಘಟಕಗಳನ್ನು ಮುಚ್ಚಲಾಗಿದ್ದು, ಬ್ರೆಂಟ್ ಕಚ್ಚಾ ತೈಲದ ಬೆಲೆ ಏ.10ರಷ್ಟು ಏರಿಕೆಯಾಗಿ ಬ್ಯಾರೆಲ್‌ಗೆ ಸುಮಾರು 80 ಡಾಲರ್‌ಗೆ ತಲುಪಿದೆ.

**ಯುರೋಪಿಯನ್ ಗ್ಯಾಸ್ ಬೆಲೆ ಶೇ.40ರಷ್ಟು ಜಿಗಿತ:** ಯುರೋಪಿಯನ್ ಗ್ಯಾಸ್ ಬೆಲೆ ಶೇ.40ರಷ್ಟು ಜಿಗಿದಿದೆ. ಈ ಸ್ಥಿತಿ ಹೀಗೆಯೇ ಮುಂದುವರಿದ್ರೆ ವಿಮೆ ಮತ್ತು ಸಾಗಣೆ ವೆಚ್ಚ ಗಗನಕ್ಕೇರಲಿದ್ದು, ಅದು ಡೈರೆಕ್ಟ್ ಆಗಿ ಜಗತ್ತಿನಾದ್ಯಂತ ಪೆಟ್ರೋಲ್ ಹಾಗೂ ಡಿಸೇಲ್ ಬೆಲೆ ಹೆಚ್ಚಳಕ್ಕೆ ಕಾರಣವಾಗಲಿದೆ. ಪರಿಸ್ಥಿತಿ ನಿಭಾಯಿಸಲು ಏಷ್ಯಾ ಹಾಗೂ ಯುರೋಪ್‌ನ ಸಂಸ್ಕರಣಾಗಾರಗಳು ಅಮೆರಿಕ, ಪಶ್ಚಿಮ ಆಫ್ರಿಕಾ, ಬ್ರೆಜಿಲ್ ಮತ್ತು ರಷ್ಯಾದ ಮೊರೆ ಹೋಗುತ್ತಿವೆ. ಗಲ್ಫ್ ತೈಲವನ್ನು ಹೆಚ್ಚು ಅವಲಂಬಿಸಿರುವ ಚೀನಾ ಮತ್ತು ಭಾರತಕ್ಕೆ ಇದು ನೇರ ಹೊಡೆತ ನೀಡಲಿದೆ.ಪಶ್ಚಿಮ ಏಷ್ಯಾದ ಈ ಸಂಘರ್ಷವು ಕೆಲವೇ ದಿನಗಳಲ್ಲಿ ಮುಗಿಯುವ ಬದಲು ವಾರಗಳ ಕಾಲ ಮುಂದುವರಿಯಬಹುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಒಂದು ಕಡೆ ದೇಶದ ಇಂಧನ ಭದ್ರತೆಯನ್ನು ಕಾಪಾಡುವುದು ಮತ್ತು ಇನ್ನೊಂದೆಡೆ ಜಾಗತಿಕ ರಫ್ತುದಾರನಾಗಿ ತನ್ನ ಜವಾಬ್ದಾರಿಯನ್ನು ನಿಭಾಯಿಸುವ ದೊಡ್ಡ ಸವಾಲು ಇದೀಗ ಭಾರತದ ಮುಂದಿದೆ.

### ಭಾರತಕ್ಕೇನು ಆತಂಕ..?

ಈ ಬಿಕ್ಕಟ್ಟಿನಿಂದ ಎಚ್ಚೆತ್ತುಕೊಂಡಿರುವ ಹೊಸದಿಲ್ಲಿ ತುರ್ತು ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ. ದೇಶಿಯ ಪೂರೈಕೆಯಲ್ಲಿ ಕೊರತೆಯಾಗದಂತೆ ಕಾಪಾಡಿಕೊಳ್ಳಲು ಭಾರತವು ತನ್ನ ಪೆಟ್ರೋಲ್ ಹಾಗೂ ಡೀಸೆಲ್ ರಫ್ತಿಗೆ ಕಡಿವಾಣ ಹಾಕುವ ಸಾಧ್ಯತೆಯಿದೆ. ಜೊತೆಗೆ ರಷ್ಯಾದಿಂದ ಕಚ್ಚಾ ತೈಲ ಆಮದು ಹೆಚ್ಚಿಸಲು ಮತ್ತು ಎಲ್‌ಪಿಜಿ ಪೂರೈಕೆಯಲ್ಲಿ ಪಡಿತರ ವ್ಯವಸ್ಥೆ ತರುವಂತಹ ಬೇಡಿಕೆ ನಿರ್ವಹಣಾ ಕ್ರಮಗಳ ಬಗ್ಗೆಯೂ ವರದಿಗಳು ಕೇಳಿ ಬರುತ್ತಿವೆ. ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಅವರು ತೈಲ ಪೂರೈಕೆಯ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ. ನಾವು ಬದಲಾಗುತ್ತಿರುವ ಪರಿಸ್ಥಿತಿಯನ್ನು ಪರಿಶೀಲಿಸಿದ್ದಾರೆ. ನಾವು ಬದಲಾಗುತ್ತಿರುವ ಪರಿಸ್ಥಿತಿಯನ್ನು ನಿರಂತರವಾಗಿ ಗಮನಿಸುತ್ತಿದ್ದೇವೆ. ದೇಶದಲ್ಲಿ ಪ್ರಮುಖ ಪೆಟ್ರೋಲಿಯಂ ಉತ್ಪನ್ನಗಳು ಎಲ್ಲರಿಗೂ ಕೈಗೆಟಕುವ ದರದಲ್ಲಿ ಲಭ್ಯವಾಗುವಂತೆ ಮಾಡಲು ಅಗತ್ಯವಿರುವ ಎಲ್ಲಾ ಹೆಜ್ಜೆಗಳನ್ನು ಇಡಲಾಗುವುದು ಎಂದು ತೈಲ ಸಚಿವಾಲಯವು ಸ್ಪಷ್ಟಪಡಿಸಿದೆ.

